CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

ಮಾಮೂಲು

ಒಂದು ಸಾಮಾಜಿಕ ನಾಟಕ

ಶಾ. ಮಂ. ಕೃಷ್ಣರಾಯ

ವಿಶ್ವಭಾರತಿ ಪ್ರಕಾಶನ
ಖಾರೆಬಾಂದ - ಮುಡಗಾಂವ

ಬೆಲೆ : ಎರಡು ರೂಪಾಯಿ

Sri Vidyabharathi Book Centre, Sringeri

MĀMOOLU

CC-O. In Public Domain. Digitized by eGangotri

A Kannada Social Play

By :
S. M. KRISHNA RAO

Copy Right : Smt. Geetadevi Krishna Rao.

First Edition : 4th November 1973

On the occasion of Karnatak Rajyotsava

Price : TWO RUPEES

Publishers :
Vishwabharati Publications
Khareband - MARGAO (GOA)

Printers :
Basavaraj Horadi
Lalita Mudranalaya
Market - Dharwar

ಈ ನಾಟಕದ ರೂಪಾಂತರ, ಭಾಷಾಂತರ, ರಂಗಭೂಮಿಯ ಪ್ರಯೋಗ ಮೊದಲಾದ ಎಲ್ಲ ಹಕ್ಕುಗಳು ಕಾದಿರಿಸಲಾಗಿದೆ. ನಾಟಕ ಪ್ರಯೋಗಾಭಿಲಾಷಿಗಳು ಪ್ರತಿಯೊಂದು ಪ್ರಯೋಗಕ್ಕೆ ಇಪ್ಪತ್ತೈದು ರೂಪಾಯಿ ಗೌರವ ಧನವನ್ನು ಅರ್ಪಿಸಿ, ಲಿಖಿತ ಅನುಮತಿ ಪಡೆಯಬೇಕು.

ಶ್ರೀಮತಿ ಗೀತಾದೇವಿ ಕೃಷ್ಣರಾಯ
ಸಾಹಿತ್ಯ ಸದನ, ಖಾರೇಬಾಂದ
ಮಡಗಾಂವ್ - ಗೋವಾ

Sri Vidyabharathi Book Centre, Sringeri

ಮಾಮೂಲು

CC-O. In Public Domain. Digitized by eGangotri

— ರೂಢಿಯಿಂದ ಕೊಡು-ಕೊಳ್ಳುವ ಕಾಣಿಕೆ.... ಇದು ಶಬ್ದಕೋಶದ ಅರ್ಥ. ಬಳಕೆಯಲ್ಲಿ ? ಇದಕ್ಕೊಂದು ವಿಶಿಷ್ಟ ಅರ್ಥ. ಭ್ರಷ್ಟಾಚಾರಕ್ಕೆ ಇದು ಪರ್ಯಾಯವಾಚಕ. ಸ್ವಖುಷಿಯಿಂದ ಕೊಡುವುದು 'ಮಾಮೂಲು'. ಆದರೆ ಇಂದು ಅದನ್ನು ಹಕ್ಕಿನಿಂದ ಕೇಳುವವರಿದ್ದಾರೆ. ಪ್ರತಿಯೊಂದು ಕೆಲಸಕ್ಕೂ ಸರಕಾರದ ಆಫೀಸುಗಳಲ್ಲಿ Fixed Rateಗಳಿವೆ. ಉದ್ರಿ ನಡೆಯುವುದಿಲ್ಲ. ಎಲ್ಲಾ ಕ್ಯಾಶ್ ಬಿಜಿನೆಸ್. ಕೊಟ್ಟವನಿಗೆ ಗೊತ್ತು ... ಏನು ?.... ಅದರ ದುಃಖ ಕೊಂಡವನಿಗೆ ಗೊತ್ತು....ಏನು....? ಅದರ ಆನಂದ. ಇಬ್ಬರೂ ಬಾಯಿ ಬಿಡುವಂತಿಲ್ಲಿ.

ಕೇವಲ ಸರಕಾರಿ ಆಫೀಸುಗಳಲ್ಲಿಯೇ ಈ ಭ್ರಷ್ಟಾಚಾರ ಇದೆಯೆಂದು ಹೇಳಿದರೆ ಪಾಪ, ಅನೇಕರಿಗೆ ಅನ್ಯಾಯ ಮಾಡಿದಂತೆ. ಇದು ಪರಮಾತ್ಮನಂತೆ ವಿಶ್ವವ್ಯಾಪಿ. ಖಾಸಗಿ ಸಂಸ್ಥೆಗಳು, ಧರ್ಮ ಸಂಸ್ಥೆಗಳು, ಲೋಕೋಪಯೋಗಿ, ಲೋಕೋಪಕಾರಿ, ರಾಜಕೀಯ, ಶೈಕ್ಷಣಿಕ ಸಂಸ್ಥೆಗಳಲ್ಲೂ ಭ್ರಷ್ಟಾಚಾರದ ರುದ್ರತಾಂಡವ ನಡೆದಿದೆ. ಮನೆಯಿಂದ ಮಠದವರೆಗೆ, ರಾಜನಿಂದ ರಂಕನವರೆಗೆ, ಕಂತ್ರಿಯಿಂದ ಮಂತ್ರಿಯವರೆಗೆ, ಪ್ರಾಥಮಿಕ ಶಾಲೆಯಿಂದ ವಿಶ್ವವಿದ್ಯಾಲಯದ ವರೆಗೆ ಈ ಅಗೋಚರ, ಅನಂಗ, ಅನಂತನಾದ ಭ್ರಷ್ಟಾಸುರ ಕಾಲುಚಾಚಿದ್ದಾನೆ. ದೇವರು ರಾಕ್ಷಸರ ದಮನಕ್ಕೆ ಹತ್ತು ಅವತಾರಗಳನ್ನೆತ್ತಿದ್ದನಂತೆ! ಆದರೆ ಈ ರಾಕ್ಷಸ ? ಪರಮಾತ್ಮನ ದಶಾವತಾರವಲ್ಲ, ಶತಾವತಾರಕ್ಕೂ ದಮನಿಸಲಾರದಷ್ಟು ಪ್ರಚಂಡವಾಗಿ ಬೆಳೆದಿದ್ದಾನೆ. ಈ ಅಸುರಶಕ್ತಿಯೊಂದಿಗೆ ಸೆಣಸುವವನು ಅಷ್ಟೇ ಗಂಡೆದೆಯವನಿರಬೇಕು. ತನ್ನ ಅರಿವು–ಇರುವುಗಳಿಗೆ ತಿಲಾಂಜಲಿ ಅರ್ಪಿಸಿ ಹೋರಾಟದ ಕಣಕ್ಕಿಳಿಯಬೇಕು. ಇಲ್ಲಿ ಸತೀಶ ಆ ಮೂರ್ಖತನ ಮಾಡಿದ್ದಾನೆ.

ದೇಶಕ್ಕೆ ಸ್ವಾತಂತ್ರ್ಯ ಸಿಕ್ಕಿತು. ಆದರೆ ಅನೇಕರ ಬುದ್ಧಿಗೆ ? ....ಇದ್ದನರಿಗೆ ಈ ಪ್ರಶ್ನೆ. ಸತ್ಯ-ಅಹಿಂಸೆ, ದಯೆ, ಪ್ರಾಮಾಣಿಕತೆ, ವಿಶ್ವಬಾಂಧವ್ಯ ಕೇವಲ ಆಢ್ಯತೆಯ ಪ್ರದರ್ಶನದ ಸಂಕೇತಗಳೇ ? ಈ ಶಬ್ದಗಳಿಂದ, ತಮ್ಮ ಅರ್ಥವನ್ನು ಕಳೆದುಕೊಂಡು ಸವಕಲು ನಾಣ್ಯಗಳಾಗಿವೆಯೆ ? ಹೃದಯವಂತಿಕೆ, ಮಾನವತೆ, ಪ್ರೀತಿ-ವಿಶ್ವಾಸ, ವಾತ್ಸಲ್ಯ, ಗೌರವಗಳಿಂದು ಸ್ವಾರ್ಥಪೂರಿತವಾಗಿವೆಯೆ ? ಈ ಪ್ರಶ್ನೆಗಳಿಗೆಲ್ಲಿದೆ ಉತ್ತರ ? ಸಮಸ್ಯೆಗೆ ಪರಿಹಾರ ಹುಡುಕಲಿ ಆತ್ಮವುಳ್ಳವರು. ಇಂಥ ಅನೇಕ ಶಬ್ದಗಳಿಂದು ಜೀವಂತವಾಗಿ ಇವೆ. ಎಲ್ಲಿ ? ಮಾನವರ ಎದೆಗೂಡಿನಲ್ಲಿ ಅಲ್ಲ....ಡಿಕ್ಶನರಿಯಲ್ಲಿ!

ಭ್ರಷ್ಟಾಚಾರದ ಪರಿಣಾಮ ದೇಶದ ಆಗುಹೋಗುಗಳ ಮೇಲೆ ಆಗದೆ ? ಮಂತ್ರಿಗಳು, ಶಾಸಕರು, ಧುರೀಣರು, ಜನನಾಯಕರು ಎಷ್ಟರಮಟ್ಟಿಗೆ

Sri Vidyabharathi Book Centre, Sringeri

ಪ್ರಾಮಾಣಿಕರಿದ್ದಾರೆ? ಬೇಲಿಯೇ ಎದ್ದು ಹೊಲ ಮೇಯ್ದರೆ ಹೇಗೆ? ಇಷ್ಟೊಂದು ಅಧಿಕಾರಿಗಳು, ಆಫೀಸುಗಳಿದ್ದರೂ ಪ್ರತಿಯೊಂದು ಕಾರ್ಯಕ್ಕೂ ಆಗುವ ವಿಲಂಬಕ್ಕೆ ಕಾರಣರಾರು? ಸರಕಾರಗಳು ಸಾವಿರಾರು ರೀತಿಯಲ್ಲಿ ಜನತೆಯಿಂದ ಪ್ರತ್ಯಕ್ಷ-ಪರೋಕ್ಷವಾಗಿ ಹಣ ವಸೂಲಿ ಮಾಡುತ್ತವೆ. ಏಕೆ? ದೇಶದ ಒಳತಿಗಾಗಿ, ಅಭಿವೃದ್ಧಿಗಾಗಿ, ಉತ್ಕರ್ಷಕ್ಕಾಗಿ, ಕಲ್ಯಾಣಕ್ಕಾಗಿ. ಸರಕಾರದ ಬೊಕ್ಕಸಗಳಿಗೆ ಸೇರಿದ ಹಣದ ಸದುಪಯೋಗವಾಗಿದೆಯೆ? ಮಿತವ್ಯಯ ಸಾಧಿಸಲಾಗಿದೆಯೆ? ಇದು ಸಾರ್ವಜನಿಕರ ಬೆವರಿನ ಹಣ ಎಂಬ ಪ್ರಜ್ಞೆ ಆಡಳಿತಗಾರರಿಗಿದೆಯೆ? ಸರಕಾರಕ್ಕೆ Utilization Certificate ಯಾರು ಕೊಡಬೇಕು? ಇದನ್ನು ಕೇಳುವ ಎದೆಗಾರಿಕೆ ಎಷ್ಟು ಜನರಿಗಿದೆ? ಶಾಸನ ಸಭೆಗಳಲ್ಲಿ ಕಚ್ಚಾಡಿ ಕೊನೆಗೆ ಮಂತ್ರಿಗಳ ಮನೆಗೆ ಹೋಗಿ ಅಂಗಲಾಚುವ ಶಾಸಕರಿಲ್ಲವೆ? 'ಮಾಮೂಲು' ಕೇಳಿದವರಿಗೆ ಕೊಡುವುದಿಲ್ಲವೆಂದು ಹೇಳುವ ಗಂಡೆದೆ ಎಷ್ಟು ಜನಕ್ಕಿದೆ. ಚಪ್ಪಾಳೆ ಒಂದು ಕೈಯಿಂದ ತಟ್ಟುವುದಿಲ್ಲ. ಕೇವಲ ಸರಕಾರವನ್ನೇ ದೂಷಿಸಿದರೆ ಏನು ಬಂತು? ನಾವು ಎಷ್ಟರ ಮಟ್ಟಿಗೆ ಪ್ರಾಮಾಣಿಕರು ಎಂಬ ಒಗಟಿಕೆ ಉತ್ತರ ಇದೆಯೆ? ಮಂತ್ರಿಗಳು, ಶಾಸಕರು, ಪುಢಾರಿಗಳು ಲಂಚ ನಿರ್ಮೂಲನಕ್ಕೆ ಪಣ ತೊಡುತ್ತಲೇ ಬಂದಿದ್ದಾರೆ. ಆದರೆ ಅಂಥ ಮಹನೀಯರು ಚುನಾವಣೆಯ ಮೊದಲು ಎಷ್ಟು ಆಸ್ತಿ ಪಡೆದಿದ್ದರು. ಆ ಬಳಿಕ ಅವರು ಸಂಪಾದಿಸಿದ್ದೆಷ್ಟು? ಅಧಿಕಾರ ಸ್ಥಾನದಲ್ಲಿರುವವರ ರಾಜವೈಭೋಗಕ್ಕೆಲ್ಲಿಂದ ಹಣ ಬಂತು? ಇದನ್ನು ಪರಿಶೀಲಿಸುವವರಾರು? ಯಾಕೆ ಕೇಳುವುದಿಲ್ಲ? ಎಲ್ಲರೂ ಮಾಡುವುದು ಅದೇ. ಒಬ್ಬೊಬ್ಬರದು ಒಂದೊಂದು ಮಾರ್ಗ. ಅನ್ಯರ ಹುಳುಕು ಬಯಲಿಗೆಳೆದರೆ ತನ್ನ ಹುಳುಕು ಬಯಲಿಗೆ ಬರುತ್ತದೆಯೆಂಬ ಭಯ. ದೇಶಭಕ್ತಿಯ, ಧರ್ಮಶ್ರದ್ಧೆಯ ಹೆಸರಿನಲ್ಲಿ ನಡೆಯುವ ಅನಾಚಾರಗಳಿಗೆ ಲೆಕ್ಕವಿದೆಯೆ? ಬಡ ಜನತೆಯ ಕಣ್ಣಿಗೆ ಮಣ್ಣೆರಚುವ ಘೋಷಣೆಗಳ ಸುಗ್ಗಿ ಕಾಲ— ಚುನಾವಣೆ. ಅನಂತರ? ಯಾರು, ಯಾರಿಗೆ, ಏನು ಕೇಳಬೇಕು? ಮತ (Vote) ನೀಡುವ ಪ್ರತಿಯೊಬ್ಬ ನಾಗರಿಕ ತನ್ನ ಮತದಾನದ ಬೆಲೆಯೇನು, ಗೊತ್ತುಗುರಿಗಳೇನು ಎಂಬುದನ್ನು ಮನಗಾಣುವವರೆಗೂ ಈ ಪರಿಸ್ಥಿತಿಗೆ ಪರಿಹಾರವಿಲ್ಲ. ಮತಗಳನ್ನು ಹಣದಾಶೆಗೆ, ಘೋಷಣೆಗಳಿಗೆ ಮರುಳಾಗಿ ಮಾರುವವರೆಗೂ ನಿಜವಾದ ಪ್ರಜಾಪ್ರಭುತ್ವ ಅರ್ಥೈಸುವ ಪ್ರಜ್ಞೆ ಮತದಾರರಲ್ಲಿ ಮೂಡುವದು ಸಾಧ್ಯವಿಲ್ಲ.

ಸರಕಾರದ ಕಾಯಿದೆ–ಕಾನೂನುಗಳಿಂದ ಲಂಚನಿರ್ಮೂಲನ ಮಾಡುತ್ತೇವೆನ್ನುವುದು ಬರಿಯ ಭ್ರಾಂತಿ. ಅನ್ಯರ ಪ್ರೇರಣೆಯಿಂದಾಗುವ ಕೆಲಸವಿದಲ್ಲ. ಬಹುಸಂಖ್ಯಾಕರು ಅಶಿಕ್ಷಿತರಿರುವ ಈ ದೇಶದಲ್ಲಿ ಸೂಕ್ತ ಶಿಕ್ಷಣದ ಏರ್ಪಾಡು ಆಗಬೇಕು. ಸರಕಾರದ [illegible] ' ಸುಶಿಕ್ಷಿತ

CC-O. In Public Domain. Digitized by eGangotri
Sri Vidyabharathi Book Centre, Sringeri

ರಿಗಿಂತ ತಮ್ಮ ಮನೆ, ಗ್ರಾಮ, ನಾಡು. ದೇಶಗಳ ಪರಿಸ್ಥಿತಿಯನ್ನು ಅರ್ಥೈಸುವ ಸುಶಿಕ್ಷಿತರು, ಸುಸಂಸ್ಕೃತರು ನಮಗೆ ಬೇಕು. ಇಲ್ಲಿಯವರೆಗೆ ಪರಿಸ್ಥಿತಿ ದಿನದಿನಕ್ಕೆ ಹದಗೆಡುತ್ತದೆ. ದಡ್ಡರಾದವರನ್ನು ರಕ್ಷಿಸುವುದು ಯಾವ ದೇವನಿಂದಲೂ ಸಾಧ್ಯವಿಲ್ಲ.

CC-O. In Public Domain. Digitized by eGangotri

ಈ ನಾಟಕದ ಅಂತ್ಯ (Ending) ಕೆಲ ಆದರ್ಶವಾದಿಗಳಿಗೆ ರುಚಿಸದಿರಬಹುದು. ಸಿನೇಮಾ, ನಾಟಕಗಳಲ್ಲಿ ಈ ಬಗೆಯ ಕೊನೆಯನ್ನು ಜನತೆ ನೋಡಲು ಇಷ್ಟಪಡುವುದಿಲ್ಲ. ನಿಜಜೀವನದಲ್ಲಿ? ಕಲ್ಪನೆಗೂ ಮಿಗಿಲಾದ ಘಟನೆಗಳು ಜರುಗುತ್ತವೆ. ಸಾಹಿತ್ಯದಲ್ಲಿ ದುರಂತವನ್ನು ನೋಡಿ ಪ್ರತಿಭಟಿಸುವವರು ಸಮಾಜದಲ್ಲಿ ನಡೆದ ಅಕ್ರಮ-ಅವ್ಯವಹಾರ-ಅನಾಚಾರಗಳನ್ನು ನೋಡಿ ಪ್ರತಿಭಟಿಸುವುದಿಲ್ಲ. ಕಾನೂನು ಕೆಲವು ಬಾರಿ ನ್ಯಾಯ ನೀಡುವಲ್ಲಿ ವಿಫಲವಾಗುತ್ತದೆ. ನಿರಪರಾಧಿಗಳು ಅನೇಕ ಸಲ ಶಿಕ್ಷೆಗೆ ಗುರಿಯಾಗುತ್ತಾರೆ. ಕಾರಣ? ಕಾನೂನುಗಳಲ್ಲಿರುವ ಶೈಥಿಲ್ಯ; ಏಕಮುಖ ವಿಚಾರಸರಣಿ. ಅವಾಸ್ತವ ಸಿದ್ಧಾಂತ, ರಾಜಕೀಯ ಪ್ರಭಾವ, ರೂಢಮೂಲವಾದ ನಂಬಿಕೆಗಳು ಒಂದು ದೃಷ್ಟಿಯಿಂದ ಇದು ಸತೀಶನ ದುರಂತಕಥೆ. ಇನ್ನೊಂದು ದೃಷ್ಟಿಯಿಂದ ಸಮಕಾಲು ಆದರ್ಶವನ್ನು ಬೆಂಬತ್ತಿದವನಿಗೆ ಸಮಾಜದಿಂದ ಸಿಗುವ ಪುರಸ್ಕಾರ.

ಉಪದೇಶದಿಂದ, ಆದರ್ಶಮಯ ಕಥೆಗಳಿಂದ ದೇಶ ಸುಧಾರಿಸುತ್ತೇನೆನ್ನುವುದು ಮೂರ್ಖತನ. ಕಾಯಿದೆ-ಕಾನೂನುಗಳಿಂದ ಆದರ್ಶ ರಾಜ್ಯ-ರಾಮರಾಜ್ಯ ನಿರ್ಮಿತಿ ಸಾಧ್ಯವಿಲ್ಲ. ರಾಮಾಯಣವನ್ನೋದಿದವರೆಷ್ಟು ಮಂದಿ ಶ್ರೀರಾಮರಾಗಿದ್ದಾರೆ? ಮಹಾಭಾರತ ಪಾರಾಯಣ ಮಾಡಿದವರೆಷ್ಟು ಮಂದಿ ಧರ್ಮರಾಜರಾಗಿದ್ದಾರೆ? ಸತ್ಯ ಹರಿಶ್ಚಂದ್ರನ ನಾಟಕ ನೋಡಿದವರೆಷ್ಟು ಜನ ಮಹಾತ್ಮಾ ಗಾಂಧಿಯಾಗಿದ್ದಾರೆ? ವಾಸ್ತವ ಚಿತ್ರವನ್ನು ಮರೆಮಾಚಿ ಕಾಲ್ಪನಿಕ ಆದರ್ಶಪಾತ್ರಗಳನ್ನು ನಿರ್ಮಿಸುವ ಸಾಹಿತಿ ನಿರ್ಜೀವ ಗೊಂಬೆಗಳನ್ನು ನಿಲ್ಲಿಸಬಹುದು. ಅದು ಸಮಕಾಲೀನ ಜೀವನದ ವಾಸ್ತವ ಚಿತ್ರಣವೆ? ಆದರ್ಶ ಸಾಹಿತ್ಯವನ್ನು ಬಯಸುವವರು ತಮ್ಮ ಮನೆ, ಪರಿಸರ ಮೊದಲು ಸುಧಾರಿಸಲಿ. ತನ್ನನ್ನು ತಾನು ಸುಧಾರಿಸಿಕೊಂಡರೆ ಸಾಕು. ಜಗತ್ತೇ ಸುಧಾರಿಸಬಲ್ಲುದು. ಅನ್ಯರನ್ನು ಸುಧಾರಿಸುವ ಗೋಜಿಗೆ ಹೋಗದಿದ್ದರೆ ಸಾಕು. ಅದೇ ಅವನು ಸಮಾಜಕ್ಕೆ ಮಾಡುವ ದೊಡ್ಡ ಉಪಕಾರ.

ಹಿಂದೊಮ್ಮೆ ಮಂತ್ರಿ ಮಹೋದಯರು ಭ್ರಷ್ಟಾಚಾರ ನಿರ್ಮೂಲನೆಯ ಭೀಷ್ಮಪ್ರತಿಜ್ಞೆಗೈದು ಸಾಕಷ್ಟು ಬೆಂಬಲ ಸಿಗದೆ; ತಾವೇ ತಮ್ಮ ಪದವಿಗೆ ರಾಜೀನಾಮೆ ನೀಡಿ ಹೊರಬಂದರು. ಇದು ೮-೯ ವರ್ಷಗಳ ಹಿಂದಿನ ಮಾತು. ಅಂದಿನಿಂದಲೂ ಈ ವಿಷಯ ನನ್ನ ತಲೆಯಲ್ಲಿ ನಾಟಕದ ರೂಪ ಪಡೆಯುತ್ತ ಬಂತು. ಅನಂತರ ನಡೆದ ಅನೇಕ ಘಟನೆಗಳು ಈ 'ವಸ್ತು' ಅಭಿವ್ಯಕ್ತಗೊಳ್ಳಲು ಸಹಾಯಕವಾಯಿತು.

Sri Vidyabharathi Book Centre, Sringeri

‘ನಾಟಕ ಬರೆಯಿರಿ, ಆಡಿಸೋಣ’ ಎಂದು ಅನೇಕ ಬೆಂಗಳೂರಿನ ಮಿತ್ರರು ಅಪೇಕ್ಷಿಸಿದರು. ಕಥಾವಸ್ತು ಕಲಾವಿದ ಮಿತ್ರ ಕೆ. ಬಿ. ಕುಲಕರ್ಣಿCC-O. In Public Domain. Digitized by eGangotri ಯವರಿಗೆ ಹೇಳಿದೆ. ಅವರು ಒಂದೇ ವಾರದಲ್ಲಿ ಮುಖಚಿತ್ರ ಬರೆದು ಬ್ಲಾಕ ಮಾಡಿಸಿ ಕಳಿಸಿಕೊಟ್ಟರು. ಇಂದಿಗೆ ಒಂದೂವರೆ ವರ್ಷದ ಹಿಂದೆ. ನಾನು ಮಾತ್ರ ಒಂದು ವಾಕ್ಯವನ್ನೂ ಬರೆಯದೆ ‘ವಸ್ತು’ ಮೆಲಕು ಹಾಕುತ್ತಲೇ ಇದ್ದೆ. ಕುಲಕರ್ಣಿ ಈ ನಾಟಕ ನಿರ್ಮಿತಿಗೆ ಪ್ರಥಮ ಕಾರಣೀಭೂತ.

ಸಿದ್ದಾಪುರಕ್ಕೆ ಹೋದಾಗ ‘ಮಾಮೂಲು’ ಬರೆದು ಮುಗಿಸಿದ್ದೇನೆ ಎಂದು ಬುರುಡೆಬಿಟ್ಟೆ. ಪ್ರತಿವರ್ಷವೂ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಕರ್ನಾಟಕ ಸಂಘದ ಆಧಾರಸ್ತಂಭರೆನಿಸಿದ ಶ್ರೀ ಕೆ. ಕೆ. ರಮಣಿಯವರು ನನ್ನ ಮಾತು ನಿಜವೆಂದೇ ನಂಬಿ ‘ಹಸ್ತಪ್ರತಿ ಕೂಡಲೇ ಕಳಿಸಿ. ನಾವೇ ಮೊದಲು ಆಡುತ್ತೇವೆಂ’ದರು. ಆದರೆ ನಾನು ಬರೆಯಬೇಕಲ್ಲ. ನಾಟಕ (ರಮಣಿಯವರಿಗೆ ಅನೇಕ ಸಾಹಿತಿಗಳ ಸಹವಾಸ ಉಂಟು.) ಆದರೆ ರಮಣಿಯವರು ಬಿಡಬೇಕಲ್ಲ. ಎಂದೆಂದೂ ಪತ್ರ ಬರೆಯದ ರಮಣಿಯವರು ಪತ್ರದ ಸುರಿಮಳೆ ಆರಂಭಿಸಿದರು. ವಿನಂತಿ ಆಯಿತು, ಆಜ್ಞೆ ಆಯಿತು, ಸೂಚನೆ ಆಯಿತು. ಕೊನೆಗೆ ನೋಟೀಸೂ ಹೊರಡಿಸಿದರು. ಇನ್ನು ವಾರಂಟ್ ಹೊರಡಿಸುವುದೊಂದೇ ಬಾಕಿ. ಕೂಡಲೇ ಕಳಿಸದಿದ್ದರೆ ಧರಣಿ ಕುಡುತ್ತೇನೆಂದರು. ಈ ಬ್ರಹ್ಮಾಸ್ತ್ರಕ್ಕೆ ನಾನು ಅಂಜಿದೆ. ಅವರ ದವಡೆಯಿಂದ ತಪ್ಪಿಸಿಕೊಳ್ಳಲು ‘ಮಾಮೂಲು’ ಬರೆದು ಮುಗಿಸಿದೆ. ಸಿದ್ದಾಪುರ ನಗರ ಸಭೆಯ ಅಧ್ಯಕ್ಷರಾದ ಶ್ರೀ ಗೋವಿಂದ ಶಾನಭಾಗ ದಿಗ್ದರ್ಶನ ಹೊಣೆ ಹೊತ್ತರು.

ಈ ನಾಟಕ ಬರೆದ ಕೇವಲ ೨೫ ದಿನಗಳಲ್ಲಿಯೇ ರಂಗಭೂಮಿಗೆ ತಂದ ಕೀರ್ತಿ ಸಿದ್ದಾಪುರ ಕರ್ನಾಟಕ ಸಂಘದ ಸಹೃದಯ ಕಲಾವಿದ ಮಿತ್ರರಿಗೆ ಸಲ್ಲಬೇಕು. ನನ್ನ ಕಾಲ್ಪನಿಕ ಪಾತ್ರಗಳಿಗೆ ಅಭಿನಯದಿಂದ ಜೀವಕಳೆ ತುಂಬಿದ ಎಲ್ಲರೂ ಅಭಿನಂದನಾರ್ಹರು. ದಿಗ್ದರ್ಶಕ ಗೋವಿಂದ ಶಾನಭಾಗ, ಸೂತ್ರಧಾರ ರಮಣಿ, ಕರ್ನಾಟಕ ಸಂಘದ ಆಡಳಿತ ವರ್ಗ, ಮಿತ್ರರಾದ ದಯಾನಂದ ತೊರ್ಕೆ. ಶ್ರೀ ಸಂಜೀವ ರಾಯ್ಕರ್, ಸೋಮಶೇಖರ, ಎಂ. ಎನ್. ಬೆಟಗೇರಿ, ಬಿ. ಎಸ್. ಸಾಧನಿ, ವೀರೇಗೌಡ ಮೊದಲಾದ ನನ್ನ ಆತ್ಮೀಯ ಸ್ನೇಹಿತರಿಗೆ, ಮುಖಚಿತ್ರ ಅಂದವಾಗಿ ಮುದ್ರಿಸಿದ ರವೀಂದ್ರ ಮುದ್ರಣಾಲಯ, ನಾಟಕ ಅಂದವಾಗಿ ಮುದ್ರಿಸಿದವರಿಗೂ ಮಾಮೂಲು ಕೃತಜ್ಞತೆಗಳು ಬೇಕೆ? ಎಲ್ಲರಿಗೂ ಋಣಭಾರದಿಂದ ತಲೆಬಾಗುತ್ತೇನೆ.

Sri Vidyabharathi Book Centre, Sringeri
[illegible] ಕೃಷ್ಣರಾಯ

CC-O. In Public Domain. Digitized by eGangotri
ಸಿದ್ದಾ[illegible] ನಾಟಕದ
ಮೊದಲ ಪ್ರಯೋಗ ೪–೧೧–೧೯೭೩ರಂದು ರಾಜ್ಯೋತ್ಸವದ ಅಂಗವಾಗಿ
ಸಿ. ಆರ್ ಹಾಲ್‌ನಲ್ಲಿ ಅಭಿನಯಿಸಿದಾಗ ಪಾಲ್ಗೊಂಡವರು

ಪಾತ್ರ ಪರಿಚಯ :

ಅಭಿನಯಿಸಿದವರು

ಸತ್ಯಪ್ಪ	....	ಮನೆ ಆಳು	....	ಶ್ರೀ ಎಸ್. ಜಿ. ಭಟ್ಟ
ಸತೀಶ	....	ಇಂಜನೀಯರ	....	ಶ್ರೀ ಕೆ. ಕೆ. ರಮಣಿ
ಶೀಲಾ	....	ಸತೀಶನ ಹೆಂಡತಿ	....	ಶ್ರೀ ಆಗ್ನೇಲ್ ಫರ್ನಾಂಡೀಸ
ಮಮತಾ	....	ಸತೀಶನ ಮಗಳು	....	ಕುಮಾರಿ ಕುಸುಮಾ ಫಾತರಪೇಕರ
ನಂಜಣ್ಣಾ	....	ಸಾವುಕಾರ	....	ಶ್ರೀ ಗೋಪಾಲಕೃಷ್ಣ ಪಂಡಿತ
ನಕುಲ	....	ಸಾವುಕಾರನ ಸೆಕ್ರೆಟರಿ		ಶ್ರೀ ಪಿ. ಸೋಮಶೇಖರ
ಶೀನಪ್ಪ	....	ಮನೆ ಮಾಲಿಕ	....	ಶ್ರೀ ಸದಾನಂದ ಭಟ್ಟ
ಜಾನಿ	....	ಹಿಪ್ಪಿ (ಶೀಲಳ ತಮ್ಮ)		ಶ್ರೀ ಆರ್. ಕೆ. ಹೊನ್ನೆಗುಂಡಿ
ಸಿದ್ದಪ್ಪ	....	ಹಾಲು ಮಾರುವವ	....	ಶ್ರೀ ಸಿ. ಆರ್. ಹೆಗಡೆ
ಡಾಕ್ಟರ	....	....	....	ಶ್ರೀ ಚಂದ್ರಶೇಖರ
ಆಲಮಟ್ಟಿ	....	ಕಿರಾಣಿ ವರ್ತಕ	....	ಶ್ರೀ ವಿ. ಕೆ. ಹೊಸೂರ
ಪಿ. ಎಸ್. ಐ.	....	....	....	ಶ್ರೀ ವಿ. ಕೆ. ಹೊಸೂರ
ಕಾನಸ್ಟೆಬಲ್	....	....	....	ಶ್ರೀ ಎಸ್. ಜಿ. ಹೊನ್ನೆಗುಂಡಿ

ಸಂಗೀತ :

ಶ್ರೀ ಗೋವಿಂದ ಶಾನಭಾಗ
ಶ್ರೀ ಎಂ. ಎನ್. ಬೆಟಗೇರಿ
ಶ್ರೀ ಎಸ್. ಆರ್. ಹೆಗಡೆ
ಶ್ರೀ ಆರ್. ಕೆ. ಹೊನ್ನೆಗುಂಡಿ
ಶ್ರೀ ಎಸ್. ಎನ್. ರಾಯ್ಕರ
ಶ್ರೀ ಎನ್. ಎಂ. ಇಡ್ಕನ್

ಮೇಕಪ್ :

ಶ್ರೀ ಸಂಜೀವ ರಾಯ್ಕರ ಮತ್ತು
ಶ್ರೀ ಗೋವಿಂದ ಶಾನಭಾಗ

ರಂಗಸಜ್ಜಿಕೆ, ಪ್ರಕಾಶ ಯೋಜನೆ :

ಶ್ರೀ ಪಾಂಡುರಂಗ ಸೆಟ್ಟಿ

ದಿಗ್ದರ್ಶಕ : ಶ್ರೀ ಗೋವಿಂದ ಶಾನಭಾಗ

Sri Vidyabharathi Book Centre, Sringeri

CC-0. In Public Domain. Digitized by eGangotri

ಇದೇ ಲೇಖಕರ ಇತರ ಕೃತಿಗಳು:

೧ ರಾಜಧರ್ಮ — ೨-೦೦
ಮೂರಂಕಿನ ಪೌರಾಣಿಕ ನಾಟಕ

೨ ದೇವಭೂಮಿ ಗೋಮಂತಕ — ೪-೦೦
ಗೋವೆಯ ಎಲ್ಲ ಹಿಂದೂ ದೇವಾಲಯಗಳ ಚರಿತ್ರೆ

೩ ಸೌಂದರ್ಯನಿಧಿ ಗೋವಾ (Goa Guide) — ೧-೫೦
ಗೋವಾ ಪ್ರವಾಸಿಗಳ ಮಾರ್ಗದರ್ಶಿಕೆ

೪ ಬಂಡಲ್ ಬಹದ್ದೂರ್ — ೧-೫೦
ಮೂರಂಕಿನ ನಗೆ ನಾಟಕ ಒಂದೇ ಸ್ತ್ರೀ ಪಾತ್ರ

೫ ಮುತ್ಯಾಳರು — ೨-೦೦
ಮೂರಂಕಿನ ನಗೆ ನಾಟಕ ಒಂದೇ ಸ್ತ್ರೀ ಪಾತ್ರ

೬ ಗೋವಾ ಕದಂಬ ಕುಲ — ೧-೫೦
ಗೋವಾ ಕದಂಬರ ಇತಿಹಾಸ. ಮಕ್ಕಳಿಗಾಗಿ

೭ ರಶ್ಮಿ — ೨-೫೦
ಕವನ ಸಂಚಯ

೮ ರಸಚೇತನ — ಸಂಪಾದನೆ — ೨೫-೦೦
ಅ. ನ. ಕೃ. ಗೌರವ ಗ್ರಂಥ. ೧೦೫ ಬರಹಗಾರರು,
೮೦೦ ಪುಟ

೯ ಚಿರಚೇತನ — ಸಂಪಾದನೆ — ೧೨-೦೦
ಅ. ನ. ಕೃ. ಗ್ರಂಥ. ಆಯ್ದ ಮುನ್ನುಡಿಗಳು.
೪೦೦ ಪುಟ

೧೦ ಸಮರಸ
ವಿಶೇಷ ಸಂಚಿಕೆ

ನಮ್ಮ ಮುಂಬರುವ ಪ್ರಕಟನೆಗಳು:

(i) ಲಕ್ಷ್ಮಣ ರೇಷಾ ಕಥಾಸಂಗ್ರಹ
(ii) ಅಗ್ನಿಕುಂಡ ಕಾದಂಬರಿ — ದಯಾನಂದ ತೊರ್ಕೆ
(iii) ಉತ್ತರಭೂಪ — ಸಂ. : ಬೀChi
(iv) ತಿಂಮದರ್ಶನ — ಸಂ. : ಶಾ. ಬಾ. ಕೃಷ್ಣರಾಯ

Sri Vidyabharathi Book Centre, Sringeri

CC-O. In Public Domain. Digitized by eGangotri



ನಿನಗೆ ಸುಳ್ಳು ಹೇಳ್ತೀನೇ

ನಾನೂ ಬೀಡಿ ಸೇತ್ತೀನಿ

ಈಹೊತ್ತಿನ ತಾರೀಖು ಎಷ್ಟು ?

Sri Vidyabharathi Book Centre, Sringeri

CC-O. In Public Domain. Digitized by eGangotri

ಆದಕ್ಕೆ ನೀನೇನು ಹೇಳಿದೆ ?

ಹೇಳೋದೆಲ್ಲ ಕೋರ್ಟಿನಲ್ಲಿ ಹೇಳಿ

ನಾನು ಫ್ರಾಂಕ ಆಗಿ ಹೇಳ್ತೀನಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಹೌಂದರೀ ...
ಹೌಹಾರೇ ಬಿಟ್ಟೇನಿ

ಹರೇ ರಾಮ
ಹರೇ ಕೃಷ್ಣ

Sri Vidyabharathi Book Centre, Sringeri

CC-O. In Public Domain. Digitized by eGangotri

ಮೋತೀಲಾಲ
ನಮ್ಮ
ಕುಲೋಜ್ ಫ್ರೆಂಡ್ಸು

ಸದ್ಗುರೂ....
ಶ್ರೀಹರೀ

Sri Vidyabharathi Book Centre, Sringeri

CC-O. In Public Domain. Digitized by eGangotri

[ಸಂಕೇತ : ಒಂದು ಗಿಡ. ಅದು ಮನೆಯ ಕಿಟಕಿಯಿಂದ ಪ್ರೇಕ್ಷಕರಿಗೆ ಕಾಣುತ್ತಿದೆ. ಅದು ಮನೆಯ ಮುಂಬದಿಯ ಕಿಟಕಿ. ಆ ಕಿಟಕಿಯ ಎಡಬದಿಯಲ್ಲಿ ಮನೆಯ ಹೊರಬಾಗಿಲು ಇದೆ. ಒಳಗೆ ಬಂದೊಡನೆ ಕಾಣುವುದು ಹಜಾರ. ಅಲ್ಲಿ ಖುರ್ಚಿ, ಸೋಫಾ, ತಿಪಾಯಿಗಳಿವೆ. ತಿಪಾಯಿಯ ಮೇಲೆ ಹಿಂದಿನ ದಿನಪತ್ರಿಕೆಗಳು, ವಾರ-ಮಾಸ ಪತ್ರಿಕೆಗಳು ಬಿದ್ದಿವೆ. ಅವುಗಳ ಮೇಲೊಂದು ಹಾಲಿನ ಪಾತ್ರೆ ಇದೆ. ಹಜಾರದ ವಾಮಪಾರ್ಶ್ವದಲ್ಲಿ ಒಂದು ಸ್ಟೂಲು, ಅದರ ಮೇಲೊಂದು ರೇಡಿಯೋ. ರೇಡಿಯೋ ಪೆಟ್ಟಿಗೆಯ ಮೇಲೆ ಪ್ಲ್ಯಾಸ್ಟಿಕ್ ಹೂಗಳಿಂದ ತುಂಬಿದ ಹೂದಾನಿ ಇದೆ. ಬಲಬದಿಯ ಸ್ಟೂಲಿನ ಮೇಲೆ ಟೇಬಲ್ ಫ್ಯಾನ್ ಇದ್ದು, ಅದರ ಪಕ್ಕದಲ್ಲಿಯೇ Telephone Stand ಇದೆ. ಗೋಡೆಯ ಮೇಲೆ ದಿ. ಲಾಲಬಹದ್ದೂರ ಶಾಸ್ತ್ರಿಯವರ ತ್ರಿವರ್ಣ ಚಿತ್ರಕ್ಕೆ ಶ್ರೀಗಂಧದ ಹಾರ ಹಾಕಿಟ್ಟಿರುವುದು, ಶಾಸ್ತ್ರಿಯವರ ಹಣೆಯ ಮೇಲೆ ತಿಲಕವಿರುವುದು ಸ್ಪಷ್ಟವಾಗಿ ಕಾಣುತ್ತಿದೆ. ಕಿಟಕಿಯಿಂದ ಕಾಣುವ ಆ ಗಿಡಕ್ಕೆ ಎಲೆಯ ಭಾರ ತಡೆಯಲಾರದಷ್ಟಿದೆ. ಹಚ್ಚಹಸುರಾಗಿ ಕಾಣುವ ಗಿಡದೆಲೆಗಳ ಮೇಲೆ ಸೂರ್ಯಪ್ರಕಾಶ ಪ್ರತಿಬಿಂಬಿಸುತ್ತಿದೆ.

ತೆರೆ ಸರಿದಾಗ........

ಮನೆತುಂಬ ಕತ್ತಲು ಇದ್ದರೂ ಪ್ರೇಕ್ಷಕರ ಪ್ರಥಮದರ್ಶನದಲ್ಲಿ ವೃಕ್ಷ ಎದ್ದು ತೋರುವಂತೆ ಮೇಲಿನಿಂದ ಬೆಳಕು ಚೆಲ್ಲಿರಬೇಕು. ಹಿನ್ನೆಲೆಯಲ್ಲಿ ಸುಮಧುರ ಕೊಳಲು ವಾದನ. ಕ್ರಮೇಣ ಮನೆತುಂಬ ಬೆಳಕು ಚೆಲ್ಲಬೇಕು. ೫೫ ವರ್ಷದ ಒಂದು ವ್ಯಕ್ತಿ ದೇವರಿಗೆ ಕೈಜೋಡಿಸಿ, ಕಣ್ಣುಮುಚ್ಚಿ, ಎರಡು ಕ್ಷಣ ಶಿಲಾಮೂರ್ತಿಯಂತೆ ನಿಂತಿರುತ್ತಾನೆ. ಆಗ ಎಲ್ಲೆಡೆಯಲ್ಲಿ ನೀರವ, ತದೇಕಚಿತ್ತನಾಗಿ—

Sri Vidyabharathi Book Centre, Sringeri

CC-O. In Public Domain. Digitized by eGangotri

—ನಿಂತವನು ಮತ್ತಾರೂ ಅಲ್ಲ; ಆ ಮನೆಯ ಹಳೆಯ ಆಳು ಸತ್ಯಪ್ಪ. ಮಣಿಗಂಟಿನ ಮೇಲೆ ಪಂಚೆ, ತಲೆಗೊಂದು ಸುತ್ತಿದ ಪೇಟ, ಮೈಗೆ ಮುಕ್ಕಾಲು ತೋಳಿನ ಶರ್ಟ, ಹೆಗಲ ಮೇಲೊಂದು ವಸ್ತ್ರ ಇದೆ. ಇಳಿವಯಸ್ಸಿನವನಾದರೂ ದೃಢಕಾಯ. ಹುಲುಸಾದ ಮೀಸೆ, ಮೀಸೆಗೆ ತಕ್ಕ ಮುಖ.

ತೆರೆ ಮೇಲೇರಿ ಸತ್ಯಪ್ಪನ ಮೇಲಷ್ಟೇ ಹೆಡ್‌ಲೈಟಿನಿಂದ ಬೆಳಕು ತೂರಲ್ಪಟ್ಟಾಗ ಆತ ಅನನ್ಯ ಭಕ್ತಿಭಾವದಿಂದ ಕೈಜೋಡಿಸಿ ನಿಂತಿರುವುದು ಕಾಣಿಸುತ್ತದೆ. ಜೋಡಿಸಿದ ಅಂಗೈಗಳ ಮಧ್ಯೆ ಒಂದು ಲಾಟರಿ ಟಿಕೇಟ ಇರುವುದು ಪ್ರೇಕ್ಷಕರಿಗೆ ಮೊದಲು ಗೊತ್ತಾಗಬಾರದು.]

ಸತ್ಯಪ್ಪ : (ಕಣ್ಣು ತೆರೆದು) ಅಪ್ಪಾ ದೇವರೇ, ನೀನು ಗಂಡೋ ಹೆಣ್ಣೋ ನನಗ ಗೊತ್ತಿಲ್ಲ. ಕೆಲವರು ನೀ ಹೆಣ್ಣಂತ ತಿಳಿದಾರ; ಕೆಲವರು ಗಂಡಂತ ತಿಳಿದಾರ. ನಾ ಮಾತ್ರ ನಿನಗ ಗಂಡsss ಅಂತ ತಿಳೀತೀನಿ. ನೀ ಹೆಣ್ಣಾದ್ರ ಮಾತ್ರ ನನಗ ಕ್ಷಮಿಸಿಬಿಡು. ....ನೀ ಈ ಜಗತ್ತಿನಾಗ ಇದ್ದೀ ಅಂತ ಭಾಳ ಮಂದಿ ಹೇಳ್ತಾರ. ಆದರ ನಾ ಮಾತ್ರ ಇನ್ನೂತನ ನಂಬಿರಲಿಲ್ಲ. ಅದಕ್ಕ ಕಾರಣ ಅದ. ಅದು ಏನಂತ ಕೇಳೂದಾದರ ಹೇಳ್ತೀನಿ ಕೇಳು.... ನೀ ಇಲ್ಲೀಮಟಾ ನನಗ ಎಲ್ಲ್ಯಾರ ಭೆಟ್ಟಿಯಾಗಿದ್ದೀಯೇನಪ್ಪಾ? ಥಾದಂಗಡ್ಯಾಗ, ಸಿನೇಮಾ ಥಿಯೇಟರಿನ್ಯಾಗ, ಫೈಲ್‌ಗಳು ನಿದ್ದೀ ಮಾಡೂ ವಿಧಾನಸೌಧದಾಗ, ಇನ್‌ಕಮ್‌ಟ್ಯಾಕ್ಸ ಆಫೀಸಿನ್ಯಾಗ ಎಲ್ಲೀ ನೀ ನನಗ ಭೆಟ್ಟಿಯಾಗಲಿಲ್ಲ. ಅಂದಮ್ಯಾಗ ನೀನಿಲ್ಲಾ ಅಂತ ತಿಳಕೊಂಬೂದರಾಗ ನನ್ನ ತಪ್ಪರ ಏನ್ನೈತಿ? ಕಡೀಗ ಹಜಾಮತಿ ಅಂಗಡಿಗಾರೂ ಬಂದಿದ್ರ ನಾ ತಿಳ್ಕೊಂತಿದ್ದೆ ನಿನ್ನ ಹೇಂತಿ ಕೈಯಾಗ ಜುಟ್ಟೆ ಸಿಗಬಾರದಂತ ಹಜಾಮತಿ ಮಾಡಿಸ್ಕೊಳ್ಳಾಕಾರೂ ಬಂದೀ ಅಂತ. ....ಈಗ ನನಗ ತಿಳೀತು ನೀನು ಹಿಪ್ಪೀಹಂಗ ತಲೀ–ಗಡ್ಡ ಬೋಳಿಸೂದಿಲ್ಲಂತ. ನೀನೂ ಹಿಂಗ ಮಾಡಿದ್ರ ಆ ಹಜಾಮರ ಗತಿ ಏನಪ್ಪ.... ಸ್ವಲ್ಪಾರೂ ವಿಚಾರ ಮಾಡೀ ಏನು? ....ಹೋಗಲಿ ಬಿಡು. ನೀ ನನಗಷ್ಟs ಅಲ್ಲ; ನನಗಿಂತ ಶಾಣ್ಯಾರಿಗೂ ದಡ್ಡರಿಗೂ ಭೆಟ್ಟಿಯಾಗಿಲ್ಲ ಅಂತ ತಿಳಿದು ಭಾಳ ಬೇಜಾರಾಯ್ತು ಬಿಡೋ ಮ್ಹಾರಾಯಾ.

Sri Vidyabharathi Book Centre, Sringeri

CC-O. In Public Domain. Digitized by eGangotri

ಈಗ ನೀ ಇದ್ದೀಯೋ ಇಲ್ಲೋ ಅಂತ ಪರೀಕ್ಷೆ ಮಾಡಾಕ ನಾ ಹೊಂಟೇನಿ. ನಾ ನಿನಗೆಂದೂ ಕೈಮುಗಿದಾಂವ ಅಲ್ಲ. ನಿನಗ ಮ್ಯಾಲಿಂದ ಮ್ಯಾಲೆ ಕೈಮುಗಿದು ತ್ರಾಸ ಕೊಡಾಕ ನಾಯೇನ ಕಳ್ಳ ವ್ಯಾಪಾರ ಮಾಡಿಲ್ಲ. ಖಾದಿ, ಕಾವಿ ಹಾಕಿ ಯಾರಿಗೂ ಟೊಪಗಿ ಹಾಕಿಲ್ಲ. ಯಾರ ಖೂನಿ ಮಾಡಿಲ್ಲ. ಯಾಂವ ಭಾಡ್ಯಾಗೂ ಸುಳ್ಳು ಹೇಳಿಲ್ಲ. ಅಂದಮ್ಯಾಗ ನಿನಗಾರೂ ಯಾಕ ಕೈಮುಗಿಬೇಕ ನೀನೇ ಹೇಳು. ಈ ಐವತ್ತ ವರ್ಷ ಸುಮ್ಕಽ ಇದ್ದು ಈಗ ನಿನಗ ಕೈಮುಗಿ ಯಾಕ ಹತ್ತೀನಿ ಅಂದ್ರ ನಿನ್ನ ನಸೀಬರ ಎಷ್ಟು ಗಟ್ಟಿ ಐತಿ ಅಂತ ಗೊತ್ತಾಗತೈತಿ. ನಿನಗ ಈ ಕಲಿಯುಗದಾಗ ಭ್ಹಾಳ ಮಂದಿ ಭ್ಹಾಳ ಹೆಸರ ಇಟ್ಟಾರ. ನಿನಗ ಹಿಂಗ ಹೆಸರಿಟ್ಟರೂದ್ರಿಂದ್ಲೆ ಈ ಮಂದಿ ಹೊಟ್ಟೀ ಧಂಡೆ ನಡದೈತಿ. ನಿನಗ ತೆಂಗಿನಕಾಯಿ ತೋರಿಸಿ ಜಗತ್ತಽ ನುಂಗೂ ಮಂದೀನೂ ಐತಿ. ಒಂದ ಮಾತ ಹೇಳ್ತೀನಿ.... ಖರೇ ಹೇಳ್ತೀನಿ ಸಿಟ್ಟಾಗಬ್ಯಾಡಪ್ಪೋ.... ನಿನ್ನ ನೈವೇದ್ಯಕ್ಕಂತ ಇಟ್ಟ ಫಲಾ ಹಾರ ನೀನಽ ನುಂಗಿದ್ರ ಈ ಮಂದಿ ನಿನಗ ನೈವೇದ್ಯ ತೋರಿಸೂದಿರಲಿ ಪೂಜೀ ಮಾಡೂ ಮಂದಿ ಅಲ್ಲ.... ನೀ ಮಾತ್ರ ಶಾಣ್ಯಾನನಮಗ ಅಂಬೂದು ಖಾತ್ರಿ ಆಕ್ಕೈತಿ.... ಯಾಕಂದ್ರ.... ನೀ ನಮ್ಮಂಗ ನಡ ದಾಡೂದಿಲ್ಲ, ಮಾತಾಡೂದಿಲ್ಲಂತ ನಿನ ಬಾಳೀವ ನಡದೈತಿ. ಇಲ್ಲದಿದ್ದರ ಅವರವರ ಆಶೆ ಪೂರೈಸದಿದ್ರ ನಿನ ಸೊಂಟಾ ಮುರದು ನಿನ್ನ ಕೈಯಾಗಿಟ್ಟು ಆಸ್ಪತ್ರ್ಯಾಗೊಯ್ದು ಮಲಗಸತಿದ್ರು.

ಅಂದಾಂಗ ನಾ ನಂವ ಹೇಳೂದಽ ಮರ್ತುಬಿಟ್ಟೆ. ನಾ ಈಗ ಹೇಳೂದ ಯಾರಿಗೂ ಹೇಳಬ್ಯಾಡಪ್ಪೊ ... ನಾ ಏನ ಮಾಡೇನಿ ಅಂದ್ರ ಒಂದು ಲಾಟರಿ ಟಿಕೇಟ ತಗೊಂಡೇನಿ. (ಕೈಬಿಚ್ಚಿ ಟಿಕೇಟು ತೋರಿಸಿ) ಆದಕ್ಕ ಲಾಟರಿ ಮಂದಿ ಜಂಪರ್ ಬಹುಮಾನ ಇಟ್ಟಾರಂತ. ಅಂದ್ರ ನನಗ ನನ್ನ ಟಿಕೀಟಿಗೆ ಹತ್ತಿದ್ರ ಎರಡೋ ಮೂರೋ ಲಕ್ಷ ಬರತೈತಂತ. ಆದಕ ನೀ ಒಂದ ಕೆಲಸ ಮಾಡಬೇಕು. ನಂದ ಈ ಟಿಕೀಟಿಗೆ ಮೂರೂ ಲಕ್ಷ ಹತ್ತೂಹಂಗ ಮಾಡಿದ್ರ ನಿನಗ ಅರ್ಧ ಕೊಡ್ತೀನಿ. ನಿನ್ನ ಗುಡೀಗ ಬಂದು ತಲೀನೂ ಬೇಕಾರ ಬೋಳಿಸ್ಕೋ

Sri Vidyabharathi Book Centre, Sringeri

CC-O. In Public Domain. Digitized by eGangotri

ತೀನಿ. ಹಂಗ ಈ ಸತ್ಯಪ್ಪ ಮಾತುಕೊಟ್ಟು ಕೆಲಸಾದ ವ್ಯಾಗ ಕೈಕೊಡೂ ಮಾಮೂಲಿ ಮನಶ್ಯಾ ಅಲ್ಲಪ್ಪ. ನಿನ್ನ ಮಾಮೂಲು ಅರ್ಧ ಪಾಲು ನಿನ್ನ ಡಬ್ಬ್ಯಾಗ ಹಾಕೂ ಜವಾಬ್ದಾರಿ ನಂದೈತಿ. ನೀ ಹಾಂಗ ಕಾಳಜೀ ಮಾಡಬ್ಯಾಡ. ಕೆಲಸಾದವ್ಯಾಗ ಈ ಪಕ್ಷದಿಂದ ಆ ಪಕ್ಷಕ್ಕ ಜಿಗಿಯಾಕ ನಾಯೇನ ಕಾಂಗ್ರೆಸ್ ಮನಶ್ಯಾ ಅಲ್ಲ. ಈ ಒಂದsಒಂದು ಬೇಡಿಕಿ ಮಂಜೂರ ಮಾಡ್ತಿ ಅಂತ ಖಾತ್ರಿಯಾಗಿ ನಂಬಾಂವಾ ಇತಿ ನಿನ್ನಾಂವಾ (ಎಂದು ಕೈ ಜೋಡಿಸುವನು).

ಶೀಲಾ : (ಒಳಗಡೆಯಿಂದ ಬರುತ್ತ ತುಂಬ ಆಕರ್ಷಕವಾದ ಉಡುಪು, ಕೈಗೆ ರಿಸ್ಟವಾಚ, ಎಡಗೈಗೆ ೩-೪ ಬಂಗಾರದ ಬಳೆ, ಕಿವಿಗೆ ಓಲೆ, ಕೆದರಿದ ತಲೆಗೂದಲು, ಸೀರೆಯ ಮೇಲೆ ಸೊಂಟದ ಬಳಿ ಒಂದು ಬಿಳಿಯ ವಸ್ತ್ರ ಇಳಿಬಿಟ್ಟಿದ್ದಾಳೆ.... ಕೈ ಜೋಡಿಸಿ ನಿಂತ ಸತ್ಯಪ್ಪನನ್ನು ನೋಡಿ) ....ಏನು ಸತ್ಯಪ್ಪ. ಯಾಕೆ ಈ ಹೊತ್ತು ಬೆಳಗ್ಗಿನ ಜಾವಾನೇ ಕೈ ಜೋಡಿಸಿ ಬಿಟ್ಟೆಯಲ್ಲ. ನಂಬರ್‌ಗಿಂಬರ್ ಬಂತೇನು ?

ಸತ್ಯ : ಹಾಂಗ ಹೇಳಿದಾಗ ಹೇಳಿದಷ್ಟು ನಂಬರ್ ಬರಾಕ ಆದೇನು ಯುನಿವ ರ್ಸಿಟಿ ಪೇಪರ ತಪಾಸಣಿ ಏನ್ರೀ ? ನಮ್ಮ ನಂಬರ ಬರಾಕ ನಸೀಬ ಬೇಕ್ರಿ. ಇಂದ ಬರದಿದ್ರೂ ಮುಂದಾದ್ರೂ ಬರತೈತಿ ಅಂತ ಗ್ಯಾರಂಟಿ ಐತ್ರಿ. ಕರ್ಮಾ ಮಾಡ್ರಪೋ ಅಂತ ಹೇಳಿ ಗಡಪ ಆದ ಆ ಗೀತಾ ಚಾರಿ ಆ ವ್ಯಾಗ ನಮ್ಮ ಕೈಯಾಗ ಯಾಕ ಸಿಗಲಿಲ್ಲಂತೀರಿ ?

ಶೀಲಾ : ಯಾಕಪ್ಪ ?

ಸತ್ಯ : ಅಂವಾ ನಮ್ಮ ಕೈಯಾಗೇನಾರ ಸಿಕ್ಕಿದ್ರೆ ನಾವು ಇಂದ ನಂಬರ ಎಷ್ಟು ಬರತೈತಿ ಅಂತ ಕೇಳದೆ ಬಿಡ್ತೀವೇನ್ರೀ ?

ಶೀಲಾ : (ನಗುತ್ತ) ಒಳ್ಳೇ ತಮಾಷೆ.

ಸತ್ಯ : ಇದು ತಮಾಸೀ ಮಾತಲ್ರೀ.... ಅನುಭವದ ಮಾತೈತಿ. ದೇವರ ಕಟಗೊಂಡು ಮಾಡೂದೇನೈತಿ ಅಂತ ಈ ಗಡ್ಡ ಹಣ್ಣಾದ್ರೂ ಸುಮ್ಕ ಇದ್ದೆ. ಈಗ ಗೊತ್ತಾತು ನೋಡ್ರಿ.. ಲಾಟರಿ ನಂಬರ ಕನಸಿನ್ಯಾಗ ಬಂದು ಹೇಳೂ ದೇವರದಾರ ಅಂತ. ಅದಕ್ಕs ಮುಗ್ಗಲಮನಿ ಶಿವಪ್ಪ

Sri Vidyabharathi Book Centre, Sringeri

CC-O. In Public Domain. Digitized by eGangotri

ದೇವರಿಗೆ ಅವನ ಮಾಮೂಲು ಹಾಕ್ತೀನಂತ ಹೇಳಿ ಆಸೀ ತೋರಿಸಿ ಲಕ್ಷಾಧೀಶಾಗ್ಯಾನ. ಮೊನ್ನೆ ಅದೆಲ್ಲಿಗೋ ಹೋಗಿ ತಲೀನು ತಳಾತಳಾ ಬೋಳಸ್ಕೊಂಡು ಬಂದಾನ.

ಶೀಲಾ : ಓಹೋ.... ಹೀಗೋ ಸಮಾಚಾರ.... ಅದಕ್ಕ ನೀನೂ ದೇವರಿಗೆ ಗಂಟುಬಿದ್ದಿ ಅಂತ ಕಾಣುತ್ತೆ (ಮುಗುಳು ನಗೆ).

ಸತ್ಯ : ಹಾಂಗಽ ಗಂಟುಬಿದ್ದೀನಿ ಅಂತ ತಿಳಕೋಬ್ಯಾಡ್ರಿ. ಪೋಲೀಸ ಕಳ್ಳ ವ್ಯಾಪಾರಿಗೆ ಗಂಟುಬಿದ್ದಾಂಗ ಬಿದ್ದೀನ್ರಿ.

ಶೀಲಾ : ತುಂಬ ಒಳ್ಳೇ ಕೆಲಸ ಮಾಡಿದೆ. ದಾಸರು ಹಾಡಿಲ್ವೇನೋ ನಂಬಿ ಕೆಟ್ಟವರಿಲ್ಲವೋ ಅಂತ.

ಸತ್ಯ : ದಾಸರ ಕಾಲದಲ್ಲಿ ಪಾಕಿಸ್ತಾನವಿರಲಿಲ್ಲ ಅಕ್ಕಾವ್ರೆ. ಈಗ ದಾಸರು ಇದ್ದರೆ ಹಾಂಗ ಹಾಡುತ್ತಿದ್ದಿಲ್ಲ....

ಶೀಲಾ : (ಆಶ್ಚರ್ಯದಿಂದ) ಯಾಕೋ ? ಮತ್ತೇನು ಮಾಡುತ್ತಿದ್ದರು ?

ಸತ್ಯ : ಅಳತಿದ್ರು; ಈ ಪಾಕಿಗಳ ನಂಬಿ ಉಳಿದವರಿಲ್ಲವೋ ಪುರಂದರ ವಿಠಲಾಽ ಅಂತ.

ಶೀಲಾ : ಹೋಗಲಿ ಬಿಡು; ಹಾಲಿನವನು ಬಂದುಹೋದನೇ ?

ಸತ್ಯ : ಅಂವಾ ಯಾಕ ಇಷ್ಟು ಲಗೂನಽ ಬರ್ತಾನ ಬಿಡ್ರಿ ಎಮ್ಮಿತಮ್ಮಣ್ಣ. ಈಗ ಬಂದು 'ನಮ್ಮ ಎಮ್ಮಿ ಸಿದ್ದೀ ಮಾಡಾಕ ಹತ್ತಿತ್ತರೀ' ಅಂತ ಮಾರಿ ಗೋರಿಲ್ಲಾನ ಗತಿ ಮಾಡಿ ನಿಲ್ಲೂದ ಗೊತ್ತೈತಲ್ಲ ಅಂವಗ !

ಶೀಲಾ : ಬರಲಿ; ಬಂದಕೂಡಲೇ ಹಾಲು ತಗೊಂಬಾ ಒಳಗೆ. ಬೇಬಿ ಸ್ಕೂಲಿಗೆ ಹೋಗೋ ಹೊತ್ತಾಯ್ತು.

ಸತ್ಯ : ಹೂಂ ರೀ. ಸಾಹೇಬರು ಎದ್ರೇನವ್ವಾ ?

ಶೀಲಾ : ಇಲ್ಲ, ಇನ್ನೂ ಇಲ್ಲ. ಯಾಕೆ ?

ಸತ್ಯ : ಈ ದೇವರ ಪ್ರಕರಣ ಅವರ ಕಿವಿವ್ಯಾಗ ಮಾತ್ರ ಹಾಕಬ್ಯಾಡ್ರಿ (ಅಷ್ಟರಲ್ಲಿ ಅವಳು ಒಳಗೆ ಹೋಗುವಳು ನಗುತ್ತ).

Sri Vidyabharathi Book Centre, Sringeri

CC-O. In Public Domain. Digitized by eGangotri

ಈ ಸಮಾಚಾರ ಎಲ್ಲಾರಿಗೂ ತಿಳಿದೈತಿ. ಆದರ ಸಾಹೇಬರ ಕಿವಿ ವ್ಯಾಗ ಮಾತ್ರ ಹೋಗಲಿಲ್ಲ- ಅದು ಒಂದು ಪುಣ್ಯಾ ಅನಬೇಕು. (ಗೋಡೆಯ ಬಳಿ ಇರುವ ಕ್ಯಾಲೆಂಡರ ನೋಡುತ್ತ ಇವೊತ್ತು ದಿನಾಂಕ ಒಂಬತ್ತು. ಆರಕ್ಕೆ ಮೂರು ಕೂಡಿಸಿದ್ರೂ ಒಂಬತ್ತು. ಹತ್ತರಾಗ ಒಂದು ಕಳದ್ರೂ ಒಂಬತ್ತು. ಗ್ರಹಗಳೂ ಒಂಬತ್ತು (ಎಂದು ಗುಣ ಗುಣಿಸುತ್ತಿರಲು Calling Bell ಸದ್ದು) ಮುಂದಿನ ಮನೀಗೆ ಹೋಗಪ್ಪೋ....

(ಮತ್ತೆ Calling Bell) ಏಯ್ ಜೋಕುಮಾರಸ್ವಾಮೀ, ಮುಂದಿನ ಮನೀಗ ಹೋಗೂ ಅಂದ್ರ ಗೊತ್ತಾಗೂದಿಲ್ಲೇನು ? (ಅಷ್ಟ ರಲ್ಲಿ ಹೊರಗಡೆಯಿಂದ 'ಹಾಲು' ಎಂಬ ಕೂಗು) (ಸಿಡುಕಿನಿಂದ) ಕಾಲಾಗಲೀ, ಕೈಯಾಗಲಿ ಮುಂದಿನ ಮನೆಗೆ ಹೋಗಲೇ....

(ಹೊರಗಡೆಯಿಂದ 'ಹಾಲಪ್ಪರೀ ಹಾಲಪ್ಪ' ಎಂದು ಜೋರಾಗಿ ಕೂಗು.)

ಸತ್ಯ : (ಗಣಿತ ನಿಲ್ಲಿಸಿ, ಪೆನ್ಸಿಲ್ ಕಿವಿಗೆ ಸಿಕ್ಕಿಸಿ, ತಕ್ಷಣ ಬಾಗಿಲು ತೆಗೆದು) ಓ....ಹೋ.... ನೀನs ಅಲ್ಲಪ್ಪ ಸ್ವಲ್ಪ ಗಡಸಾಗಿ ಒದರಾಕ ಏನಾ ಗಿತ್ತು? 'ಹಾಲು ಹಾಲು' ಅಂತ ಹೆಣ್ಮಕ್ಕಳು ನಾಚಿಕೋಂತ ನಿಂತಾಂಗ ನಿಂತೀಯಲ್ಲ. ನಾಳಿಂದ ಬೆಲ್ ಒತ್ತಬೇಡ....ಗೊತ್ತಾತೇನಪ್ಪ ?

ವ್ಯಕ್ತಿ : (ಬರುತ್ತ) ಮತ್ತೇನು ಮಾಡ್ಲರಿ. (ಅವನ ಕೈಯಲ್ಲಿ ಹಾಲಿನ ಪಾತ್ರೆ ಯಿದೆ.)

ಸತ್ಯ : ಭಪ್ಪರೇ ಮಗನೇ. ಯಾವ ಅಡ್ನಾಡಿ ಸಾಲ್ಯಾಗ ಕಲ್ತಿದ್ಯೋ ಏ.... ಹಿಂಗ ವಕೀಲರಹ್ಹಂಗ ಉಲ್ಟಾ ಪ್ರಶ್ನಿ ಮಾಡಾಕ ?

ವ್ಯಕ್ತಿ : ಹಂಗಲ್ಲರಿ ಕಾಳಿಂಗ್ ಬೆಲ್ಲಾ ಒತ್ತಬ್ಯಾಂಡಾಂದ್ರಿ....ಅದಕ್ಕs ಕೇಳಿ ದ್ನಿರಿ.

ಸತ್ಯ : ಕಾಲಿಂಗ ಬೆಲ್ ಹಣೇಬರಾನ ಒತ್ತಿಸಿಕೊಳ್ಳೂದು. ಆದರ ನಿಮ್ಮಂಥ ಎಂವಿ ಕಾದ ಮುಂದಿ ಎಂವಿಗಂಟಲ ಹಿಚಿಕಿದ್ಹಾಂಗ ಮಾಡಿದ್ರೆ ಏನ್ ಮಾಡೂದು ?,

Sri Vidyabharathi Book Centre, Sringeri

CC-O. In Public Domain. Digitized by eGangotri

ವ್ಯಕ್ತಿ : ಅದು ಖರೇ ಐತ್ರಿ. ಅದಕ್ಕs ನಾಳಿಂದ ಏನ ಮಾಡಂತೀರಿ ?

ಸತ್ಯ : ಏನೂ ಮಾಡಬ್ಯಾಡಾ. ನಾಳಿಂದ ಬರೂಮುಂದ ಒಂದು ಹಳೀ ಗೂಡ್ಸ್‌ಗಾಡೀ ಹಾರ್ನ್ ತಗೊಂಬಾ....ಬಾಗಲಾಗ ನಿಂತು ನಿನಗ ಸಾಕಾಗೂ ಮಟ 'ಪೊರ್ರೊಂs-ಪೊರ್ರೊಂss' ಅಂತ ಹಿಚಕತಾ ನಿಂತಗೋ. ಅಂದ್ರ ನಾ ತಿಳಕೊಂತೀನಿ....ಹಳೀ ಎಮ್ಮಿ ಬಂತೂ ಅಂತ.

ವ್ಯಕ್ತಿ : ಇಲ್ಲ ಬಿಡ್ರಿ. ನಾಳೀಂದ ಬೆಲ್ ತುಸು ಸಾವಕಾಶ ಆದಮುತೀನ್ರಿ.

ಸತ್ಯ : ಬ್ಯಾಡಲೇ....ನಿನಗ ಬೇಕಾರ ಕೈ ಮುಗೀತಿನಿ. ನಿನ್ನ ಬೆಲ್ ಕೇಳಿ ನಮ್ಮ ಸಾಹೇಬರು ಲಗೂನ ಎದ್ರ ನನ್ನ ಲೆಕ್ಕಾ ಎಲ್ಲಾ ಚೊಕ್ಕ ಆದೀತು. ಬೇಕಾರ ದಿನಾ ಹತ್ತ ಪೈಸೆ ಮಾಮೂಲು ಕೊಡ್ತೀನಿ.

ವ್ಯಕ್ತಿ : 'ಮಾಮೂಲು' ಅಂದ್ರ ಏನ್ರಿ ?

ಸತ್ಯ : ಅಂದರ ನೀ ಇನ್ನೂ ಸರಕಾರಿ ಆಫೀಸಿಗೆ ಹೋಗಿಲ್ಲಂತ ಕಾಣತೈತಿ ಅಲ್ಲಿ ಹ್ವಾದರ ನಿನಗೆಲ್ಲ ಖಬರ ಆಗತೈತಿ....ನಿನ್ನ ಕೆಲಸಾ ಆಗಬೇಕಾರ ವಜನ (ಕೈ ಬೆರಳಿನಿಂದ ಹಣ ಎಂಬಂತೆ ಸಂಜ್ಞೆಯಿಂದ ತೋರಿಸಿ) ಇಡಬೇಕಾಗತೈತಿ. ಸಾಸವೀ ಅಷ್ಟು ಕೆಲಸಕ್ಕ ಎಮ್ಮಿ ಅಷ್ಟು ವಜನ ಇಡಬೇಕಾಗತೈತಿ. ಅಂದರs ಕೆಲಸ ಆಗೂದು. ಇಲ್ಲದಿರಕ ಹೊಲಸs ಆಗೂದು. ಅದಕ್ಕ 'ಮಾಮೂಲು' ಅಂತೀವಿ. ಭಾರತ ಸ್ವತಂತ್ರ ಆದಮ್ಯಾಗ ನಾವು ವಜನ ಇಡೂ ಪದ್ಧತಿ ಬೇಕಷ್ಟು ಬೆಳಸೀವಿ. ಅದೊಂದರಾಗs ಸ್ವಾವಲಂಬೀ ಆಗೀವಿ.

ವ್ಯಕ್ತಿ : ಓ ಹಂಗೇನ್ರಿ....ಗೊತ್ತಾತು ಬಿಡ್ರಿ. ಬರ್ತೀನಿ ಹಂಗಾರ. (ಎಂದು ಹೊರಡುವ)

ಸತ್ಯ : ಎಲ್ಲಪ್ಪ ಹೊಂಟೀ ಅಗಸರ ಕತ್ತೀ ಹ್ವೊಂಟಾಂಗ ?

ವ್ಯಕ್ತಿ : ನಿಮ್ಮ ಮಾತಿನಾಗ ಹಾಲ ಕೊಡೂದ ಮರ್ತs ಹೋತು ನೋಡ್ರಿ.

ಸತ್ಯ : ಎಮ್ಮಿ ಮೇಯಿಸಾಕ ನೀನs ಹೋಗ್ತಿಯೊ ಬ್ಯಾರೇಪ್ರನ್ನ ಕಳ ಸ್ತೀಯೋ ?

ವ್ಯಕ್ತಿ : ನಾನs ಹೋಕ್ಕಿನ್ರಿ.

Sri Vidyabharathi Book Centre, Sringeri

CC-O. In Public Domain. Digitized by eGangotri

ಸತ್ಯ : ಸಂಜೀ ಮುಂದ ಎಂಮಿ ತಂದ ಗೂಟಕ್ಕ ಕಟ್ತಿಯೋ ಅಥವಾ ಇನ್ನಾರ ದಾರ ಕ್ವಾಣಾ ತಂದ ಕಟ್ಟಿ ಮುಂಜಾನಿ ಹಾಲ ಹಿಂಡಾಕ ಹೋಗಿ ಒದಸಗೊಂಡಿ ಮತ್ತ? (ಎಂದು ಹಾಲಿನ ಪಾತ್ರೆ ಹಿಡಿದು ಹಾಲು ಪಡೆಯುವ) ಅಂದ್ಹಾಂಗ ಮರ್ತು ಬಿಟ್ಟೆ; ನಿನ್ನ ಹೆಸರೇನಪ್ಪ?

ವ್ಯಕ್ತಿ : ಸಿದ್ಧಪ್ಪರಿ........ ಯಾಕ ಕೇಳಿದ್ರಿಯಪ್ಪ?

ಸತ್ಯ : (ಬೆರಳಿನಿಂದ ಎಣಿಸುತ್ತ ಮೂರು ಬೆರಳು ಮಡಿಚಿ, ಏನೇನೋ ಗುಣಗುಣಿಸಿ) ಮೂರುವರಿ!

ವ್ಯಕ್ತಿ : ಏನ್ರಿ ಮೂರುವರಿ ಅಂದ್ರೆಲ್ಲಾ?

ಸತ್ಯ : ನಿನ್ನ ಹೆಸರಿನ್ಯಾಗ ಮೂರುವರಿ ಅಕ್ಷರ ಅವ ಅಂದೆ.

ವ್ಯಕ್ತಿ : ಹಂಗಾರ ಬರ್ತೀನ್ರಿ?

ಸತ್ಯ : ಯಾಕಪ್ಪ ಸಿದ್ಧಪ್ಪ ಹಿಂಗ ಅವಸರ ಮಾಡಿದ್ರೆ. ಕೂತುಗೋ....

ವ್ಯಕ್ತಿ : ಇಲ್ಲರಿ.... ಆ ಮಾಸ್ತರ ಮನೀಗ ಲಗುಟ ಹಾಲಕೊಡಬೇಕ, ಇಲ್ಲದಿರಕ ಬೊಬ್ಬೀನ ಹೊಡೀತಾರ.

ಸತ್ಯ : ಮತ್ತ ಮಾಸ್ತರ ಕೆಲಸ ಏನಂತ ಮಾಡೀ ಮತ್ತ? ಅಲ್ಲಿ ಸಾಲ್ಯಾಗ ಸಂಬಳಬುರುಕ ಹುಡುಗರ ಮುಂದ ಬೊಬ್ಬಿ ಹೊಡಿಯೂದು, ಮನೀಗ ಬಂದು ಹೆಂಡ್ತಿಮುಂದ ಬೊಬ್ಬಿ ಹೊಡಿಯೂದು. ಆ ಥಾಂಡಿಗ್ಯಾ ಹೆಣ್ಮಗಳು ಮಾಸ್ತರಗ ಬುದ್ಧಿ ಹೇಳಾಕ ಹೊಂಟ್ರ ಪಾಪ, ಆ ಮಾಸ್ತರರ ಏನ ಮಾಡಬೇಕು? ಆಗ ನಿನ್ನಂಥ ಎಮ್ಮಿತಮ್ಮಣ್ಣಗಾರೂ ಬೊಬ್ಬಿ ಹಾಕಿ ಬಿಸಿ ಮಾಡ್ತಾರ.... ಬಾ ಕೂತಗೋ.... ಒಂದು ಬೀಡಿ ಕೊಡ್ತೀನಿ. ಮುಂಜಾನಿ ಹೊತ್ತು ಚಳ್ಯಾಗ ಒಂದ ದಮ್ ಮಾರೋ.

ವ್ಯಕ್ತಿ : ಇಲ್ಲರಿ.... ನಾ ಬೀಡೀಗೀಡೀ ಸೇದೂದಿಲ್ಲ.

ಸತ್ಯ : ಹಂಗರ ಒಂದ ಎಲಿ ತಂಬಾಖ ಕೊಡ್ತೇನಿ.... ಬಾಯಾಗ ಇಟಗೊಂಡು ಹೋಗು.

ವ್ಯಕ್ತಿ : ಇಲ್ಲರಿ.... ಎಲಿ ತಂಬಾಖ ಇಡೂ ಚಟ ಇಟಗೊಂಡಿಲ್ಲರಿ.

Sri Vidyabharathi Book Centre, Sringeri

 CC-O. In Public Domain. Digitized by eGangotri

ಸತ್ಯ : ಹಂಗರ ಒಂದ ಕೆಲಸ ಮಾಡು; ಸ್ವಲ್ಪ ನಾಶೀಪುಡಿನಾರೂ ಹಾಕು (ಎಂದು ಜೇಬಿನಿಂದ ಡಬ್ಬಿ ತೆಗೆದು ಅವನ ಮುಂದೆ ಹಿಡಿಯುವನು).

ವ್ಯಕ್ತಿ : (ಭಂಗನೆ ಸ್ವಲ್ಪ ಹಿಂದಕ್ಕೆ ಜಿಗಿದು) ಬ್ಯಾಡರಿಯಪ್ಪ.... ಈವತ್ತ ಒಂದ ದಿನ ನೀವು ಪುಗಸ್ಯಾಟಿ ಕೊಟ್ಟೀರಿ. ಆಮ್ಯಾಗ ದಿನಾ ಕೊಡಾವರು ಯಾರು ?

ಸತ್ಯ : ಬಪ್ಪರೆ ಮಗನೆ.... ನಿನ್ನ ಮಾರಿ ಮ್ಯಾಲ ಇರೂ ಮೀಸೀಗರ ಸ್ವಲ್ಪ ಚಿಮಣಿಯಣ್ಣಿ ಸುರುವಿ ಬೆಂಕಿಯಿಟಗೋ.... ಬೇಕಾರ ಚಿಮಣಿಯಂತ ಮತ್ತ ಬೆಂಕಿ ನಾ ಪುಗಸ್ಯಾಟಿ ಕೊಡ್ತೀನಿ. ದಿನಾ ಬೇಕಾರೂ ಕೊಡ್ತೀನಿ. (ಧ್ವನಿ ಬದಲಿಸಿ) ಗಂಡ ಕಳಕೊಂಡ ರಂಡಮುಂಡೇ ರ್ಹಂಗ ಕೇಳ್ತೀಯಲ್ಲ. ಕುದರಿ ಬಾಲದಂಗ ಮೀಸಿ ಇಟಗೊಂಡು ನಿನಗ ಒಂದು ಚಿಟಿಕೆ ಪುಡಿ, ಒಂದ ಬೀಡಿ ದುಡಿದು ಸೇದೂ ಯೋಗ್ಯತೆ ಇಲ್ಲದಿದ್ರ ನಿನ್ನಂಥಾವ್ರು ಯಾಕಪ್ಪ ಬದುಕಿರಬೇಕು ? ನಿನ್ನ ಹಾಲಿನ ಡಬ್ಬಿ ಇಲ್ಲಿ ಇಟ್ಟು ಈ ಮನಿ ಮಾಳಗಿ ಮ್ಯಾಗ ಹತ್ತಿ ಕೆಳಗ ಬಿದ್ದರs ಪ್ರಾಣಾ ಕಳಕೋ. ನೀ ಸತ್ತರ ನಿನಗ ಪುಗಸ್ಯಾಟಿ ಮಣ್ಣ ಮಾಡೂ ಕೆಲಸ ನಾ ಮಾಡ್ತೀನಿ. (ವ್ಯಂಗ್ಯ) ನಿನಗ ನಾಚಿಕೀ ಕಾಣೂದಿಲ್ಲ. ದಿನಾ ಪುಗಸ್ಯಾಟಿ ಕೊಡಾವರಿದ್ರ ನೀ ಏನ ಬೇಕಾದ್ರೂ ಮಾಡಾಕ ತಯಾರಿದ್ದೀ.... ಸಾಲೀ-ಕಾಲೇಜ ಹುಡುಗರ ಹಂಗ ಅಲ್ಲ ?

ವ್ಯಕ್ತಿ : (ಪೆಚ್ಚುಮುಖ) ಹ....ಹ....ಹಂಗಲ್ಲರಿ.

ಸತ್ಯ : ಗೊತ್ತಾತು ಬಿಡು; ಇಂಥಾ ದೊಡ್ಡ ವಿಚಾರದ ಮಂದೀನ ಹೆಚ್ಚಾಗ್ಯಾರ. ಇರಲಿ ಬಾ.... ಸಿದ್ಧಪ್ಪ. ನೀ ಏನ ಸೆಟಗೋ ಬ್ಯಾಡ (ಏನೋ ಜ್ಞಾಪಿಸಿ) ಅಂದ್ಹಾಂಗ ನಂಬರ ವಿಚಾರ ನಿಂಗೇನಾರ ಗೊತ್ತೈತೇನು ?

ವ್ಯಕ್ತಿ : (ತಕ್ಷಣ) ಅದಾವಲ್ಲರಿ.... ನಂಬರ್.

ಸತ್ಯ : (ಸಮೀಪಿಸಿ) ಭಪ್ಪರೇ.... ಹಂಗರ ನಿನ್ನ ಆ ಸಾಲೀ ಮಾಸ್ತರ ಬೊಬ್ಬೀ ಹೊಡಕೋತಾ ಸಾಲಿಗೆ ಹ್ವಾದ ಮ್ಯಾಲs ನೀ ಇಲ್ಲಿಂದ ಹೊಂಡು.... ಈಗ ಹಿಂಗ ಬಾ.... ನಿನ ಹಂತ್ಯೇಕ ಸ್ವಲ್ಪ ಮಾತಾಡೂದೈತಿ (ಎಂದ

Sri Vidyabharathi Book Centre, Sringeri

CC-O. In Public Domain. Digitized by eGangotri

ಆವನನ್ನು ಬಲವಂತವಾಗಿ ಕರೆದು ತಂದು ಸೋಫಾದ ಮೇಲೆ ಕೂಡಿಸುವ.) (ಕಿವಿಯ ಬಳಿ ಬಗ್ಗಿ ಸಿಂತು ಮೆಲ್ಲನೆ) ಯಾವ ನಂಬರ್ ಕಟ್ಟೇ.

ವ್ಯಕ್ತಿ : (ಬೆಚ್ಚಿ) ಏನಂದ್ರಿ ?

ಸತ್ಯ : ಎಮ್ಮಿ ಹಂಗ ಒದರಬ್ಯಾಡೋ ಮ್ಹಾರಾಯಾ. ನಮ್ಮ ಸಾಹೇಬರು ಎದ್ದು ಬಂದಾರು. ನಿನ್ನೀ ನಂಬರ್ ಎಷ್ಟಪ್ಪ ?

ವ್ಯಕ್ತಿ : (ಜೋರಾಗಿ) ಎಮ್ಮಿ ನಂಬರ್ ಕೇಳಿದ್ರಿಯೇನ್ರಿ....? ಒಂದನೇ ನಂಬರ್ ಎಂಮಿ ಜಡ್ಡಾಗಿ ಹೋಗೀತರಿ. ಈಗ ಯಾಡ್ಡ ಮತ್ತ ಮೂರ ನಂಬರ್ ಎಮ್ಮಿ ಹಾಲ ಕೊಡ್ತಾವರಿ. ನಾಕ ನಂಬರ್ ಎಂಮಿ ಗೊಡ್ಡಾಗ್ಯೆತರಿ. ಐದ ನಂಬರ್ ಎಮ್ಮೀ........

ಸತ್ಯ : (ಅಷ್ಟರಲ್ಲಿ-ಕೈಜೋಡಿಸಿ) ಸಾಕು ಬಿಡೋ ಮ್ಹಾರಾಯಾ ನಿನ್ನ ಎಮ್ಮಿ ಪುರಾಣಾ.

(ಶೀಲಾ ಪ್ರವೇಶ. ಇಬ್ಬರು ಮಿಕಿ ಮಿಕಿ ನೋಡುತ್ತ ನಿಲ್ಲುವರು. ಕ್ಷಣ ಮೌನ)

ಶೀಲಾ : ಹಾಲು ಬಂತೇ ಸತ್ಯಪ್ಪ ? ನಿನ್ನ ನಂಬರ್ ಗುಂಗಿನಲ್ಲಿ ಪ್ರತಿದಿನವೂ ಹೀಗೇ.

ಸತ್ಯ : ಇಲ್ಲರಿ.... ಈ ಸಿದ್ಧಪ್ಪನೇ ಈಗ ಬಂದ.

ವ್ಯಕ್ತಿ : ಇಲ್ಲರಿ.... (ಮುಂದೆ ಹೇಳುವನಿತರಲ್ಲಿ)

ಸತ್ಯ : (ಕಣ್ಣು ಚಿವುಟಿ) ಮತ್ತೆ ಮಾತಾಡಬ್ಯಾಡಾ....ಬ್ಯಾಡಾ.... ಸುಮ್ಕs ಆ ಸಾಲಿ ಮಾಸ್ತರ ಬೊಬ್ಬೆ ಹೇಡಿತಾನೇನು ?

ಶೀಲಾ : (ಸಮಾಧಾನಿಸುತ್ತ) ಇರಲಿ ಬಿಡು. ಸಾಹೇಬರು ಸ್ನಾನಕ್ಕೆ ಹೋಗಿದ್ದಾರೆ. ಬ್ಯಾಗ ಹೊಂಧಿಸಿ ಇಡು.

ಸತ್ಯ : ಹಂಗರ ಒಂದ ಕೆಲಸ ಮಾಡ್ರಿ....ಸಾಹೇಬರು ಜಳಕಾ ಮಾಡಿ ಬಂದ ಕೂಡ್ಲೆ ಆವರ ಕೈಯಾಗೊಂದು ಗಂಟೆ ಕೊಡ್ರಿ. ಬಾರಿಸಿಗೋಂತ ದೇವರ ಪೂಜಿ ಮಾಡ್ಲಿ. ಅಷ್ಟರಾಗ ನಾ ಇಲ್ಲಿ ಹಾಫೀಸ್ (Office) ರೆಡಿಮೇಡ್ ಮಾಡ್ತೀನಿ. (ಶೀಲಾ ನಗುತ್ತ ಹಾಲು ಹಿಡಿದುಕೊಂಡು ಒಳಗೆ ಹೋಗುವಳು)

ವ್ಯಕ್ತಿ : ಹಂಗರ ಬರ್ತೀನ್ರಿ....

Sri Vidyabharathi Book Centre, Sringeri

CC-O. In Public Domain. Digitized by eGangotri

ಸತ್ಯ : ಹೊಂಟಿಯೇನಪ್ಪಾ ಸಿದ್ದಪ್ಪ.... ಹೋಗಿ ನಾಳೆ ಮುಂಜಾನಿ ಬಾ.... ಬರೂ ಮುಂದ ಖಬರಿಟ್ಟುಗೊಂಡು ಬಾ. ಹಳೀ ಗೂಡ್ಸ್‌ಗಾಡಿ ಹಾರ್ನ್ ಹಿಡಕೊಂಡು 'ಪೊರ್ರ್ರೋ ಪೋಂ' ಮಾಡಿಕೊಂತಾ. (ವ್ಯಕ್ತಿ ಹಾಲಿನ ಪಾತ್ರೆಯೊಂದಿಗೆ ನಿರ್ಗಮನ.)

(ಸತ್ಯಪ್ಪ ಕಿವಿಯಿಂದ ಪೆನ್ಸಿಲ್ ತೆಗೆದು ಗಣಿತ ಮಾಡಲಾರಂಭಿಸುವ.)

ಮಮತಾ : (ಜೋಲುಮುಖ. ಕಣ್ಣು ಉಜ್ಜಿಕೊಳ್ಳುತ್ತ ಅಳುತ್ತ ಪ್ರವೇಶ.)

ಸತ್ಯ : ಬಾರವ್ವ....ಬಾ.... ಏನಾತ ನಿನಗ ?

ಮಮತಾ : (ಬಿಕ್ಕಿ ಬಿಕ್ಕಿ ಅಳುವಳು.)

ಸತ್ಯ : (ಅವಳನ್ನು ಕರೆದು ಮಡಿಲಲ್ಲಿ ಕೂರಿಸಿಕೊಂಡು) ಹಾಂಗ ಅಳ ಬಾರದವ್ವ. ಅವ್ವ ಹೊಡೆದಳೇನು ? ಸಾಲೀಗ ಹೋಗೂ ಮುಂದ ಅಳೂದು ಹುಡುಗರ ಚಾಳೀನ ಐತಿ. (ಮುದ್ದಿನಿಂದ) ನೋಡು ಮರಿ....ಕಣ್ಣು ಮುಚ್ಚಿಕೊ (ಅವಳ ಕಣ್ಣು ಒರೆಸುತ್ತ)

(ಅವಳು ಕಂಣು ಮುಚ್ಚುವಳು) ಹಾಂ....ಈಗ ಬಾಯಿ ಆಂ ಮಾಡು. (ಅವಳು ಬಾಯಿ ತೆರೆಯುವಳು) (ತನ್ನ ಜೇಬಿನಿಂದ ಏನೋ ತೆಗೆದು ಅವಳ ಬಾಯಿಗೆ ಹಾಕುವನು. ಅವಳು ತಕ್ಷಣ 'ಥೂ' ಎಂದು ಉಗುಳುವಳು) ಯಾಕವ್ವ ಏನಾತು. (ಉಗುಳು ನೋಡಿ) ಅರೆ, ಪೆಪ್ಪರಮೆಂಟ ಕಿಸ್ಯಾಗs ಇಟಗೊಂಡು ನಿನ್ನ ಬಾಯಾಗ ಬೀಡಿ ಹಾಕಿದ್ನ್ಯಲ್ಲವ್ವ. (ಇನ್ನೊಂದು ಕಿಸೆಯಿಂದ ಪೆಪ್ಪರಮೆಂಟ ತೆಗೆದು ಅವಳ ಬಾಯಿಗೆ ಹಾಕಿ ಕೆನ್ನೆಗೆ ಮುತ್ತಿಡುವನು)

ಸತ್ಯ : (ಅವಳನ್ನು ಸಂತೈಸುತ್ತ) ಈಗ ಸಾಲೀಗ ಹೋಗಾವಳಲ್ಲ ?

ಮಮತಾ : (ತಲೆಯಲ್ಲಾಡಿಸಿ) ಊಹೂಂ--

ಸತ್ಯ : ಹಂಗ ಹೇಳಬಾರದವ್ವ. ಸಾಲೀ ಕಲಿತು ಶ್ಯಾಣ್ಯಾ ಅನಿಸ್ನೊ ಬೇಕು.

ಮಮತಾ : ಮತ್ತೆ ನೀನ್ಯಾಕೆ ಹೋಗೊಲ್ಲ ?

ಸತ್ಯ : ನನಗ ನಿನ್ನ ಸಾಲ್ಯಾಗ ತಗೋಳ್ಳೂದಿಲ್ಲ.

ಮಮತಾ : ಮೇಡಂಗೆ ನಾ ಹೇಳ್ತೀನಿ ಬಾ.

ಸತ್ಯ : ನನ್ನ ಹತ್ರ ಪಾಟಿ ಪುಸ್ತಕಗಳಿಲ್ಲ.

Sri Vidyabharathi Book Centre, Sringeri

CC-O. In Public Domain. Digitized by eGangotri

ಮಮತಾ : ನಾ ಕೊಡ್ತೀನಿ ನಂದು. (ಅವನ ಕೊರಳಿಗೆ ಪಾಟಿಚೀಲ ಹಾಕು ವಳು.)

ಸತ್ಯ : (ಏನೋ ಯೋಚಿಸಿ) ಹಂಗಾರ ಒಂದು ಕೆಲಸ ಮಾಡೂಣು. ಈ ಹೊತ್ತು ನೀ ಸಾಲಿಗ ಹೋಗು ನಾಳಿ ನಾ ಹೋಗ್ತೀನಿ.

ಮಮತಾ : ಬೇಡ, ಈ ಹೊತ್ತು ನೀನೇ ಹೋಗು....

ಸತ್ಯ : ನಾ ಸಾಲೀಗ ಹ್ವಾದರ ಇಲ್ಲಿ ನನ್ನ ಕೆಲಸಾ ಮಾಡಾವ್ರ ಯಾರು ?

ಮಮತಾ : ನಾ ಮಾಡತೀನಿ.

ಸತ್ಯ : ನೀ ಏನೇನ ಮಾಡಾಕಿ ಹೇಳು.

ಮಮತಾ : ಕಾಯಿಸಲ್ಲೆ ತತ್ತೀನಿ. ಗಿರಣಿಗೆ ಹೋಗಿ ಬತ್ತೀನಿ. ಬೀಡಿ ಸೇದ್ತೀನಿ. (action) ನಂಬರ್ ಮಾಡ್ತೀನಿ. (action) (ಕುರ್ಚಿ ಯಲ್ಲಿ ಹಾರಿ ಕುಳಿತು ಕಾಲೆರಡು ಮೇಲೆತ್ತಿ ಕುಳಿತು, ತಲೆ ಬಗ್ಗಿಸಿ ಗೊರಕೆ ಹೊಡೆಯುತ್ತ) ನಿದ್ದೆ ಮಾಡ್ತೀನಿ.

ಸತ್ಯ : (ಅವಳನ್ನೆತ್ತಿ ಮುದ್ದಾಡುತ್ತ) ಈಗಿನ ಹುಡುಗರು ಎಷ್ಟು ಹುಷಾರಪ್ಪ.

ಮಮತಾ : ನೀ ಈವತ್ತು ಶಾಲೆಗೆ ಹೋಗ್ತಿಯಲ್ಲ ಮಾವಾ.

ಸತ್ಯ : (ದೈನ್ಯದಿಂದ) ಈ ಹೊತ್ತು ಒಂದೇ ದಿನ ನನಗ ಈ ಸೂಟಿ ಕೊಡು. ನಾಳಿಂದ ನಾ ಸಾಲಿ ತಪ್ಪಿಸೂದಿಲ್ಲ.

ಮಮತಾ : (ಶಿಕ್ಷಕರ ದರ್ಪದಿಂದ) ಊಹೂಂ .... ಈಹೊತ್ತು ಶಾಲೆಗೆ ಹೋಗಲೇಬೇಕು.

ಸತ್ಯ : (ಅವಳ ಗಲ್ಲಕ್ಕೆ ಚಿಟಕೆ ಹೊಡೆದು) ಊಹೂಂ.... ಇವತ್ತ ನೀ.... ನಾಳಿ ನಾ ....

ಮಮತಾ : ಈ ಹೊತ್ತು ನೀನೇ ಹೋಗು ಪೆಪ್ಪರ್ ಮೆಂಟ ಕೊಡ್ತೀನಿ. (ಇಬ್ಬರೂ 'ನೀ ಹೋಗು, ನೀನೇ ಹೋಗು' ಎಂದು ಕೂಗಿ ಕುಣಿಯು ತ್ತಿರಲು ಸತೀಶ ಬರುವನು. ೩೫-೪೦ ವರ್ಷ ಪ್ಯಾಂಟು-ಶರ್ಟ-ಟೈ- ಬೂಟು. ನೀಟಾಗಿ ಬಾಚಿದ ತಲೆಗೂದಲು. ಕೈಯಲ್ಲಿ ಬ್ರೀಫ್‌ಕೇಸ್. ಸತೀಶ ಬಂದೊಡನೆ ಒಂದು ಕ್ಷಣ ನೀರವ. ಎಲ್ಲರೂ ಗೊಂಬೆ ನಿಂತಂತೆ)

ಸತೀಶ : ಬಾ ಮಮತಾ.... ನಿನ್ನ ಸ್ಕೂಲಿಗೆ ಬಿಟ್ಟು ಹೋಗ್ತೀನಿ.

Sri Vidyabharathi Book Centre, Sringeri

CC-O. In Public Domain. Digitized by eGangotri

ಮಮತಾ : ಊಹೂಂ....ನಾ ಬರೋಲ್ಲ. ಈಹೊತ್ತು ಮಾಮಾನ್ನ ಶಾಲೆಗೆ ಬಿಟ್ಟು ಹೋಗು.

ಸತೀಶ : ಛೇ .... ಛೇ .... ಸ್ಕೂಲಿಗೆ ಹೋಗುವಾಗ ಹೀಗೆಲ್ಲ ಹುಡುಗಾಟ ಸರಿಯಲ್ಲ.

ಮಮತಾ : ಹುಡುಗಾಟ ಅಲ್ಲ ಪಪಾ.... ನಿಜವಾಗ್ಲೂ. ಈವೊತ್ತಿನಿಂದ ಒಂದು ದಿನ ಮಾಮಾ ಶಾಲೆಗೆ ಹೋಗ್ತಾನೆ. ನಾನು ಒಂದು ದಿನ ಹೋಗ್ತೀನಿ. ಅಲ್ವೆ ಮಾಮಾ ?

ಸತ್ಯ : (ಮುಗುಳು ನಗೆ)

ಮಮತಾ : (ಸತ್ಯನ ಬಳಿ ಬಂದು) ಯಾಕೆ ಹಂಗ ಮೀಸೇಲೆ ನಗ್ತೀ ಮಾಮಾ.... ಹೇಳಿ ಬಿಡು ಪಪ್ಪಾಗೆ.... ಈ ಹೊತ್ತು ನಾನೇ ಶಾಲೆಗೆ ಬತ್ತೀನಿ ಅಂತ.

ಸತ್ಯ : (ಪುಸಲಾಯಿಸುತ್ತ) ಈ ಹೊತ್ತು ನೀ ಹೋಗು ಮರಿ.... ನಾಳಿಂದ ನಾ ಹೋಗ್ತೀನಿ.

ಮಮತಾ : ಊಹೂಂ... ಅದೆಲ್ಲ ಆಗೋಲ್ಲ.

ಸತೀಶ : ಈ ಹೊತ್ತು ಯಾರು ಶಾಲೆಗೆ ಬರ್ತಾರೊ ಅವರಿಗೆ ನಾ ಐಸ್‌ಕ್ರೀಂ ಕೊಡ್ತೀನಿ.

ಮಮತಾ : (ಯೋಚಿಸಿ) ಹಂಗಾರೆ ನಾನೇ ಬತ್ತೀನಿ ತಾಳು. ಐಸ್‌ಕ್ರೀಂ ಕೊಡಿಸ್ತಿಯಲ್ಲ ?

ಸತೀಶ : ನಿನಗೆ ಸುಳ್ಳು ಹೇಳ್ತೀನೇನೆ ?

ಮಮತಾ : (ಕೈ ಮುಂದೊಡ್ಡಿ) ಪ್ರಾಮೀಸ್....!

ಸತೀಶ : Yes...... Promise. (ಅವಳ ಕೈಮೇಲೆ ಕೈಇಟ್ಟು ಕರೆದುಕೊಂಡು ಹೋಗುವನು,)

ಸತ್ಯ : ಅವರು ಹೋದುದನ್ನು ಗಮನಿಸುತ್ತ) ಹುಡುಗರು ಸಾಲಿಗ ಹೋಗ ಬೇಕಾರೂ ಇಂದ 'ಮಾಮೂಲು' ಕೇಳ್ತಾರ. ಅದರಾಗ ದೇವರ ಕೇಳೂದೇನ ಆಶ್ಚರ್ಯ ಐತಿ. (ದೇವರಿಗೆ ಕೈ ಜೋಡಿಸಿ....) ದೇವರೇ ನಿನ್ನ ಮಾಮೂಲು ನಾ ತಪ್ಪಿಸೂ ಮಗಾ ಅಲ್ಲ. ಹ್ಯಾಂಗಾರೂ ಮಾಡಿ ನನ್ನ ಅರ್ಜಿ ವಿಚಾರಣಿ ಮಾಡಿ ಬಂಪರ್ ಬಹುಮಾನ ನನಗs ಬರೂಹಂಗ ಮಾಡು. (ಎಂದು ಭಯಭಕ್ತಿಯಿಂದ ಕೈಮುಗಿದು

Sri Vidyabharathi Book Centre, Sringeri

CC-O. In Public Domain. Digitized by eGangotri

ಬಾಗಿಲು ಹಾಕಿಕೊಂಡು ಒಳಗೆ ಹೋಗುತ್ತಿರಲು Calling Bell ಸದ್ದು)

ಸತ್ಯ : ಎಂಥಾ ಅಡಮುಟ್ಟ ಗಿರಾಕಿ ಗಂಟುಬಿದ್ದನಲ್ಲಪ್ಪ. ಈ ಸಿದ್ಧಪ್ಪ ಹಾಲಗಾರ ಅಂದರ ದಿನಾ ಬಂದಾಗ ಏನಾದರೊಂದು ಮಸ್ಕತಿ ಹೊಕ್ಕಾನ. ಮತ್ತ ಬಂದ ಹಿಂಗ ಎಮ್ಮಿ ಗಂಟಲ ಹಿಚಕದ್ಹಾಂಗ ಕಾಳಿಂಗ ಬೆಲ್ ಒತ್ತತಾನ. (ಅತ್ತ ಇತ್ತ ನೋಡುತ್ತ) ಇವತ್ತೇನಾರ ಎಮ್ಮಿಗಿಮ್ಮಿನ ಮರತ ಹೋದನ್ರಿ ಅನ್ನೂದಿಲ್ಲಲ್ಲ.... (ಎಂದು ಬಾಗಿಲು ತೆರೆಯುವನು. ಒಂದು ಕ್ಷಣ ಅವಾಕ್ಕಾಗಿ ನಿಂತು ನೋಡುತ್ತಾನೆ.... ಬಳಿಕ ಒಂದೊಂದೇ ಹೆಜ್ಜೆ ಹಿಂದೆ ಸರಿಯುತ್ತಾನೆ. ಒಬ್ಬ ಹಿಪ್ಪಿ ಯಂಥ ವ್ಯಕ್ತಿ ಬರುತ್ತಾನೆ. ಒಬ್ಬರಿಗೊಬ್ಬರು ಎರಡೆರಡು ಬಾರಿ ಅಡಿ ಯಿಂದ ಮುಡಿಯವರೆಗೂ ಪರಸ್ಪರ ನೋಡಿಕೊಳ್ಳುತ್ತಾರೆ. ಹಿಪ್ಪಿ ಯದು ಟೈಟ ಪ್ಯಾಂಟು, ಅದಕ್ಕೆ ೨-೩ ಕಡೆ ಬೇರೆ ಬೇರೆ ಬಣ್ಣದ ತೇಪೆ ಹಾಕಿದೆ. ತಲೆಗೂದಲು ಕತ್ತಿನವರೆಗೂ ಇಳಿಬಿದ್ದಿದೆ. ಅದಕ್ಕೆ ನೀರು ಎಣ್ಣೆ ಕಾಣಿಸಿ ಎಷ್ಟು ದಿನವಾಯಿತೋ ? ಹೆಂಗಸರ ರವಿಕೆಯ ಚಿಟ್ಟೆಯಂಥ ಬಟ್ಟೆ. ಕೊರಳಿಗೆ ೨-೩ ಮಣಿಸರ. ಒಂದು ಸರಕ್ಕೆ ಒಂದು ಚಿಕ್ಕ Photo ಇಳಿಬಿಟ್ಟಿದ್ದಾನೆ. ಕೈಗೆ ೨-೩ ನಕಲಿ ಉಂಗುರ. ಹೆಗಲಿಗೊಂದು ಬಗಲಚೀಲ. ಅದರಲ್ಲಿ ಏನೇನೋ ತುಂಬಿದ್ದಾನೆ. ಸತ್ಯ ಕಂಗಾಲಾದ ಕಣ್ಣು ಬಿಡುತ್ತಾನೆ.)

ಜಾನಿ : How are you ?

ಸತ್ಯ : (ಅವನನ್ನು ನೋಡುವುದರಲ್ಲಿ ಮೈಮರೆತಿದ್ದಾನೆ)

ಜಾನಿ : (ಸಮೀಪಿಸಿ) Hullow How are you ?

ಸತ್ಯ : (ತಲೆ ಕೊಡವಿ) ಹೌಂದರಿ ಹೌಹಾರೇ ಬಿಟ್ಟೇನಿ.

ಜಾನಿ : No.... No.... How are you.

ಸತ್ಯ : ಹೂಂ ರೀ. ನನಗs ಹೌಹಾರಿದ್ಹಾಂಗ ಆಗ್ತೈತಿ.

ಜಾನಿ : What a fool. (ಮುಖದಲ್ಲಿ ತಿರಸ್ಕಾರ)

ಸತ್ಯ : ಏನಂದ್ರಿ. ಫ್ರೂಲ ಕಟ್ಟಿಸಾಕ ಬಂದಿ ಅಂತೇನು ?

ಜಾನಿ : No.... No.... I Mean....

Sri Vidyabharathi Book Centre, Sringeri

CC-O. In Public Domain. Digitized by eGangotri

ಸತ್ಯ : ಬ್ಯಾಡರಿ; ನಿಮಗ ಕೈಮುಗೀತೇನಿ. ಈ ಮೀನ ಸುದ್ದಿ ಮಾತ್ರ ತೆಗೀಬ್ಯಾಡ್ರಿ. ನನಗ ಈ ಮೀನ ಸುದ್ದಿ ತೆಗೆದ್ರ ಹೊಟ್ಯಾಗ ಸಮುದ್ರ ಗುಡಗುಟ್ಟಾಂಗ ಆಗತೈತಿ.

ಜಾನಿ : ನಿನಗ ಖನ್ನಡ ಬರುವುದಿಲ್ಲವೆ ?

ಸತ್ಯ : ಏನಂದ್ರಿ.... ಕನ್ನಡ ? ಬರದೇ ಏನ್ರಿ ? ಆದರ ನೀವು ಇಷ್ಟೊತ್ತನಾ ಮಾತಾಡಿದ್ದು ಕನ್ನಡ ಏನ್ರಿ ?

ಜಾನಿ : ಅದು ನಮ್ಮ Step Mother toungue ಇಂಗ್ಲಿಷ.

ಸತ್ಯ : ಹೂಂ.... ಹಂಗನ್ರಿ....

ಜಾನಿ : ನೀನು ಸ್ಕೂಲಿಗೆ ಹೋಗಲಿಲ್ಲವೆ ?

ಸತ್ಯ : ಹೋಗೇನ್ರಿ, ಮೂರು ವರ್ಷದ ಮ್ಯಾಗ ಎರಡು ತಿಂಗಳ ಸಾಲೀಗ ಮಣ್ಣು ಹೊತ್ತೇನ್ರಿ !

ಜಾನಿ : ಅಂದರೆ School building ಕೆಲಸಕ್ಕೆ ಹೋಗಿದ್ದೀಯೇನು ?

ಸತ್ಯ : ಸಾಲಿ ಕಟ್ಟೊ ಕೆಲಸಕ್ಕಲ್ರಿ. ಮಣ್ಣು ಹೊರೂದು ಅಂದ್ರ ಸಾಲೀಗ ಹೋಗೂದು ಅಂತ ಹಿರೇರು ಮಾಡಿದ ಅರ್ಥ ಐತ್ರಿ.

ಜಾನಿ : ಹಾಗಾದರೆ Third form ಪಾಸ ಮಾಡಿದ್ದೀಯೇನು ?

ಸತ್ಯ : ಇಲ್ರಿ; ನಮ್ಮ ಕಾಲದಾಗ ಫಾರ್ಮಗೀರ್ಮ ಇಲ್ಲಾಗಿತ್ತರಿ.

ಜಾನಿ : No.... No.... I Mean ಈಯುತ್ತೆ.

ಸತ್ಯ : ಓ ಹಂಗಂತೀರೇನು. ಆ ದಡ್ಡ ಮಾಸ್ತರ ನನಗ ಈಯುತ್ತ್ಯಾಗ ಹೋಗಾಕs ಬಿಡಲೇ ಇಲ್ಲರಿ.

ಜಾನಿ : ಅಂದರೆ ?

ಸತ್ಯ : (ಸೋಪಾ ತೋರಿಸಿ) ನಿಮ್ಮ ದೇವರಾಗಿವರಾ ಇಟಗೊಂಡು ಕುಂತ ಗೋರಿ. ನನ್ನ ಸಾಲೀ ಕತಿ ಹೇಳ್ತೀನಿ. (ಆತ ಕುಳಿತುಕೊಳ್ಳುವ) (ಅವನ ಸಮೀಪ ಹೋಗಿ.... ಮೆಲ್ಲನೆ) ಅಂದಾಂಗ ನಿಮಗ ಮುಂದಿನ ಮನೇಗ ಹೋಗಾಕ ವ್ಯಾಳ್ಯಾ ಆಗೂದಿಲ್ಲೇನ್ರಿ ?

ಜಾನಿ : No.... No.... (ಒಮ್ಮೆಲೆ ಅರ್ಥವಾಗಿ – ಸಿಡಿದು) ರ್‍ಯಾಸ್ಕಲ್ ! ನಾನು ಮುಂದಿನ ಮನೇಗೆ ಹೋಗೋನ್ಹಾಗೆ ಕಾಣ್ತೇನೆಯೇ ?

ಸತ್ಯ : (ಅಷ್ಟೇ ಶಾಂತವಾಗಿ) ಹಾಂಗs ಅನ್ನಿಸ್ತು ಬಿಡ್ರಿ.

Sri Vidyabharathi Book Centre, Sringeri

CC-O. In Public Domain. Digitized by eGangotri

ಜಾನಿ : ನಾನು ಇದೇ ಮನೆಗೆ ಬಂದಿದ್ದೀನಿ.

ಸತ್ಯ : ಹಂಗಾರ ಕುಂತಗೋರಿ. ಸಾಲೀ ಕತಿ ಸುರು ಮಾಡಲೇನ್ರಿ ?

ಜಾನಿ : ಹೂಂ.

ಸತ್ಯ : ಆ ಮಾಸ್ತರಗ ದಡ್ಡ ನನ್ಮಗಾ ಅಂವನಲ್ಲರಿ.... ಯಾಕಂತಕೇಳ್ರಿ....

ಜಾನಿ : (ನೀರಸವಾಗಿ) ಯಾಕೆ ?

ಸತ್ಯ : ಹಾಂಗ ಬರ್ರೀ ದಾರೀಗ. ನೋಡ್ರಿ, ನಾ ಮಾತಾಡೂ ಮುಂದ ಬ್ಹಾಳ ಆಲೋಚನಿ ಮಾಡಿ ಮಾತಾಡತೇನ್ರಿ.

ಜಾನಿ : ಹೂಂ. ಸರಿ; ಮುಂದೆ ?

ಸತ್ಯ : ಅಂವಾ ದಡ್ಡ ಮಾಸ್ತರ ಅಷ್ಟs ಅಲ್ಲರಿ.... ಅಂವಾ ಗೊಡ್ಡ ಮಾಸ್ತರಾನೂ ಹೌದ್ರಿ. ಯಾಕಂತ ಕೇಳ್ರಿ.

ಜಾನಿ : ಯಾಕೆ ?

ಸತ್ಯ : ಗೊಡ್ಡ ಅನ್ನಾಕ ಅಂವಗ ಮಕ್ಕಳs ಆಗಲಿಲ್ಲರಿ. ದಡ್ಡ ಅನ್ನಾಕ ನಂದೊಂದೆ ಉದಾಹರಣೆ ಸಾಕ್ರಿ. ನಾ ಮೂರು ವರ್ಷದ ವ್ಯಾಗ ಎರಡು ತಿಂಗಳು ಸಾಲಿಗೆ ಹೋಗೀನೀ ಅಂದ್ರ ಎಷ್ಟು ದಿನಾ ಆತು ಹೇಳ್ರಿ ನೀವ ಸಾಲೀ ಕಲಿತ ಮಂದಿ.

ಜಾನಿ : (ತಲೆ ಕೆರೆದುಕೊಂಡು) ಹೋಗಲಿ ಬಿಡು. ಮುಂದೆ ಹೇಳು.

ಸತ್ಯ : ಅಷ್ಟು ದಿನ ಸಾಲೀಗ ಹ್ವಾದರೂ ಈ ಮಗಾ ನನಗ ಪಾಟಿವ್ಯಾಳ 'ಸಿರಿ ಗಣೇಸಾಯ ನಮ್ಮಹ' ಹಾಕಿ ಕೊಡೂದು ಬಿಡಲೇ ಇಲ್ಲ ನೋಡ್ರಿ. ಬ್ಯಾರೇವು ಹಾಕಿ ಕೊಡಲೇ ಅಂದ್ರs ಮೊದಲ ಇದನ್ನು ಕಲೀ; ಆಮ್ಯಾಲ ಹಾಕಿಕೊಡ್ತೀನಿ ಅನ್ನಾಂವಾ. ಅದನ್ನs ಕಲೀ ಅದನ್ನs ಕಲೀ ಅಂತ ನನಗ ಅಂವಾ ಕಲೀ ಗಂಟ ಬಿದ್ಹಾಂಗ ಬಿದ್ದನ್ರಪಾ· ನಮ್ಮಪ್ಪ ಮನೀಗ ಬಂದಾಗ ಪಾಟಿ ನೋಡಾಂವಾ. ದಿನಾ ಅದನ್ನs ಬರೀತಾನೆ ಅಂತ ನ್ಯೈಮುರಿ ಕಡಬ ಕೊಡಾಂವಾ. ಆ ಮಾಸ್ತರ ನನಗ ಮುಂದ ಒಂದ ಆಕ್ಷರ ಹಾಕಿ ಕೊಡಲಿಲ್ಲ ನೋಡ್ರಿ.

ಜಾನಿ : **Why Why** ಯಾಕೆ ?

ಸತ್ಯ : ನೀವs ಹೇಳ್ರಿ ನೋಡೂಣು.

Sri Vidyabharathi Book Centre, Sringeri

ಜಾನಿ : (ಆಕಳಿಕೆ ತೆಗೆಯುತ್ತ) ನೀನೇ ಹೇಳಿ ಬಿಡು.

CC-O. In Public Domain. Digitized by eGangotri

ಸತ್ಯ : ಯಾಕೆ ಅಂದ್ರ ಅಂವಗ 'ಸಿರಿ ಗಣೇಸಾಯ ನಮ್ಮಃಹ' ಬಿಟ್ಟು ಬ್ಯಾರೆ ಅಕ್ಷರ ಬರತಿದ್ದಿಲ್ರಿ.

ಜ್ಞಾನಿ : (ಚಪ್ಪಾಳೆ ತಟ್ಟಿ) Good, wonderful joke !

ಸತ್ಯ : ಇಂಥಾ ಮಾಸ್ತರ ಹಂತ್ಯಾಕ ಕಲಿಯೂದೇನೈತಿ ಅಂತ ಬಿನ್ನೆ ಶ್ತ್ಯಾಗ ಮೂರು ವರ್ಷ ಗುಪ್ಡ್ಯಾಡಿ ಗುದ್ಡ್ಯಾಡಿ ಮುಂದ ಕುರಿ ಕಾಯಾಕ ಹೊಂಟೆರಿ. (ಆಲೋಚಿಸಿ) ಅಂದ್ಹಾಂಗ ನೀವು ಯಾರ್‍ರಿ ?

ಜ್ಞಾನಿ : (ಮಣಿಸರಕ್ಕೆ ಕಟ್ಟಿದ ಫೋಟೋ ಮುಟ್ಟಿ) ಹರೇ ರಾಮ ಹರೇ ಕೃಷ್ಣ.

ಸತ್ಯ : (ತಲೆದೂಗಿ) ಓ.... ಹಂಗೇನ್ರಿ ? ಎಲ್ಲಿಂದ ಬಂದ್ರಿಯಪ್ಪ ?

ಜ್ಞಾನಿ : (ಸಿಡುಕಿನಿಂದ) ಮ.... ಮಸಣದಿಂದ !

ಸತ್ಯ : ಮಸಣಕ್ಕೆ ಹ್ವಾದವರು ತಿರುಗಿ ಬರ್‍ತಾರೇನ್ರಿ. ಅಂದ್ಹಾಂಗ ಭೂತ ಗೀತ ಆಗಿ ಬಂದ್ರೇನು ಮತ್ತೆ ?

ಜ್ಞಾನಿ : ಹೆಣಾ ಹೊತ್ಕೊಂಡು ಹೋಗಿದ್ದೆ.

ಸತ್ಯ : ಪೂರಾ ಸುಟ್ಟು ಮಾರಿಗೆ ಬೂದಿ ಹಚಗೊಂಡು ಬಂದ್ರೇನ್ರಿ ?

ಜ್ಞಾನಿ : What are you talking.... fool. ನಾನು ಯಾರು ಗೊತ್ತೇ ?

ಸತ್ಯ : ಹೌಂದರಿ.... ನೀವು ಮಸಣದಿಂದ ಬಂದ ಭೂತ ಆದೀರಿ.

ಜ್ಞಾನಿ : ಅದಲ್ಲ ನಾನು ಹೇಳಿದ್ದು.

ಸತ್ಯ : ಮತ್ತೇನ್ರಿ ಹಂಗಾರ.

ಜ್ಞಾನಿ : ನಾನು ನಿನ್ನ ಮಾವ.

ಸತ್ಯ : ನನಗಿನ್ನೂ ಮದಿವೀನ ಆಗಿಲ್ರೀ.

ಜ್ಞಾನಿ : ಆಗದಿದ್ರೆ ಮಾಡೇ ಹೋಗ್ತೀನಿ.

ಸತ್ಯ : ಬ್ಯಾಡ್ರಿ. ಅಜೊಂದ ಭಾನಗಡಿ ಮಾಡಬ್ಯಾಡ್ರಿ. ಮದವಿ ಆದ ಮಂದಿನ್ನ ನೋಡಿ ಮದವೀನs ಬ್ಯಾಡಾ ಅಂತ ಬಿಟ್ಟೇನಿ.

ಜ್ಞಾನಿ : ಈ ಮನೆಯ ಯಜಮಾನರು ಯಾರು ಗೊತ್ತೇ ?

ಸತ್ಯ : ನಮ್ಮ ಸಾಹೇಬರು.

ಜ್ಞಾನಿ : ಅವರು ನಮ್ಮ Sister's husband.

ಸತ್ಯ : ಹಂಗಂದ್ರೇನ್ರಿ ?

Sri Vidyabharathi Book Centre, Sringeri

CC-O. In Public Domain. Digitized by eGangotri

ಜಾನಿ : ನನ್ನ ಅಕ್ಕನ ಗಂಡ ಅಂತ.

ಸತ್ಯ : ಹಂಗೇನ್ರಿ; ಇಷ್ಟ ದಿನ ನೀವೆಲ್ಲಿದ್ರಿ ?

ಜಾನಿ : ಭಾರತದ ಪ್ರವಾಸಕ್ಕೆ ಹೋಗಿದ್ದೆ. ಇನ್ನೊಂದು ತಿಂಗಳಲ್ಲಿ ಪರದೇಶಕ್ಕೂ ಹೋಗ್ತೀನಿ.

ಸತ್ಯ : ಅಲ್ಲಿಂದ ಹಂಗ ಚಂದ್ರನ ವ್ಯಾಗೂ ಹೋಗಿ ಬರ್ರಿ. ಅಲ್ಲಿ ನಿಮಗೊಂದು ಹಾಫೀಸ ತೆಗೀರಿ.

ಜಾನಿ : (ಚಿಟಿಕೆ ಹೊಡೆದು) Yes, really very good idea. ಈಗ ನಮ್ಮ ಅಕ್ಕ ಎಲ್ಲಿದ್ದಾರೆ ?

ಸತ್ಯ : ನೋಡಿ ಬರ್ತಿನಿ....ನಿಲ್ರಿ....(ಒಳಗೆ ಹೋಗುವನು. ಶೀಲಾ ಹೊರಗೆ ಬರುವಳು)

ಜಾನಿ : Hulloo dear sister how are you ?

ಶೀಲಾ : ಏನೋ ಇದು ವೇಷಾ....ಯಾವಾಗ ಬಂದೆ ?

ಜಾನಿ : ಈಗ ಬಂದೆ ಹೃಷಿಕೇಶದಿಂದ.

ಶೀಲಾ : ಒಳಗೆ ಹೋಗಿ ಬಟ್ಟೆ ಬಿಚ್ಚ್ಯಾಕಿ ಸ್ನಾನ ಮಾಡು ಹೋಗು.

ಜಾನಿ : Daily bath ? What a dirty system ?

ಶೀಲಾ : ದಿನಾ ಸ್ನಾನ ಮಾಡೋದು ಚಿಟ್ಟ್ಯೇನೊ, ಮುತ್ಮಾಳ.

ಜಾನಿ : (ಗಂಭೀರವಾಗಿ) ಮೈ ಚರ್ಮ ತೊಳೆದರೇನು ಬಂತು ಸಿಸ್ಟರ್. ಮುಖ್ಯ 'ಅಂತರಂಗ ಬಹಿರಂಗ ಶುದ್ಧಿ' ಯಿರಬೇಕು. ನೀವೆಲ್ಲ ಹೀಗೆ ದಿನಕ್ಕೆರಡು ಬಾರಿ ಸ್ನಾನ ಮಾಡಿಯೇ ನೀರಿನ ಕ್ಷಾಮ ಬಂದಿದೆ.

ಶೀಲಾ : ಅದೆಲ್ಲ ಇರಲಿ.... ಹೋಗೋ ಒಳಗೆ.... ಕಾಫಿಯಿಟ್ಟಿದ್ದೀನಿ.

ಜಾನಿ : ಕಾಫಿ....? Good ..... ಎಲ್ಲಿದೆ ಹೇಳು ಮುಗಿಸಿ ಬಿಡ್ತೀನಿ. (ಎಂದು ಛಂಗನೆ ಹಾರಿ ಒಳಗೆ ಹೋಗುವ. ಶೀಲಾ ಹಿಂಬಾಲಿಸುವಳು. ಸ್ವಲ್ಪ ಹೊತ್ತು ನೀರವ. ....ಸತ್ಯಪ್ಪ ಬಂದು ಏನೋ ಗುಣಗುಣಿಸುತ್ತ ತಿಪಾಯಿ, ಕುರ್ಚಿ, ಸೋಫಾ ಸ್ವಚ್ಛಗೊಳಿಸಿ ಒಳಗೆ ಹೋಗುವನು. ಶೀಲಾ ಒಳಗಡೆಯಿಂದ ಪತ್ರಿಕೆ ಹಿಡಿದುಕೊಂಡು ಬಂದು ಓದುತ್ತ ಕುಳಿತುಕೊಳ್ಳುವಳು. ([illegible] ಂಗಳು ತೇಲಿಬರುತ್ತಿರಬೇಕು.)

Sri Vidyabharathi Book Centre, Sringeri

CC-O. In Public Domain. Digitized by eGangotri

[ಭಯಾನಕ ಮುಖಮುದ್ರೆಯ ವ್ಯಕ್ತಿಯ ಪ್ರವೇಶ. ಹಿನ್ನೆಲೆಯಲ್ಲಿ ಭೀಕರ ನಾದ.... ತೊನ್ನು ಕಲೆಗಳಿಂದ ಆವನ ಅಂಗ ವಿಕಾರವಾಗಿ ತಾಣುತ್ತದೆ. ಸ್ವಲ್ಪ ಮಾಸಿದ ಧೋತರ, ಜುಬ್ಬಾ, ತಲೆಗೆ ಗಾಂಧಿ ಟೋಪಿ. ಎಲ್ಲವೂ ಖಾದಿ. ಬಲಗೈಯಲ್ಲಿ ಉರಿಯುವ ಬೀಡಿ. ಅದನ್ನು ನಾಲ್ಕನೆಯ ಮತ್ತು ಐದನೆಯ ಬೆರಳ ಸಂದಿನಲ್ಲಿ ಹಿಡಿದು ಮುಷ್ಟಿಕಟ್ಟಿ ಸೇದುವ ಅಭ್ಯಾಸ. ದೀರ್ಘವಾಗಿ ದಮ್ಮು ಎಳೆದು Stage ತುಂಬ ಹೊಗೆ ಬಿಡುತ್ತಾನೆ. ಎಡಗೈಯಲ್ಲಿ ಕೆಂಪು ರಿಬ್ಬನ್ ಕಟ್ಟಿದ ಒಂದು packet. ಒಂದು ಕಾಲು ಕೊಂಚ ಗಿಡ್ಡವಾಗಿದೆ. ಒಂದು ಕಣ್ಣು ವಕ್ರದೃಷ್ಟಿ ತೋರಿಸುತ್ತದೆ. ವ್ಯಕ್ತಿ ಬಡಕಲಾಗಿದ್ದರೂ ದನಿಗೆ ಮೈಕಿನ ಅವಶ್ಯಕತೆಯಿಲ್ಲ. ಮುಖಕ್ಕೆ ಫ್ರೆಂಚ ಕಟ್ ಮೀಸೆ.]

ನಕುಲ : (ಪ್ರವೇಶಿಸಿ ಅತ್ತಿತ್ತ ಬೆಕ್ಕಿನಂತೆ ಕಣ್ಣಾಡಿಸುತ್ತಾನೆ. ಶೀಲಾ ನೋಡಿ ಗಾಬರಿಯಿಂದ ಎದ್ದು ನಿಲ್ಲುತ್ತಾಳೆ) (ದೇಶಾವಾರದ ನಗೆ) ಏನು ಮಾಡ್ತಿದ್ದೀರಿ ?

ಶೀಲಾ : (ಗರಬಡಿದವಳಂತೆ ನಿಂತಿದ್ದಾಳೆ. ಕೈಯಲ್ಲಿ ಹಿಡಿದ ಪೇಪರಿನಿಂದ ಅವಳು ಕಂಪಿಸುತ್ತಿದ್ದಾಳೆಂಬುದು ತಿಳಿಯಬೇಕು.)

ನಕುಲ : (ದಂ ಎಳೆದು ಗಂಭೀರಭಾವ) ನಾನು ಏನು ಕೇಳಿದೆ ?

ಶೀಲಾ : (ಉಗುಳು ನುಂಗಿ) ಯಾ....ಯಾ....ಯಾರು ನೀವು ?

ನಕುಲ : ಇದು ನನ್ನ ಪ್ರಶ್ನೆಗೆ ಉತ್ತರವಲ್ಲ. ಇನ್‌ಸ್ಪೆಕ್ಟರ್ ಮುಂಧೆ ಕನ್ನಡ ಶಾಲೆ ಮಾಸ್ತರರು ಮಾಡಿದ್ಹಂಗೆ ಮಾಡಬೇಡಿ.

ಶೀಲಾ : ನೀವೇನು ಕೇಳಿದಿರಿ ?

ನಕುಲ : ಕೇಳಿದ ಪ್ರಶ್ನೆ ಪುನಃ ಪುನಃ ಕೇಳಲು ನಾನೇನು ಬಸ್ ಕಂಡಕ್ಟರ್ ನಲ್ಲ.

ಶೀಲಾ : (ಜ್ಞಾಪಿಸಿ).... ಹಾಂ.... ನಾನು.... ನಾನು ಪೇಪರ ಓದ್ತಾ ಇದ್ದೆ.

ನಕುಲ : ಚನ್ನಾಗಿ ನೋಡಿ ಓದಿದಿರಾ ?

ಶೀಲಾ : ಯಾಕೆ ?

ನಕುಲ : ಇದು ನನ್ನ ಪ್ರಶ್ನೆಗೆ ಉತ್ತರವಲ್ಲ,

ಶೀಲಾ : ನೋಡದೆ ಪೇಪರ್ ಓದೋದುಂಟೆ ?

Sri Vidyabharathi Book Centre, Sringeri

CC-O. In Public Domain. Digitized by eGangotri

ನಕುಲ : ಕೆಲವರು ಪೇಪರ್ ಓದೋದು fashion ಅಂತಾ ತಿಳೀತಾರೆ. ಇನ್ನು ಕೆಲವರು ಕೈಯಲ್ಲಿ ಪೇಪರ್ ಹಿಡಿದು ಏನೇನೋ ಆಲೋಚಿಸುತ್ತಿರುತ್ತಾರೆ. ಉಳಿದವರಿಗೆ ಪೇಪರ್ ಓದೋದು ಹ್ಯಾಬಿಟ್ ಆಗಿರುತ್ತೆ.

ಶೀಲಾ : ನನಗೂ ಅಷ್ಟೇ.... ಪೇಪರ್ ಓದೋ ಅಭ್ಯಾಸ.

ನಕುಲ : ಈ ಹೊತ್ತಿನ ತಾರೀಖು ಎಷ್ಟು ?

ಶೀಲಾ : (ಕ್ಯಾಲೆಂಡರ್ ಕಡೆ ದೃಷ್ಟಿ ಹಾಯಿಸಿ) ಐದು.

ನಕುಲ : ಅದಕ್ಕೇ ಕೇಳಿದ್ದೆ ನೀವು ಚನ್ನಾಗಿ ಪೇಪರ್ ಓದಿದ್ದೀರಾ ಅಂತ ? ಇಂದಿನ ತಾರೀಖು ಐದಲ್ಲ ... ಒಂಬತ್ತು. ಆದಿರಲಿ, ಈ ತಿಂಗಳು ಯಾವುದು ಗೊತ್ತುಂಟೆ ?

ಶೀಲಾ : ಶಾಲೆಯ ಹುಡುಗರಿಗೆ ಪ್ರಶ್ನೆ ಕೇಳಿದ್ಹಾಗೆ ಕೇಳ್ತೀರಲ್ರಿ ?

ನಕುಲ : ಶಾಲೆಯ ಹುಡುಗರಿಗೆ ತಾರೀಖು ಕೇಳಿದರೆ ತಿಂಗಳು, ತಿಥಿ, ವಾರ, ನಕ್ಷತ್ರಾದಿ ಪಂಚಾಂಗವನ್ನೇ ಉಸುರಿ ಬಿಡ್ತಾರೆ. ಯಾಕಂದರೆ ಪಠ್ಯೇತರ ಚಟುವಟಿಕೆಗಳಲ್ಲಿ ತುಂಬ 'ಬಿಸಿ'ಯಾಗಿರುವ ಮೇಷ್ಟ್ರಿಗೆ ಮರ್ತು ಹೋಗುತ್ತೆ ಅಂತ ಮಕ್ಕಳಿಂದ ಉರುಹಾಕಿಸಿಟ್ಟುಕೋತಾರೆ.

ಶೀಲಾ : ಇದು ಜನವರಿ.... ಏನೀಗ ?

ನಕುಲ : ಜನವರಿ ೯ ನೆಯ ತಾರೀಖು ನಿಮಗೆ ನೆನಪಿಲ್ಲವೆ ?

ಶೀಲಾ : (ಜ್ಞಾಪಿಸಿದರೂ ನೆನಪಾಗದೆ) ಏನದು ?

ನಕುಲ : ಈ ದಿನ ನಿಮ್ಮದು 10th Marriage Day ಗೊತ್ತಾ ?

ಶೀಲಾ : (ನಾಚಿಕೆಯಿಂದ ತಲೆತಗ್ಗಿಸುವಳು) ಅದನ್ನು ನಿಮಗೆ ಯಾರು ಹೇಳಿದರು ?

ನಕುಲ : ಯಾರು ಯಾಕೆ ಹೇಳಬೇಕು ? ನಾವು ಅಂಪ್ರೆ ತ್ರಿಕಾಲ ಜ್ಞಾನಿಗಳು. ಈ ಊರಿನಲ್ಲಿದ್ದ ಸಾಹೇಬರು ಯಾವಾಗ ಹುಟ್ಟಿದರು, ಯಾವಾಗ ಮದುವೆಯಾದರು, ಯಾವಾಗ ಎಷ್ಟೆಷ್ಟು ಹುಡುಗರಾದ್ರು, ಗಂಡೋ.... ಹೆಣ್ಣೋ.... ಮೊದಲಾದ Personal life data ನಮ್ಮ ಡೈರಿಯಲ್ಲಿ ಸಿಗುತ್ತವೆ.

ಶೀಲಾ : ನಿಮ್ಮ ಭೂಲೋಕದ ಚಿತ್ರಗುಪ್ತರೇ ಅನ್ನಿ. ಮತ್ತೇನೇನುಗಳಿವೆ ನಿಮ್ಮ ಡೈರಿಯಲ್ಲಿ ?

Sri Vidyabharathi Book Centre, Sringeri

CC-O. In Public Domain. Digitized by eGangotri

ನಕುಲ : ನೂರಾರು ಬಗೆಯ ವಿವರಗಳಿವೆ. ಯಾರಿಗೆ ಯಾವ ಬಗೆಯ ಚಟಗಳಿವೆ, ಯಾರಿಗೆ ಯಾವ ದೇವರ ಮೇಲೆ ಭಕ್ತಿ, ಯಾರಿಗೆ ಯಾವ ವಿಷಯದಲ್ಲಿ ಅಭಿರುಚಿ, ಯಾರಿಗೆ ಯಾವ ತಿಂಡಿಯ ಮೇಲೆ ಇಷ್ಟ, ಯಾರಿಗೆ ಯಾವ ಬಣ್ಣ ಇಷ್ಟ, ಯಾರಿಗೆ ಯಾರು ಆಪ್ತಮಿತ್ರರು, ಯಾರು ಹೆಂಡತಿಯನ್ನು ಆಳುತ್ತಾರೆ, ಯಾರಿಗೆ ಹೆಂಡತಿಯೇ ಆಳುತ್ತಾಳೆ, ಇತ್ಯಾದಿ....ಇತ್ಯಾದಿ.

ಶೀಲಾ : ಗೊತ್ತಾಯಿತು.... ಈಗ ನೀವು ಬಂದ ಉದ್ದೇಶವೇನು ?

ನಕುಲ : (ಹಲ್ಲು ಕಿರಿದು) ನೀವೇ ಹೇಳಿ ನೋಡೋಣ.

ಶೀಲಾ : ಏನಗೆ ಹೇಗೆ ಗೊತ್ತಾಗಬೇಕು ?

ನಕುಲ : ಹೌದು, ನಿಮಗೆ ಗೊತ್ತಿಲ್ಲ.... ಅದಕ್ಕೆ ನಾನೇ ಹೇಳ್ತೀನಿ. ಸಾಹೇಬರು ಊರಲ್ಲಿದ್ದಾರೇನು ?

ಶೀಲಾ : ಹೌದು....ಆಫೀಸಿಗೆ ಹೋಗಿದ್ದಾರೆ.

ನಕುಲ : ಒಳ್ಳೆಯದೇ ಆಯಿತು. (ಕೈಯಲ್ಲಿದ್ದ ಪಾರ್ಸಲ್ ಕೊಡುತ್ತ) ಇದನ್ನು ಸಾಹೇಬರು ಕೊಟ್ಟಿದ್ದಾರೇಂತ ಹೇಳಿ.

ಶೀಲಾ : (ಪಾರ್ಸಲ್ ತೆಗೆದುಕೊಳ್ಳದೆ) ಯಾರು ನಿಮ್ಮ ಸಾಹೇಬರು ? ಇದನ್ನೆಲ್ಲ ಯಾಕೆ ಕೊಟ್ಟಿದ್ದಾರೆ ?

ನಕುಲ : ನಮ್ಮ ಸಾಹೇಬರ Visiting Card ಈ ಪಾಕೀಟಿನಲ್ಲಿದೆ. ನಿಮ್ಮ Marriage dayಗೆ ಉಡುಗೊರೆ.

ಶೀಲಾ : ಛಿ....ಛಿ.... ಇಂಥದ್ದೆಲ್ಲ ನಮ್ಮವರು ಸ್ವೀಕರಿಸುವುದಿಲ್ಲ.

ನಕುಲ : (ದೇಶಾವರದ ನಗೆ) ನಾವೇನು ದಿನಾ ತಂದ್ಕೊಡ್ತಿವೆಯೆ ? ಯಾವುದೊ ಒಂದು Occasionನಲ್ಲಿ ತಾನೆ Present ಕೊಡೋದು? ಅದೂ ಯಾವ ಆಸೆಯಿಂದಲ್ಲ....ನಿಸ್ವಾರ್ಥ ಬುದ್ಧಿಯಿಂದ.

ಶೀಲಾ : ಆದರೂ.... ನಮ್ಮ ಯಜಮಾನರು ಇದನ್ನು ಒಪ್ಪುವುದಿಲ್ಲ.

ನಕುಲ : ನೀವೇನೂ ಗಾಬರಿಯಾಗಬೇಡಿ. ಈ ಪ್ಯಾಕೇಟ ಇಲ್ಲೇ ಇರಲಿ. ನಾನು ಆಫೀಸಿಗೆ ಹೋಗಿ ಅವರಿಗೆ ಹೇಳಿ ಹೋಗ್ತೀನಿ. ಅವರು ಬೇಡವೇ ಬೇಡ ಅಂದರೆ ವಾಪಾಸ್ ತೆಗೆದುಕೊಂಡು ಹೋಗ್ತೀನಿ.

Sri Vidyabharathi Book Centre, Sringeri

CC-O. In Public Domain. Digitized by eGangotri

ಶೀಲಾ : ಹಾಗಾದರೆ ಈ ಪ್ಯಾಕೆಟ ಅಲ್ಲಿಗೇ ಒಯ್ದು ಬಿಡಿ. ಇಲ್ಲಿಟ್ಟುಕೊಂಡರೆ ಅವರು ಕೋಪಿಸಿಕೊಳ್ತಾರೆ.

ನಕುಲ : ಇದೇನು ಲಂಚವಲ್ಲ. ರುಷುವತ್ತಲ್ಲ. ಯಾಕೆ ಸುಮ್ನೆ ಅಂಜ್ತೀರಾ ? ನಿಮ್ಮ ಯಜಮಾನರಿಗೆ ನಮ್ಮ ಸಾಹುಕಾರರ ಹೆಸರು ಹೇಳಿದರೆ ಸಾಕು. ಅವರಿಬ್ಬರೂ ಸ್ನೇಹಿತರೇ.... Don't worry.

ಶೀಲಾ : ಅದು ಸರಿ.... ನಿಮಗೆ ನಮ್ಮ ಯಜಮಾನರ ಸ್ವಭಾವ ಗೊತ್ತಿಲ್ಲ.

ನಕುಲ : ನಿಮಗೂ ಅಷ್ಟೇ.... ನಮ್ಮ ಯಜಮಾನರ ಸ್ವಭಾವ ಗೊತ್ತಿಲ್ಲ. ಯಾರಿಗಾದರೂ ಏನಾದರೂ ಕೊಟ್ಟಾಗಲೇ ಅವರಿಗೆ ಸಮಾಧಾನ.

ಸತ್ಯ : (ಬರುತ್ತ) ಹಂಗಾರ.... ನನಗ ಕೊಡಾಕ ಹೇಳಿರಿ. ಈ ಪರಪಂಚ ದಾಗ ಇರಾವ್ರುಗೆ ಎಲ್ಲಾರೂ ಕೊಡ್ತಾರ. ಇಲ್ಲದವರಿಗೆ ಯಾರೂ ಕೊಡೋದಿಲ್ಲ.

ನಕುಲ : ನೀನ್ಯಾರು ಮಧ್ಯ ಮೂಗು ಹಾಕುವವನು ?

ಸತ್ಯ : ಮೂಗೊಂದೇ ಅಲ್ರಿ ಮೀಸೀನೂ ಹಾಕ್ತೀನಿ. ನಿಮ್ಮಂಥಾವ್ರಿಗೆ ನೋಡಿ ಅಲ್ರಿ,ಸಾಹೇಬರ ಮದಿವಿ ದಿನಕ್ಕ ಉಡುಗೊರೆ ಕೊಡೊ ಮಂದಿ ನೀವು ಮತ್ತ ಈ ಊರಾಗ ಮದವಿ ಆದ ಮಂದಿ ಇಲ್ಲೇನ್ರಿ.... ಕೊಡಾಕ ? ನಿಮ್ಮದೇನೊ ಕೆಲಸ ಆಗೂದೈತಿ ಅಂತ ಹೇಳ್ರಿ.... ಅದಕ್ಕ ತಂದೀರಿ.... ಸುಮ್ಕs ತರಾಕ ನಿಮಗೇನು ಹುಚ್ಚು ಹಿಡಿದೈತೇನರಿ ?

ನಕುಲ : ನಾಲಿಗೆ ಬಿಗಿ ಹಿಡಿ ಭಡವಾ.... ಹದ್ದು ಮೀರಿ ಮಾತಾಡಬೇಡ.

ಸತ್ಯ : ನೀವು ಮಹಾರಾಷ್ಟ್ರ ಕಡೆಯಿಂದ ಬಂದಿರೇನ್ರಿ? ಆ ಮಂದಿ ಥೇಟ ನಿಮ್ಹಂಗ ಯಾರದಾರೂ ಮನಿಯಾಗ ಹೊಕ್ಕು ಅವರಿಗs ಜೋರ ಮಾಡ್ತಾರ. ಈಗ ಬೆಳಗಾಂವ ಕೇಳ್ತಾರ. ನಾಳಿ ಹುಬ್ಬಳ್ಳಿಗ ಬರ್ತಾರ.

ನಕುಲ : ಬೇಡ.... ಬೇಡ.... ನನಗೆ ಸಿಟ್ಟು ಬರ್ತದೆ.

ಸತ್ಯ : ಬಂದರ ಮನೀಗ ಹೋಗಿ ಹೇಂತಿ ಮುಂದ ತೋರಿಸಿರಿ.

ಶೀಲಾ : ಹೋಗಲಿ ಬಿಡು ಸತ್ಯಪ್ಪ....

ಸತ್ಯ : ಈ ಮನೀಗ ಬಂದು ನಮಗs ಜೋರು ಮಾಡ್ತಾನ ನೋಡ್ರುಲ್ಲ.

ನಕುಲ : (ತಾಳ್ಮೆ ಮೀರಿ Oh You Stupid)

ಸತ್ಯ : ಕನ್ನಡದಾಗ ಬಯ್ಯಿರಿ. ನಮ್ಮ ರಾಜ್ಯಭಾಷೆ ಕನ್ನಡ ಅನ್ನೊದು ಮರೀಬ್ಯಾಡ್ರಿ

Sri Vidyabharathi Book Centre, Sringeri

CC-O. In Public Domain. Digitized by eGangotri

ನಕುಲ : (ಕೈಹಿಸಕಿಕೊಳ್ಳುತ್ತ.... ಕೊಂಚ ಶತಪಥ.) ನಿನ್ನೊಡನೆ ವಾದ ಬೆಳೆಸಲು ನಾನು ಮೂರ್ಖನಲ್ಲ.

ಸತ್ಯ : ಈಗಾದರೂ ತಿಳೀತಲ್ಲ ನಿಮಗ....ಗಂಟ ತಗೊಂಡು ಮನೀಗ ನಡೀರಿ.

ನಕುಲ : (ಸಿಟ್ಟಿನಿಂದ ಕಿರುಚಿ) You shut up !

ಸತ್ಯ : ಶಟ್ಟಪ್ಪ ಸತ್ತು ಸ್ವರ್ಗಕ್ಕ ಹೋಗ್ಯಾನ್ರಿ.

(ಅಷ್ಟರಲ್ಲಿ ಸತೀಶ ಪ್ರವೇಶ.) (ಎಲ್ಲರೂ ಮೌನ.)

ಸತೀಶ : (ಬರುತ್ತ) ಯಾರು ನೀವು ?

ನಕುಲ : ನ ಜಾತಿ, ನ ಧರ್ಮ, ನ ಪಕ್ಷ....ನ....ಪಂಗಡ ವಿಶ್ವವೇ ಕುಟುಂಬ ವೆಂದು ತಿಳಿದ ನನ್ನ ನಾಮಧೇಯ ನ....ಕುಲ !

ಸತೀಶ : ಯಾಕೆ ದಯಮಾಡಿಸಿದ್ದೀರಿ ?

ನಕುಲ : (ಮಾತು ಜಾರಿಸುತ್ತ) ನಿಮ್ಮ ಆಫೀಸಿಗೂ ಬರಬೇಕೆಂದು ಇದ್ದೆ.

ಸತೀಶ : ಅದು ಸರಿ.... ಯಾಕೇಂತ ಗೊತ್ತಾಗಲಿಲ್ಲ.

ನಕುಲ : (ಹಲ್ಲುಗಿಂಜುತ್ತ) ನಮ್ಮ ಯಜಮಾನರು ನಿಮ್ಮನ್ನು ಕಂಡು ಬಾ ಅಂದರು.

ಸತೀಶ : ಯಾರು, ನಿಮ್ಮ ಯಜಮಾನರು ?

ನಕುಲ : Minister's father in law ನಂಜಣ್ಣನವರು.

ಸತೀಶ : ಓ....ಅವರೇ ತಾನೆ.... ಮೊನ್ನೆ ಮೊನ್ನೆ ಈ ಕಾಂಗ್ರೆಸ್‌ನಿಂದ ಆ ಕಾಂಗ್ರೆಸ್‌ಗೆ ಹಾರಿದವರು.

ನಕುಲ : ಅವರು ಕೇವಲ ತತ್ವಕ್ಕಾಗಿ ಹೋರಾಡುತ್ತಾರೆ ಸಾರ್.

ಸತೀಶ : ಇಷ್ಟು ದಿನ ಆ ತತ್ತ್ವಗಳೆಲ್ಲ ಯಾವ ಮೂಲೆಗುಂಪಾಗಿದ್ದವೊ ? ಎಲ್ಲಾ ಅಧಿಕಾರ ದಾಹ.... ಸ್ವಾರ್ಥ ಅಷ್ಟೇ.

ನಕುಲ : ಛೆ....ಛೆ.... ನಮ್ಮ ಯಜಮಾನರು ಹಂಗಲ್ಲ. ನಿಷ್ಠಾವಂತ ಕಾಂಗೆಸ್ಸಿಗರು. ತತ್ತ್ವಕ್ಕಾಗಿ ಜೀವ ಬೇಕಾದ್ರೂ ಕೊಡ್ತಾರೆ.

ಸತೀಶ : ಕೊಡಲಿ ಬಿಡಿ.... ನಮಗೇಕೆ ಅವರ ವಿಷಯ. ಅಂದ್ಹಾಗೆ ನಿಮಗೂ ಅವರಿಗೂ ಏನು ಸಂಬಂಧ ?

ನಕುಲ : ನಾನು ಅವರ P. S. ಅಂದರೆ Private Secretary.

ಸತೀಶ : ಸರಿ.... ಮುಂದೆ.... ಇಲ್ಲಿ ಬಂದಂಥ ಕಾರಣ ?

Sri Vidyabharathi Book Centre, Sringeri

CC-O. In Public Domain. Digitized by eGangotri

ನಕುಲ : ಈ ಹೊತ್ತು ನಿಮ್ಮ Marriage Day ಅದಕ್ಕೆ ಈ (Packet ತೋರಿಸಿ) Present ಕೊಟ್ಟು ಬಾ ಅಂದರು.

ಸತೀಶ : ಏನೇನಿದೆ ?

ನಕುಲ : ಅದರಲ್ಲೇನು ಅಂಥಾ ಭಾರಿ ಸಾಮಾನುಗಳಿಲ್ಲ.... ಅಮ್ಮಾವರಿಗೆ ಒಂದು ಬನಾರಸ್ ಸೀರೆ, ನಿಮಗೊಂದು ಸೂಟ ಪೀಸ್ ಅಷ್ಟೇ.

ಸತೀಶ : ಅಷ್ಟೇನಾ.... ಬೆಲೆ ಎಷ್ಟಾಗಬಹುದು ?

ನಕುಲ : ಜಾಸ್ತಿಯೇನಲ್ಲ.... ಒಂದು ಸಾವಿರ ಆಗಬಹುದು. ನೀವು ಅವರ ದೋಸ್ತಿ ಮಾಡಿದ್ರೆ ಸಾಕು. ನಿಮಗೆ ಏನು ಬೇಕಾರೂ ಕೊಡಿಸ್ತಾರೆ. ಮುಖ್ಯ ಅವರ ವಿಶ್ವಾಸ ಸಂಪಾದಿಸ್ಬೇಕು.

ಸತೀಶ : (ವ್ಯಂಗ್ಯವಾಗಿ) ನಂಜಪ್ಪ ಸಾಹುಕಾರರು ಅಷ್ಟು ಒಳ್ಳೆಯವರಾ ?

ನಕುಲ : (ಹಿಗ್ಗಿನಿಂದ) ಕೇವಲ ಒಳ್ಳೆಯವರಲ್ಲ ಸಾರ್ .... ರಾಜಾ ಮನುಷ್ಯರು. ಶುದ್ಧ ಅಪರಂಜೀ....ಅವರ ಕೈ ಎಲ್ಲೆಲ್ಲಿದೇಂತ ಹೇಳೋಕ್ಕೆ ಆಗೋಲ್ಲ. ಬೆಂಗಳೂರು, ಮದ್ರಾಸ, ಮುಂಬಯಿ, ದಿಲ್ಲಿ, ಕಲ್ಕತ್ತಾ ನಲ್ಲಿ ಯಾವ ಕೆಲಸ ಆಗಬೇಕಾದ್ರೂ ನಮ್ಮ ಯಜಮಾನರಿಗೆ ಹೇಳಿ. ಚಿಟಿಕೆ ಹೊಡೆದಷ್ಟು ಸುಲಭವಾಗಿ ಸಾಧಿಸಿ ಬಿಡ್ತಾರೆ. ನಿಮಗೆ Promotion ಬೇಕಾರೆ ಹೇಳಿ.... ನಿಮಗೆ Transfer ಬೇಕಾರೆ ಹೇಳಿ, ನಿಮಗೆ ಏನು ಬೇಕಾದರೂ ಕೇಳಿ. ಇಂಥಾ ಒಳ್ಳೆ ಮನುಷ್ಯ ಜಗತ್ತಿನಲ್ಲಿಯೇ ಸಿಕ್ಕೋಲ್ಲ ಸಾರ್.... ಹಿಂದಿನ Chief ಇಂಜಿನಿಯರ್‌ಗೆ Brand new fiat car ಕೊಟ್ಟವರು ಯಾರು ಗೊತ್ತೆ? ....(ಎದೆ ತಟ್ಟಿ) ನಮ್ಮ ಯಜಮಾನರು.

ಸತೀಶ : ತುಂಬ ಉದಾರಿಗಳು ಅಂತ ಕಾಣುತ್ತೆ.

ನಕುಲ : (ಹೆಮ್ಮೆಯಿಂದ) ನಮ್ಮ ಯಜಮಾನರ ಮುಂದೆ ಆ ಕರ್ಣ....ಸತ್ತ !

ಸತ್ಯ : (ಲೊಚಗುಟ್ಟುತ್ತಾ) ಪಾಪ ಸಾಯಬಾರದಿತ್ತು.

ನಕುಲ : (ಕಂಣು ಕೆಂಪಗೆ ಮಾಡಿ ಸತ್ಯಪ್ಪನಿಗೆ) ನೀ ಸುಮ್ನೆ ಇರು.

ಸತೀಶ : ಒಂದು ಕೆಲಸ ಮಾಡ್ತೀರಾ ?

ನಕುಲ : ಹೇಳಿ.... ಹೇಳಿ ಸಾರ್.... ನೀವು ಹೇಳಿದ್ರೆ ಇಲ್ಲಾ ಅಂಟೀನ್ಯೆ ?

ಸತೀಶ : (Cool ಆಗಿ) ಈ ಪ್ಯಾಕೇಟ ದಯಮಾಡಿ ನಿಮ್ಮ ಯಜಮಾನರಿಗೆ ವಾಪಸ್ ಕೊಟ್ಟುಬಿಡಿ.

Sri Vidyabharathi Book Centre, Sringeri

CC-O. In Public Domain. Digitized by eGangotri

ನಕುಲ : (ಅವನನ್ನೇ ದಿಟ್ಟಿಸುತ್ತ ನಿಲ್ಲುವನು. ಒಂದು ಕ್ಷಣ ನೀರವ.) ಏನು ಸಾರ್ ನೀವು ಹೇಳ್ತಾ ಇರೋದು ?

ಸತೀಶ : ನನಗೆ ಗೊತ್ತಿದೆ ನಾನು ಏನು ಹೇಳ್ತಾ ಇದ್ದೀನೀ ಅಂತ.

ನಕುಲ : ಅವರು ಪ್ರೀತಿ ವಿಶ್ವಾಸಗಳಿಂದ ಕಳಿಸಿದ Present ಬೇಡ ಅನ್ನೋದು ಸರಿಯೆ ?

ಸತೀಶ : ಯಾವುದು ತಪ್ಪು-ಸರಿ ಎಂಬುದನ್ನು ನೀವು ಹೇಳಿಕೊಡಬೇಕಾಗಿಲ್ಲ.

ನಕುಲ : ಕೊಂಚ ಆಲೋಚಿಸಿ ಮಾತಾಡಿ ಸಾರ್. ಯೌವನದ ಏರುರಕ್ತದಲ್ಲಿ, ಕೈಯಲ್ಲಿದ್ದ ಅಧಿಕಾರ ಬಲದಿಂದ ಮನಸ್ಸಿಗೆ ಬಂದಂತೆ ವರ್ತಿಸಬೇಡಿ. ನಿಮ್ಮ ಹಿತಕ್ಕೇ ಹೇಳ್ತಾ ಇದೀನಿ. ತಪ್ಪು ತಿಳಿಯಬೇಡಿ. ಅವರು ಮಿನಿಸ್ಟರ್ ಮಾವ ಎಂಬುದನ್ನು ಮರೆಯಬೇಡಿ.... ಒಂದು ಗುಟ್ಟು ಹೇಳಲೇ ?

ಸತೀಶ : ಹೇಳುವುದೆಲ್ಲ ಹೇಳಿಬಿಡಿ.

ನಕುಲ : (ಬೆಕ್ಕಿನಂತೆ ಅತ್ತಿತ್ತ ಕಣ್ಣು ಹೊರಳಿಸುತ್ತ- ಧ್ವನಿ ತಗ್ಗಿಸಿ) ಸಾಹುಕಾರ ನಂಜಪ್ಪಣ್ಣನವರ ಹೆಸರು ಹೇಳಿದರೆ ಈ ಊರೇ ನಡುಗುತ್ತೆ. ಅವರು ಒಲಿದರೆ ನಾರಾಯಣ, ಮುನಿದರೆ ನಾರಸಿಂಹ.

ಸತೀಶ : ಅವರೇನಾದರೂ ನನಗೇನ್ಬಂತು. ನನಗೆ ಅವರು ಕಳಿಸಿದ ನಿಸ್ವಾರ್ಥ ಬುದ್ಧಿಯ Presentation ಬೇಡ ಅನ್ನೋದೂ ಅಪರಾಧವೆ ?

ನಕುಲ : ಅಪರಾಧವಲ್ಲದೆ ಮತ್ತೇನು ಸಾರ್ ? ನೀವು ಈ ಊರಿಗೆ ಹೊಸದಾಗಿ Transfer ಆಗಿ ಬಂದಿದ್ದೀರಿ. ಏನೋ ಪ್ರೀತಿ-ವಿಶ್ವಾಸ ಬೆಳೆಸೋಣಾಂತ ಉಡುಗೊರೆ ಕಳಿಸಿದ್ರೆ ನೀವು ಅದನ್ನು ತಿರಸ್ಕರಿಸಿದರೆ ಅವರಿಗೆ ಕೋಪ ಬರೋಲ್ಲವೆ ?

ಸತೀಶ : ಅವರಿಗೆ ಕೋಪ ಬರುತ್ತೇಂತ ನನ್ನ ಮನಸ್ಸಿನ ವಿರುದ್ಧ ವರ್ತಿಸಿ ಮಾನವ ನಿರ್ಮಿತ ನರಕದಲ್ಲಿ ಬೀಳಲೇ ? ಅವರ ಖುಷಿಗಾಗಿ ನಾನು ನನ್ನ Principals ಬಿಟ್ಟುಕೊಡಲೇ ? ಅವರ ಸಮಾಧಾನಕ್ಕಾಗಿ ನಾನು ನನ್ನ ಮನೆತನದ ಸಿಯತ್ತು, ನೀತಿ, ಧರ್ಮಗಳನ್ನು ಗಾಳಿಗೆ ತೂರಲೆ ?

ನಕುಲ : ನಿಮಗಿನ್ನೂ ಅವರ ಸ್ವಭಾವ ಗೊತ್ತಿಲ್ಲ. ಅದಕ್ಕೆ ನೀವು ಇಷ್ಟು

Sri Vidyabharathi Book Centre, Sringeri

CC-O. In Public Domain. Digitized by eGangotri

ಹಾರಾಡ್ತೀರ. ಕೊಂಚ ನಿಮ್ಮ ಆಫೀಸಿನಲ್ಲಿರೊ ಗುಮಾಸ್ತೆ ರಂಗಣ್ಣನವರಿಗೆ ಕೇಳಿ ಅವರ ಸಮಾಚಾರ. ಅವರನ್ನು ಎದುರು ಹಾಕಿಕೊಂಡರೆ You will be no more.

ಸತೀಶ : ಅಲ್ಲಾರೀ.... ಅವರಿಗೂ ನನ್ನ ಆಫೀಸಿಗೂ ಏನು ಸಂಬಂಧ ಅಂತ. ಎಲ್ಲರ ಹಾಗೆ ಅವರೂ ಒಬ್ಬ ಕಂಟ್ರ್ಯಾಕ್ಟರರು ಅಷ್ಟೇ.

ನಕುಲ : ನೀವು ಹಾಗೆ ತಿಳ್ಕೊಂಡಿದ್ದೀರಿ ಸಾರ್. ಆದರೆ ಈ ಊರಿಗೆ ಬಂದ ಎಲ್ಲಾ ಅಧಿಕಾರಿಗಳಿಗೂ ಅವರ ಸಂಬಂಧ ಇರುತ್ತೆ. ಅವರು T. D. B. ಚೇರ್ಮನ್ನರು, Co-op. ಬ್ಯಾಂಕಿನ ಅಧ್ಯಕ್ಷರು, ಖಾದಿ ಬೋರ್ಡಿನ ಖಜಾಂಚಿಗಳು, ಸ್ಕೂಲ ಬೋರ್ಡಿನ Adviser, ನೂರಾರು local ಸಂಘ ಸಂಸ್ಥೆಗಳ ಅಧ್ಯಕ್ಷರು. ಅವರ ಮಾತು ಮೀರುವ ಧೈರ್ಯ ಯಾರಿಗಾದರೂ ಇದೆಯೇ ಈ ಊರಿನಲ್ಲಿ ?

ಸತೀಶ : ಅಂಥ ಹೇಡಿಗಳಿರೋ ಊರು ಇದೂಂತ ಕಾಣುತ್ತೆ.

ನಕುಲ : (ದನಿ ತಗ್ಗಿಸಿ, ಸುತ್ತಲೂ ನೋಡಿ) ಕೊಂಚ ಮೆಲ್ಲಗೆ ಮಾತಾಡಿ ಸಾರ್....ಅವರ C. I. D. ಗಳು ಊರುತುಂಬ ಇರ್ತಾರೆ. ಈ ಮಾತು ಅವರ ಕಿವಿಯ ಮೇಲೆ ಬಿದ್ದರೇನಾಗುತ್ತೆ ಗೊತ್ತೆ ?

ಸತೀಶ : ಏನಾಗುತ್ತೆ ?

ನಕುಲ : (ಗಂಭೀರ ದರ್ಪದಿಂದ) ಹರಿಶ್ಚಂದ್ರನಿಗೆ ವಿಶ್ವಾಮಿತ್ರನಿಂದ ಏನಾಯಿತೋ ಅದೇ ಆಗುತ್ತೆ.

ಸತೀಶ : (ಉದಾಸೀನದಿಂದ) ಅಷ್ಟೇ ತಾನೇ.... ಆದರೆ ಅಂತಿಮ ಜಯ ಸತ್ಯಕ್ಕೇ ಎಂಬುದು ಬಹುಶಃ ಕಂಟ್ರ್ಯಾಕ್ಟರ್ ನಂಜಣ್ಣನಿಗೆ ಗೊತ್ತಿರಲಿಕ್ಕಿಲ್ಲ.

ನಕುಲ : ಅವರಿಗೆ ಕಂಟ್ರ್ಯಾಕ್ಟರ್ – ಗಿಂಟ್ರ್ಯಾಕ್ಟರ್ ಅಂತ ಕರೀಬೇಡಿ. ಅವರು Minister ಮಾವ ಕಾಣ್ರಿ !

ಸತೀಶ : ಮಿನಿಸ್ಟರ್ ಮಾವ ಅದ್ರೇನು ಕೋಡುಗಳಿರುತ್ತವೆಯೇನ್ರಿ ? ಅಥವಾ ಅದೇನು ಹುಲಿಯೊ ಸಿಂಹವೊ.... ಅವರ ಅಳಿಯ ಮಂತ್ರಿ ಇರಬಹುದು. ಅಳಿಯನ ಘನತೆಯ ಮೇಲೆ ತಮ್ಮ ಬೇಳೆ ಬೇಯಿಸಿಕೊಳ್ಳೋ ಸ್ವತಂತ್ರ ವ್ಯಕ್ತಿತ್ವವಿಲ್ಲದ ಜನ ಅಂತ ಅರ್ಥ. ಯಾರದ್ದೋ

Sri Vidyabharathi Book Centre, Sringeri

CC-O. In Public Domain. Digitized by eGangotri

ಹೆಸರು ಹೇಳಿಕೊಂಡು ಬದುಕೊ ಹೇಡಿ ಜನ. ತಮ್ಮ ಯೋಗ್ಯತೆ ಯಿಲ್ಲದಿದ್ದರೂ ನಾನು ಮಂತ್ರಿಯ ತಮ್ಮ, ನಾನು ಈ ಮಂತ್ರಿಯ ಭಾವ, ನಾನು ಇಂದಿರಮ್ಮನ ವರಪುತ್ರ ಎಂದು ಹೇಳಿಕೊಂಡು ನಾಯಿ ಯಂತೆ ಬದಕುವ ಜನ ನಮ್ಮ ದೇಶದಲ್ಲಿ ಸಾಕಷ್ಟಿದ್ದಾರೆ. ಆದರಲ್ಲಿ ನಿಮ್ಮ ನಂಜಣ್ಣ ಒಬ್ಬರು ಅಷ್ಟೇ.

ನಕುಲ : ರೀ, ಸಾಹೇಬರೇ.... as a friend ಹೇಳ್ತೀನಿ. ನಾಗರಹಾವಿ ನೊಡನೆ ವಿರಸ ಒಳಿತಲ್ಲ. ನಿಮ್ಮ ಹಿತಕ್ಕೇ ಹೇಳ್ತಾ ಇದ್ದೀನಿ Don't Misunderstand me.

ಸತೀಶ : ನಂಜಣ್ಣನ್ನ ನಾಗರ ಹಾವಿನೊಂದಿಗೆ ಹೋಲಿಸಿ ನಾಗರ ಹಾವಿನ ಪ್ರಾಮಾಣಿಕತೆಗೆ ಕಲಂಕ ಹಚ್ಚಬೇಡಿ. ನಾಗರ ಹಾವು ನೋಯಿಸಿ ದರೆ ಮಾತ್ರ ಕಚ್ಚುತ್ತೆ. ಆದರೆ ನಿಮ್ಮ ನಂಜಣ್ಣ ನೋಯಿಸದಿದ್ದರೂ ಕಚ್ಚುತ್ತಾನೆ. ಅವನು ಹುಚ್ಚು ನಾಯಿಯ ಜಾತಿ ಅಂತ ಹೇಳ ಬೇಕಾದರೆ.

ನಕುಲ : ನಿಮಗೂ ಅವನ ಬಗ್ಗೆ ಯಾರೋ ಹೇಳಿದ್ದಾರೇಂತ ಕಾಣುತ್ತೆ.

ಸತೀಶ : ನಿಮ್ಮ ಯಜಮಾನರ ಕೀರ್ತಿಗಾನ ಯಾರು ತಾನೇ ಮಾಡೋಲ್ಲ ಹೇಳಿ. ನಂಜಣ್ಣ ಮತ್ತು ಕನ್ನಡ ಶಾಲೆಯ ಶಿಕ್ಷಕಿ ಸುಮಿತ್ರೆಯ ಪ್ರೇಮ ಪ್ರಕರಣದಲ್ಲಿ ತಲೆಹಾಕಿದ Headmaster ವೀರಯ್ಯನ transfer ಯಾರು ಮಾಡಿಸಿದ್ರು? Co-op. ಬ್ಯಾಂಕಿನ ಒಂದು ಅಪ್ರಾತಪ್ರಾ ಪ್ರಕರಣದಲ್ಲಿ Chief Accountant ನರಸಿಂಹಯ್ಯನವ ರಿಗೆ drinks ನಲ್ಲಿ ವಿಷಬೆರಿಸಿ ಕೊಂದು ಹಾಕಿದವರು ಯಾರು? Post-Master ನ ಹೆಂಡತಿಯನ್ನು ವಶೀಕರಿಸಿ ಅವಳ ಗಂಡನಿಗೆ ಹುಚ್ಚು ಹಿಡಿಸಿ ಬೀದಿಯಲ್ಲಿ ತಿರುಗುವಂತೆ ಮಾಡಿದವರು ಯಾರು? ಮನೆ ತನದ ಆಸ್ತಿಯ ಪ್ರಕರಣದಲ್ಲಿ ತನ್ನ ಸ್ವಂತ ತಮ್ಮನ ಕೊಲೆ ಮಾಡಿಸಿ ಆಸ್ತಿಯನ್ನು ಕಬಳಿಸಿದವರು ಯಾರು? ಇದೆಲ್ಲ ನನಗೆ ಗೊತ್ತಿಲ್ಲ ಅಂತ ಮಾಡಿದಿರಾ?

ನಕುಲ : ಇದೆಲ್ಲ ಗೊತ್ತಿದ್ದೂ ಅವರೊಂದಿಗೆ ಹೋರಾಟದ ಕಣಕ್ಕಿಳಿಯುವದು ಸರಿಯೆ?

Sri Vidyabharathi Book Centre, Sringeri

CC-O. In Public Domain. Digitized by eGangotri

ಸತೀಶ : ಇವರದು ಅಧಿಕಾರವಿರುವವರೆಗೆ ಮಾತ್ರ ಹಾರಾಟ. ಅಲ್ಲಿ ಅವರು ಮಂತ್ರಿಪದವಿಯಿಂದ ಕೆಳಗಿಳಿಯಲಿ; ಇಲ್ಲಿ ಅವರಿಗೆ ಬೀದಿನಾಯಿಯೂ ಮೂಸಿ ನೋಡುವುದಿಲ್ಲ. ಆದರೆ ನಾವು ಹಾಗಲ್ಲ. ಇಂಥ ಐವತ್ತು ಮಂತ್ರಿಮಂಡಳಗಳು ಬರಲಿ – ಉರುಳಲ್ಲಿ, ನಾವೇ ದೇಶದ ಪ್ರಗತಿಯ ದೃಷ್ಟಾರರು. ನಾವು ನಂಜಣ್ಣನಂಥ ಸ್ವಾರ್ಥಸಾಧಕರ ಮಾತಿಗೆ ಬಲಿ ಬಿದ್ದರೆ ಈ ದೇಶದ ದಿವಾಳಿ ತೆಗೆಯಲು ಬಹಳ ಕಾಲ ಬೇಕಿಲ್ಲ.

ನಕುಲ : ಪರಿಸ್ಥಿತಿಗೆ ಎಲ್ಲರೂ ತಲೆಬೇಕಾಗುತ್ತದೆಯೆಂಬುದು ಮರೆಯದಿರಿ ಸಾಹೇಬರೇ.

ಸತೀಶ : ಅದು ಹೇಡಿಯ ಲಕ್ಷಣ. ಪರಿಸ್ಥಿತಿಯನ್ನೆದುರಿಸಿ ನಿಂತಾಗಲೆ ದೇಶಕ್ಕೆ ಅಂಟಿದ ಈ ಗೆದ್ದಲು ಹುಳಗಳ ನಾಶ.

ನಕುಲ : ಇದು ಪುಸ್ತಕದ ಬದನೆಕಾಯಿ ಸಾರ್. ನಾವು ಆಡುವುದೇ ಒಂದು, ಓದುವುದೇ ಒಂದು. ನಿಜ ಜೀವನದಲ್ಲಿ ಮಾಡುವುದೇ ಒಂದು. ಗಾಂಧಿಜೀಯವರು ಸತ್ಯವೇ ಧರ್ಮ ಎಂದರು. ಈಗ Income tax Officer ಮುಂದೆ ಸತ್ಯ ಹೇಳಿ ನೋಡಿ. Vote ಸಿಗುವಾಗ ಸತ್ಯ ಹೇಳಿ ನೋಡಿ. ಜೀವನದ ಯಾವ ಕ್ಷೇತ್ರದಲ್ಲಿ ಈಗ ಸತ್ಯ ಉಳಿದಿದೆ ಹೇಳಿ ?

ಸತೀಶ : ಅದು ಅವರವರ ದೃಷ್ಟಿ. ಕಪ್ಪು ಕನ್ನಡಕ ಹಾಕಿದವರಿಗೆ ಜಗತ್ತೇ ಅಂಧಕಾರಮಯವಾಗಿ ಕಂಡರೆ ಅದು ಸೂರ್ಯನ ತಪ್ಪೇ ?

ನಕುಲ : ಸಾರ್.... (ಮೃದುವಾಗಿ) ಒಂದು ಮಾತು ಹೇಳಲೇ ಸಾರ್.

ಸತೀಶ : ಹೇಳಿ.... ಅದಕ್ಕೇನಂತೆ.

ನಕುಲ : ನಾನು ಹೀಂಗೆ ಹೇಳುತ್ತೇನಂತ ತಪ್ಪು ತಿಳಿಯಬೇಡಿ.

ಸತೀಶ : ಇಲ್ಲ.... ಹೇಳಿ....

ನಕುಲ : ಈಗ ನಿಮ್ಮಲ್ಲಿ ಸ್ಪಷ್ಟವಾಗಿ ಹೇಳಿ ಬಿಡ್ತೀನಿ. ನೋಡಿ ಕುಶಾವತಿಗೆ ಕಟ್ಟಿದ ಬ್ರಿಜ್ (Bridge) ನೀವು Certify ಮಾಡಬೇಕು ಅಂತ ನಮ್ಮ ಯಜಮಾನರ ಆಸೆ. ಅದೊಂದು ನಿಮ್ಮಿಂದ ಆದಷ್ಟು ಬೇಗ ಆದರೆ ನಮ್ಮ ಯಜಮಾನರು ನಿಮಗೆ ಫಾರೀನ್ (foreign) ಗೆ ಬೇಕಾದರೂ ಕಳಿಸಲು ಸಿದ್ಧ. ಹೊಸ Car ಬೇಕಾದರೂ ಕೊಡಿಸ್ತಾರೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ನಿಮಗೆ Promotion ಕೂಡ ಸಿಗೋಹಂಗೆ ಮಾಡ್ತಾರೆ. ನೀವು ಎಷ್ಟಂದರೂ ನೌಕರರು. ಸಂಬಳದ ಮೇಲೆ ಬದುಕೋ ಜನಾ. ಇಂಥಾ ಬಂಗಾರದ ಕೋಳಿಗಳ ಸಖ್ಯ ಇರೋದು ಒಳ್ಳೇದು. ನೀವು ಇವರ ಸ್ನೇಹ ಬೆಳೆಸಿದರೆ ಇಹಲೋಕವೇ ಸ್ವರ್ಗ ಮಾಡಬಹುದು.... ಇವರನ್ನು ಎದುರು ಹಾಕಿಕೊಂಡರೆ ಇದೇ ನಿಮ್ಮ ಪಾಲಿನ ನರಕ ವಾದೀತು.

ಸತೀಶ : ಅದು ನನಗೆ ಗೊತ್ತೇ ಇದೆ. ನಾನು ಈ ಮೂರ್‍ಕಾಸಿನ ಸ್ವರ್ಗಕ್ಕಾಗಿ ನನ್ನ ನಿಯತ್ತು ಬಿಟ್ಟು ಈ ದೇಶಕ್ಕೆ ದ್ರೋಹ ಮಾಡಲಿ? ಸರಕಾರದ ಬೊಕ್ಕಸಕ್ಕೆ ಅಂಟಿದ ಇಂಥ ಹೆಗ್ಗಣಗಳಿಗೆ ಆಶ್ರಯ ನೀಡಿ ನನಗೆ ಅನ್ನ ನೀಡುವ ಸರಕಾರಕ್ಕೆ ಎರಡು ಬಗೆಯಲಿ? ಇದು ನನ್ನಿಂದ ಸಾಧ್ಯವಿಲ್ಲ.... ಸರ್ವಥಾ ಸಾಧ್ಯವಿಲ್ಲ. (ತಲೆಗೆ ಚಿಟ್ಟು ಹಿಡಿದಂತಾಗಿ ಕುರ್ಚಿಯಲ್ಲಿ ಕುಸಿಯುವನು.)

ನಕುಲ : ದುಡುಕಬೇಡಿ ಸಾರ್.... ಅನರ್ಥವಾದೀತು.

ಸತೀಶ : ಏನಾದರೂ ಸರಿ.... ನಾನು ಎದುರಿಸಲು ಸಿದ್ಧ.... ನೀವಿನ್ನು ಹೋಗ ಬಹುದು.

ನಕುಲ : ನೋಡಿ ನೀವು ಹೇಳಿದ ವಿಷಯ ಯಜಮಾನರಿಗೆ ಒಪ್ಪಿಸ್ತೀನಿ. ನಿಮ್ಮ ನಿರ್ಧಾರ ಬದಲಾದರೆ ನಮ್ಮ Phone 420ಕ್ಕೆ Phone ಮಾಡಿ ತಿಳಿಸಿ (ಎಂದು ಹೋಗುತ್ತಿರಲು ಆವನು ತಿಪಾಯಿಯ ಮೇಲೆ ಇಟ್ಟ Packet ತೋರಿಸುತ್ತಾ ಸತ್ಯ)

ಸತ್ಯಪ್ಪ : ಗಂಟs ಮರತರಲ್ಲ. ತಗೊಂಡು ಹೋಗ್ರಿ....

ನಕುಲ : (Packet ಎತ್ತಿಕೊಂಡು ಹೋಗುತ್ತ) ಬರ್‍ತೀನಿ ಹಾಗಾರೆ....

ಸತ್ಯಪ್ಪ : ಬರಬ್ಯಾಡ್ರಿ ಮತ್ತ. ಇಂಥಾ ಪಂಚಾಯ್ತಿ ತಗೊಂಡು.

ಸತೀಶ : (ತಲೆ ಹಿಡಿದುಕೊಂಡು) ಕೊಂಚ ನೀರು ತಾ.... (ಶೀಲಾ ಧಾವಿಸು ವಳು. ಸತ್ಯಪ್ಪ ಗಾಳಿ ಬೀಸುವನು.)

— ತೆರೆ —

Sri Vidyabharathi Book Centre, Sringeri

CC-O. In Public Domain. Digitized by eGangotri

ದ್ವಿತೀಯ ಅಂಕ

(ಸುಮಾರು ೧ ತಿಂಗಳ ನಂತರ)

(ಅದೇ ದೃಶ್ಯ ಕಿಟಕಿಯಿಂದಾಚೆ ಕಾಣುವ ಗಿಡದೆಲೆಗಳು ಹಣ್ಣಾಗಿವೆ. ಅರಿಷಿಣ ಹಸುರಿನ ಸೊಬಗು. ಸತ್ಯಪ್ಪ ಸೋಪಾದ ಒಂದು ಮೂಲೆಯಲ್ಲಿ ಮುದುರಿ ಕುಳಿತುಕೊಂಡು ಬೀಡಿ ಸೇದುತ್ತಿದ್ದಾನೆ. ಒಂದು ಕೈಯಲ್ಲಿ Paper ಉಲ್ಟಾ ಹಿಡಿದು ಓದುತ್ತಿದ್ದಾನೆ – ಅಲ್ಲ.... ಚಿತ್ರಗಳನ್ನು ನೋಡು ವುದರಲ್ಲಿ ಮಗ್ನನಾಗಿದ್ದಾನೆ)

[ದೂರವಾಣಿಯ ಸದ್ದು....ಗಂಟೆ ಬಾರಿಸುತ್ತಿರಬೇಕು. ಸತ್ಯಪ್ಪ ಇದರ ಪರಿವೆಯಿಲ್ಲದೆ ಕುಳಿತಿದ್ದಾನೆ. ಸ್ವಲ್ಪ ಕಾಲದ ನಂತರ, ಬೇಸರದಿಂದ ಬೀಡಿ ಯನ್ನು ನೆಲಕ್ಕೆ ಚೆಲ್ಲಿ, ಸಿಟ್ಟಿನಿಂದ ಹೊಸಕಿ, ಹೋಗಿ ರಿಸೀವರ್ ಎತ್ತಿ ಹಿಡಿಯುತ್ತಾನೆ.]

ಸತ್ಯ : ಹಳ್ಳೋ ೯೯.... ಹಳ್ಳೋ....ಆಂ ?.... ಹೌಂದರಿ ಸಾಹೇಬರು. ಆಂ ? ಏನಂದ್ರಿ.... ಸಾಬರು.... ಸಾಬರಲ್ಲರೀ.... ನಿಮಗ ಕಿವಿ ಕೇಳಸೂದಿಲ್ಲೇ ನ್ರಿ ? ಸಾಬರಿಲ್ಲರೀ.... ಹೌಂದು.... ಮಾತಾಡಾಂವಾ ಸಾಹೇಬರು ಅಂದೆ. .... ಯಾವ ಸಾಹೇಬರು ಅಂದ್ರೆ ನಾನೇನ ನನ್ನ ತಲೀ ಹೇಳಲಿ ? .... ನಿಮಗ ಯಾವ ಸಾಹೇಬರು ಬೇಕಾಗಿದ್ದರ್ರೀ ? ಆಂ .... ಜೋರಾಗಿ ಮಾತಾಡ್ರಲ್ಲ .... ಭುಟ್ಟೋ ಸಾಹೇಬನ ಹಾಂಗ ಯಾಕ ಮೇ.... ಮೇ .... ವ್ಯಾ ಮಾಡ್ತೀರಿ ? .... ಏನಂದ್ರಿ ? ಕೇಳಸೂದಿಲ್ಲs ? ಹಂಗಾರ ನಿಮ್ಮ Phone ತೆಗೆದು ಗಟಾರಕ್ಕ ಒಗೀರಿ. ನಾ ಒದರಿದ್ದು ಇಡೀ ಊರಿಗೆ ಕೇಳಸ್ತದ ನಿಮಗ ಕೇಳಸೂದಿಲ್ಲರ ನಾ ಏನ ಮಾಡ್ಲಿ ? ....ಏನಂದ್ರಿ ....ನಂಬರ್ ಕೇಳ್ತೀ ರೇನ್ರಿ ? ನೀವು ನಂಬರ್ ಹಚ್ಚಿರೇನ್ರಿ.... ಹೌಂದ ಹೌಂದರಿ ....ನಿನ್ನೀ ಮೂರು ಒಂಬತ್ತ ಬಂತ್ರಿ .... ಆಂ ? .... ಕನಸಾಗದೀ ಅಂತ ಕೇಳ್ತೀ ರೇನ್ರಿ ? ಹೌದ ಹೌದರಿ.... ನಿನ್ನೀ ರಾತ್ರಿ ಕನಸ ಬಿದ್ದೀತರಿ ....

Sri Vidyabharathi Book Centre, Sringeri

CC-O. In Public Domain. Digitized by eGangotri

ಆಂ? .... ಹೌಂದರಿ .... ಕಳ್ಳ ಪೋಲಿಸನ ಕೈಯಾಗ ಬೇಡಿ ಹಾಕಿ ಇಸ್ಟೇಷನ್‌ಗೆ ಕರಕೊಂಡು ಹೋಗಾಕ ಹತ್ತೀದನ್ರಿ.... ಏನಂದ್ರಿ.... ಅಲ್ರಿ.... ಅಲ್ರೀ.... ರೇಲ್ವಿ ಸ್ಟೇಷನ್‌ಗಲ್ರಿ.... ಪೋಲಿಸ ಚೌಕಿಗs.... ಯಾರ್‍ರೀ ನೀವು ಮಾತಾಡೋರು?.... ಏನಂದ್ರಿ.... ಮಂತ್ರಿ ಮನ್ಯಾಗಿಂದ. (ದೊಡ್ಡಕೆ) ಯಾಂವನಲೆ ಅಂವಾ ಈ ಊರಾಗ ಬಂದ ಮನಿ ಮಾಡಿದ ಮಂತ್ರಿ? (ಅಷ್ಟರಲ್ಲಿ ಶೀಲಾ ಬಂದು ರಿಸೀವರ್ ಕೈಗೆತ್ತಿಕೊಳ್ಳುವಳು.)

ಶೀಲಾ : ಹಲೊ.... yes.... Mrs. Satish....what? oh ಏನು,.... ಅವರು....ಇಲ್ಲವಲ್ಲ ...ಆಫೀಸಿಗೆ ಹೋಗಿದ್ದಾರೆ.... ಏನು ಹೇಳಬೇಕು? ಬಂದಕೂಡ್ಲೆ.... ಆಂ.... ಸ್ವಲ್ಪ ತಾಳಿ (ರಿಸೀವರ್ ಮೇಜಿನ ಮೇಲಿರಿಸಿ ರೇಡಿಯೋ ಮೇಲಿರಿಸಿದ ಪೆನ್ ತಂದು.... ಒಂದು ಕಾಗದದ ಮೇಲೆ ಬರೆಯುಲು ಸಿದ್ಧಳಾಗಿ ರಿಸಿವರ್ ಎತ್ತಿ ಕಿವಿಯ ಬಳಿ ಹಿಡಿದು) ಹಾಂ.... ಹಲೋ.... ಹೇಳಿ.... No.... 4....0 .. 2 ಆಂ? ....ಹಾಂ....ಹಾಂ ....4....2....0.... ಅಂದ್ರೆ.... (ಎಂದು ಗುಣಗುಣಿಸುತ್ತ ಬರೆದುಕೊಳ್ಳುವಳು) Four twenty.... OK.... ಹೇಳ್ತಿನಿ.... ಇಲ್ಲ....ಮರೆಯೋಲ್ಲ.... ಅದೇ ಮಿನಿಸ್ಟರ್ ಮನೆಯಿಂದ ಫೋನ್ ಬಂದಿತ್ತೂಂತಲೇ ಹೇಳ್ತಿನಿ. (ರಿಸೀವರ್ ಕೆಳಗಿಡುವಳು.) ನಿನಗೇನಾರೂ Phone ನಲ್ಲಿ ಕೇಳಿದ್ರೇನೊ ಸತ್ಯಪ್ಪ?

ಸತ್ಯ : ಏನ ಕೇಳಿದ್ನೋ ವ್ಹಾರಾಯಾ .... ಗುಂಗೀ ಹುಳಾ ಗುಂಯ್ ಗುಟ್ಟ್ಯಾಂಗ ಮಾಡತಿದ್ದ. ನನಗ ನಿನ್ನೀ ರಾತ್ರಿ ಬಿದ್ದ ಕನಸ ಹೇಳಿದನ್ರಿ ....ಕಳ್ಳರು ಪೋಲಿಸನ ಕೈಯಾಗ ಬೇಡಿ ಹಾಕ್ಕೊಂಡು ಹ್ವಾದ್ರಂತ.

ಶೀಲಾ : ಅದಕ್ಕೆ ಅವರು ಏನು ಕೇಳಿದ್ರು....?

ಸತ್ಯ : ರೇಲಿವಿ ಸ್ಟೇಸನ್ ಹ್ವಾದರೇನೂಂತ ಕೇಳ್ದಾ.

ಶೀಲಾ : ಅದಕ್ಕೆ ನೀನೇನು ಹೇಳಿದೆ?

ಸತ್ಯ : ಪೋಲಿಸ್ ಇಸ್ಟೇಸನ್‌ಗೆ ಹ್ವಾದರು ಅಂದನ್ರಿ.

ಶೀಲಾ : ಸದ್ಯ ಮತ್ತೇನೂ ಹೇಳಲಿಲ್ಲವಲ್ಲ.

ಸತ್ಯ : ಯಾಕ ಮತ್ತೇನಾರ ಹೇಳಬೇಕಾಗಿತ್ತೇನ್ರಿ....?

Sri Vidyabharathi Book Centre, Sringeri

CC-O. In Public Domain. Digitized by eGangotri

ಶೀಲಾ : ಅವರು ಯಾರೂಂತ ತಿಳಿದೆ.... ಮಿನಿಸ್ಟರ್ ಮನೆಯವರು ಕಣಯ್ಯ.

ಸತ್ಯ : (ತಲೆಯಿಂದ ಪೇಟ ಬಿಚ್ಚಿ ಒಂದೇ ಕೈಯಿಂದ ಜಾಡಿಸುತ್ತ) ಇದ್ದರೇನಂತೆ ಬಿಡರಿ. ಬಡವರ ಹಣದಾಗ ಮಜಾ ಮಾಡೂ ಮಂದಿಗೆ ಮಂತ್ರಿ ಅಂತಾರ. ನಂಮ್ಹಂಗ ಬೆವರು ಸುರಿಸಿ ದುಡಿದು ನೋಡಲಿ ಈ ಮಂದಿ.... ಮಂತ್ರಿ ಹೋಗಿ ಬಜಂತ್ರಿ ಆಗ್ತಾನ.

ಶೀಲಾ : ಅದಿರಲಿ.... ಇನ್ನು ಮುಂದೆ ಅವರ Phone ಬಂದ್ರೆ ಸಾಹೇಬರು ಇಲ್ಲಾಂತ ಹೇಳಿ ಒಂದೇ ಮಾತ್ನಲ್ಲಿ ಮುಗಿಸಿ ಬಿಡು.

ಸತ್ಯ : ಹೂಂ .... ರೀ .... (ಶೀಲಾ ಒಳಗೆ ಹೋಗುತ್ತಿರಲು–ಕರೆಯುತ್ತ) ಅಕ್ಕಾವರೇ, ಇಲ್ಲಿ ಬರ್ರೀ ಒಂದೀಟು.... (ಪೇಪರ್ ಕೈಗೆತ್ತಿ ಉಲ್ಟಾ ಹಿಡಿದು) ಈ ಚಿತ್ರ ನೋಡಿರಿ ಒಂದೀಟು. ಇಂವಾ ಯಾಕ ತಲೀ ಕೆಳಗ ಮಾಡಿ ನಿಂತಾನ್ರಿ.... (ತೋರಿಸಿ) ಮತ್ತ ನೋಡಿರಿ ....ಅವ್ನ ಮಾರಿಮ್ಯಾಗ ಒಂದs ಮೀಸಿ ಕಾಣತೈತಿ.... ಇನ್ನೊಂದು ಎಲ್ಲಿ ಹೋತ್ರಿ....ಅವನ ಬಾಜೂದಾಗ ನಿಂತಾಕಿ ಈ ಹೆಣ್ಮಗಳು ಅವನ ಹೇಂತಿ ಅಂತ ಕಾಣತೈತಿ. ಆಕಿ ಕೈಯಾಗ ಮುನಸಿಪಾಲಟಿ ಕಸಬರಗಿ ಅದ. ಆಕೀನ ಅಂವನ ಮೀಸಿ ಜಾಡಿಸಿ ಒಗದಾಳೇನ್ರಿ.... ನೋಡಿರಿ ಆಕೀನು ತಲೀ ಕೆಳಗ ಮಾಡಿ ನಿಂತಾಳ....

ಶೀಲಾ : (ಪೇಪರ್ ಸರಿಯಾಗಿ ಗಮನಿಸಿ–ಮುಗುಳ್ನಕ್ಕು.) ನೀನು ಪೇಪರೇ ಉಲ್ಟಾ ಹಿಡಿದು ನೋಡಿದೆ ತಲೆ ಕೆಳಗಾಗಿ ನಿಂತಂಗೆ ಕಂಡ್ರೆ ತಪ್ಪೇನು? ಆತ ಆ ಕಡೆ ನೋಡ್ತಾ ಇದ್ದಾನೆ.... ಅದಕ್ಕೆ ಅವನ ಒಂದು ಮೀಸೆ ಕಾಣೋಲ್ಲ.

ಸತ್ಯ : (ತಲೆದೂಗಿ) ಓ ಹಿಂಗೇನ್ರಿ .... ಅಂದ್ಹಾಂಗ ಯಾವ ನಂಬರ್ ಬರೂದ್ರಿ ?

ಶೀಲಾ : (ಪೇಪರ್ ಅವನ ಕೈಗೆ ಕೊಡುತ್ತ) ಅದು ನನಗೇನು ಗೊತ್ತು ?.... ನೋಡು ಸತ್ಯಪ್ಪ ಒಳಗಡೆ ಕೈಚೀಲ-ಸಾಮಾನಿನ ಪಟ್ಟಿ ಇಟ್ಟಿದ್ದೀನಿ. ತಗೊಂಡು ಹೋಗಿ ಸಾಮಾನು ತಗೊಂಡು ಬೇಗ ಬಂದುಬಿಡು.

ಸತ್ಯ : ಹೂಂ....ರೀ.... (ಮೆಲ್ಲಗೆ ಆತ್ಮೀಯತೆಯಿಂದ) ಅಕ್ಕಾವರೇ... ಒಂದ ಮಾತ ಹೇಳ್ಳಿನಿ ಹಂಗ ನಿಲ್ಲಿ ([illegible] ಒಳಗೆ ಧಾವಿಸಿ ಕೈಯ

Sri Vidyabharathi Book Centre, Sringeri

CC-O. In Public Domain. Digitized by eGangotri

ಲ್ಲೊಂದು ಚಿಕ್ಕಪಟ್ಟಿ, ಕೈಚೀಲ ಹಿಡಿದುಕೊಂಡು ಬಂದು- ಪೇಪರ್ ಶೀಲಾಳ ಕೈಗೆ ಕೊಡುತ್ತ) ಅಕ್ಕಾವರೇ....

ಶೀಲಾ : ಏನಪ್ಪ ?

ಸತ್ಯ : ಒಂದು ಮಾತು ಹೇಳ್ಲೀನು.

ಶೀಲಾ : ಹೂಂ.... ಹೇಳು....

ಸತ್ಯ : ನೀವು ಸಿಟಗೊಳ್ಳೊದಿಲ್ಲಂದ್ರ ಹೇಳ್ತೀನ್ರಿ.

ಶೀಲಾ : ಇಲ್ಲ ಹೇಳು.

ಸತ್ಯ : ನಾ ಬರೂಮುಟಾ.... (ಪೇಪರಿನಲ್ಲಿಯ ಚಿತ್ರ ಕಥೆ ತೋರಿಸಿ) ಈ ಕಥಿ ಓದಿ ಸ್ವಲ್ಪ ನಂಬರ ಹೇಳ್ತಿರೇನ್ರಿ ?

ಶೀಲಾ : ಹೋಗಪ್ಪ ನನಗೊಂದೂ ತಿಳಿಯೋಲ್ಲ.

ಸತ್ಯ : ಹಂಗಾರ ಒಂದ ಕೆಲಸ ಮಾಡ್ರಿ. ಚಂದಾಗಿ ಓದಿ ಕಥಿನಾರೂ ಹೇಳರಿ. ನಾನs ನಿಮುಗ ನಂಬರ್ ಹೇಳ್ತಿನಿ (ಎಂದು ವಾಯುವೇಗ ದಲ್ಲಿ ನಿರ್ಗಮನ) (ಶೀಲಾ ನಗುವಳು.)

ಶೀಲಾ : (ಪೇಪರ್ ಮಗುಚಿ ಹಾಕುತ್ತ ಕುಳಿತಿದ್ದಾಳೆ. ಸ್ವಲ್ಪ ಹೊತ್ತು ನೀರವ.)

ಸತೀಶ : (ಬರುತ್ತ) ಏನು ಅಮ್ಮಾವರು ಈ ಹೊತ್ತು ಪೇಪರ್ ಓದುತ್ತಿದ್ದಾರೆ.

ಶೀಲಾ : (ತಕ್ಷಣ ಎದ್ದು ನಿಂತು) ಇದೇನು ಈ ಹೊತ್ತು ಸಾಹೇಬರು ಬೇಗ ಬಂದುಬಿಟ್ರಲ್ಲ.

ಸತೀಶ : ಅಮ್ಮಾವರಿಗೆ ಕೊಂಚ Entertain ಮಾಡೋಣಾಂತ ಬಂದೆ.

ಶೀಲಾ : ಓ ನಮ್ಮ ದೇವರ ಗುಣ ನನಗೆ ಗೊತ್ತಿಲ್ವೆ? ಭಾನುವಾರವೂ ಆಫೀಸ್‌ನಲ್ಲಿ ಕೂಡೋ ಜನ ನೀವು.... ಈ ಹೊತ್ತು ಎಲ್ಲೊ Inspection ಗೆ ಹೋಗಬೇಕಾಗಿದೇಂತ ಕಾಣುತ್ತೆ.... ಅದಕ್ಕೇ ಬೇಗ ಬಂದಿದ್ದೀರಿ.

ಸತೀಶ : No..... No..... you are under the wrong impression.

ಶೀಲಾ : ಮದುವೆಯಾಗಿ ಇಷ್ಟು ವರ್ಷವಾದರೂ ನಿಮಗಿನ್ನೂ Honymoonಗೆ ಬರೋಕ್ಕೆ ಪುರಸೊತ್ತಾಗಿಲ್ಲ. ಅಂದ್ರೆ, ನೀವೆ ಯೋಚಿಸಿ, ದೀಪಾ

Sri Vidyabharathi Book Centre, Sringeri

CC-O. In Public Domain. Digitized by eGangotri

ವಳಿ ಹಬ್ಬಕ್ಕೆ ಒಂದು ದಿನ ಮಾವನ ಮನೆಗೆ ಬರೋಕ್ಕೆ ಪುರಸೊತ್ತಿಲ್ಲದ ಜನಾ ನೀವು. Am I right ?

ಸತೀಶ : (ಅವಳ ಗಲ್ಲಕ್ಕೆ ಚಿಟಿಕೆ ಹೊಡೆದು) ಪರವಾಗಿಲ್ವೆ.... ಇನ್ನೂ ಹನಿಮೂನ್‌ಗೆ ಹೋಗೊ ಆಸೆಯಿಟ್ಕೊಂಡಿದ್ದಿಯಲ್ಲ....ರಿಟೈರ್ ಆದ ಮೇಲೆ ಹಾಯಾಗಿ ಒಂದು ವರ್ಷ ಹನಿಮೂನ್ ಮಾಡೋಣ. ನಿನ್ನ All India Tourಗೆ ಕರಕೊಂಡು ಹೋಗ್ತೀನಿ.

ಶೀಲಾ : ಹೌದು ಇಬ್ಬರೂ ಕೈಯಲ್ಲಿ ಒಂದೊಂದು ಕೋಲು ಹಿಡಿದುಕೊಂಡು ಕಣ್ಣಿಗೆ ದಪ್ಪ ಗ್ಲಾಸಿನ ಕನ್ನಡಕ ಹಾಕಿಕೊಂಡು, ಬೊಚ್ಚು ಬಾಯಿ ಹಾ ಕ್ಕೊಂ ಡು ಹನಿಮೂನ್‌ಗೆ ಕಾಶ್ಮೀರಕ್ಕೆ ಹೋಗೋಣ .... ಆಗೋಲ್ವೆ ?

ಸತೀಶ : (ತಕ್ಷಣ Why not ? (ತಪ್ಪು ತಿಳಿದು) ಹೋಗಲಿ ಬಿಡು Darling ಇದೇ ಈಗ ಕಾಶ್ಮೀರ ಎಂದು ತಿಳಿದು ಹಾಡೋಣ ಬಾ (ಕಿವಿಯ ಬಳಿ ಸರಿದು) ಮನೆಯಲ್ಲಿ ಯಾರೂ ಇಲ್ಲ ತಾನೆ ?

(ಅವಳು ಇಲ್ಲವೆಂಬಂತೆ ಸಂಜ್ಞೆ ಮಾಡುವಳು.)

ಸತೀಶ : (ಭಾವಾವೇಶದಿಂದ ಹಾಡುತ್ತ ಅನ್ನದಾತಾ ಚಿತ್ರದ ಹಾಡು.) (ಅವಳ ಕೈ ಹಿಡಿದು.)

ओ मेरी प्राण सजनी–चंपावती आजा
हाय लेकर चैन यूँ मेरा दूर तू मुझसे न जा
कैसी मस्ती छाई है–महफिल रंगपर आई है
लेकिन मेरे इस दिल में–सच पूछो तन्हाई है
चंपावती तू आजा–चंपावती तू आजा

ಶೀಲಾ : ಇದೆಂಥ ಹಾಡ್ರಿ ? ಯಾರಾದರೂ ಕೇಳಿದ್ರೆ ಏನಂದ್ಕೊಂಡಾರು.

ಸತೀಶ : ಏನಂದ್ಕೋತಾರೆ.... ಗಂಡ ಹೆಂಡತಿ ಮನೆಯಲ್ಲಿ ಹನೀಮೂನ್ ಮಾಡ್ತಿದ್ದ[illegible]ಕ್ಕೊತಾರೆ. ಜೋರ್ ಹಾಡು ಹಾಡ್ತೀನಿ ಕೇಳು.

Sri Vidyabharathi Book Centre, Sringeri

CC-O. In Public Domain. Digitized by eGangotri

(ಭಾವಪೂರ್ಣವಾಗಿ — ಅಂದಾಜ ಚಿತ್ರದ ಹಾಡು)

जिंदगी इक सफर है सुहाना,
यहाँ कल क्या हो किसने जाना
चांद तारों से चलना है आगे
आसमानों से बढना है आगे
पीछे रह जाएगा ये जमाना
यहाँ कल क्या हो किसने जाना
जिंदगी इक सफर........

ಶೀಲಾ : ಸಾಕು ಸುಮ್ನಿರಿ.... ಸತ್ಯಪ್ಪ ಬರೋ ಹೊತ್ತಾಯ್ತು.

ಸತೀಶ : (ಭಾವಯುಕ್ತ) ನಾವೆಷ್ಟು ದುರ್ದೈವಿಗಳು ಶೀಲಾ.... ಈ ಹಾಳು ಹೊಟ್ಟೆಗಾಗಿ ಊರೂರು ಅಲೀತಾ ಇದ್ದೀವಿ.... ಒಂದು ಹಳ್ಳಿಯಲ್ಲಿ.... ಅದೂ ನಿರ್ಜನ ಪ್ರದೇಶದಲ್ಲಿ.... ಜಿಂಕೆ-ಮೊಲಗಳು ಸ್ವತಂತ್ರವಾಗಿ ಸಂಚರಿಸುವಲ್ಲಿ.... ಗಿಡ-ಬಳ್ಳಿಗಳು ಸ್ವಚ್ಛಂದವಾಗಿ ಬೆಳೆದು ನಿಂತಲ್ಲಿ ನಮ್ಮದೇ ಆದ ಒಂದು ಮನೆ ಇದ್ದರೆ ನಾವೆಷ್ಟು ಸುಖಿಗಳಾಗಿರುತ್ತಿದ್ದೆವು.

ಶೀಲಾ : ನಿಮ್ಮಂತಹ ಪ್ರಾಮಾಣಿಕ ಅಧಿಕಾರಿಗಳು ಮನೆ ಕಟ್ಟಿಸುವುದಂಟೆ ?

ಸತೀಶ : ಏನು ಮಾಡೋದು ಶೀಲಾ.... ಈ ಸಂಬಳದಲ್ಲಿ ಉಳಿತಾಯವೇ ಆಗೋಲ್ಲ. ಬೆಲೆಗಳಂತೂ ದಿನದಿನಕ್ಕೆ ಗಗನಕ್ಕೇರ್ತಾ ಇವೆ.

ಶೀಲಾ : ನೀವು ಹೇಳೋದು ನಿಜ. ಆದರೆ ನಿಮ್ಮ ಕೈಕೆಳಗಿನ ಗುಮಾಸ್ತೆಗಳನ್ನ ನೋಡಿ. ಒಂದೊಂದು ಮನೆ ಕಟ್ಟಿಸಿಕೊಂಡು ಹಾಯಾಗಿದ್ದಾರೆ. ಮೊನ್ನೆ ನಿಮ್ಮ Head Clerk ಮನೆಗೆ ಹೋಗಿದ್ದೀವಲ್ಲ. ಅವರ ಹೆಂಡ್ತೀ ಮೈಮೇಲೆ ಎಷ್ಟೊಂದು ಬಂಗಾರ.... ಎಂಥೆಂಥ ಸೀರೆ.... ಸೋಫಾ.... ಆಲ್ಮೇರಾ.... ಫ್ರೀಜ್....

ಸತೀಶ : ಅದು ಹೌದು ಶೀಲಾ.... ಅವರ ಹಣ ಗಳಿಕೆಯ ಮಾರ್ಗವೇ ಬೇರೆ. ಸಂಬಳದಲ್ಲಿಯೇ ಇದೆಲ್ಲ ಮಾಡೋಕೆ ಆಗುತ್ಯೆ.... ಅಡ್ಡದಾರಿ ಹಿಡೀತಾರೆ.... ನಂಜಣ್ಣನಂತಹ ದಾನಿಗಳು ಕಡಿಮೆಯೆ ? ನಾನು

Sri Vidyabharathi Book Centre, Sringeri

CC-O. In Public Domain. Digitized by eGangotri

ಹಾಗೆ ಸಂಪಾದಿಸೋದಿದ್ರೆ ಲಕ್ಷಗಟ್ಟಲೆ ಸಂಪಾದಿಸಬಹುದಿತ್ತು. ಆದರೆ ನನಗೆ ಆ ಮಾರ್ಗ ಹಿಡಿಸೋಲ್ಲ.... ಏನು ಮಾಡಲಿ ಹೇಳು.

ಶೀಲಾ : ನನಗೆ ಆ ಸಂಪಾದನೆ ಬೇಡ ಸುಮ್ನಿರಿ.... ದೇವರು ಕೊಟ್ಟದ್ದರಲ್ಲಿಯೇ ತಿಂದುಂಡು ಹಾಯಾಗಿರೋಣ.

ಸತೀಶ : ಒಂದೊಂದು ಬಾರಿ ಈ ನಂಜುಂಡನಂಥ ಬಕರಾಗಳನ್ನು ಉಪಯೋಗಿಸಿಕೊಂಡು ಅಡ್ಡದಾರಿಯಲ್ಲಿ ಸಂಪಾದನೆ ಮಾಡೋಣ ಅನ್ನಿಸುತ್ತೆ. ಆಫೀಸಿನಲ್ಲಿ ಎಲ್ಲರೂ ಕೈಚಾಚ್ತಿರೋವಾಗ ನಾನೊಬ್ನೆ ಮಡಿವಂತನಾಗಿ ಕುಳಿತು ಅವರ ಉಪಹಾಸಕ್ಕೆ ಗುರಿಯಾಗಬೇಕಾಗುತ್ತೆ.

ಶೀಲಾ : ನಾವೆಷ್ಟೋ ಸುಖವಾಗಿದ್ದೀವಿ. ದಿನ ತುಂಬ ದುಡಿದು ರಾತ್ರಿ ಗಂಜಿ ಕುಡಿದು ಬೀದೀಲಿ ಮಲಗೋ ಜನರನ್ನು ನೋಡಿದಾಗ ದೇವರು ನೀಡಿದ ಈ ಸುಖಕ್ಕೆ ಋಣಿಯಾಗಿರಬೇಕು. ಇಲ್ಲದ್ದು ಯೋಚಿಸಿ ಸುಮ್ಮನೆ ಯಾಕೆ ಕೊರಗಬೇಕು ?

ಸತೀಶ : ಅದೂ ನಿಜವೇ. (ಸೋಫಾದ ಮೇಲೆ ಕೂಡುವ)

ಶೀಲಾ : (ಒಳಗೆ ಹೋಗಿ ಒಂದು ಕಿತ್ತಳೆ ಹಣ್ಣು ತಂದು ಬಿಡಿಸಿ ಕೊಡುತ್ತ-ಸೋಫಾದಲ್ಲಿ ಕುಳಿತುಕೊಳ್ಳುತ್ತ) ತಗೊಳ್ಳಿ....

ಸತೀಶ : (ತೊಳೆಯನ್ನು ಬಾಯಿಗಿಟ್ಟು) ನಿನ್ನ ಕೈಗುಣವೇ ಹಾಗೆ.... ಏನು ಕೊಟ್ಟರೂ ಸಿಹಿಯಾಗಿರುತ್ತೆ ನೋಡು.

ಶೀಲಾ : (ಮತ್ತೊಂದು ತೊಳೆ ಕೊಡುತ್ತ). ಸಾಕು ಸುಮ್ನಿರೀಂದ್ರೆ....

ಸತೀಶ : (ಅದೇ ತೊಳೆ ಅವಳ ಬಾಯಿಗಿಡಲು ಪ್ರಯತ್ನಿಸುತ್ತ) ಹೂಂ.... ಆಂ.... ಮಾಡು.

ಶೀಲಾ : ಊಹೂಂ.... (ಎಂದು ಸೋಫಾದ ಬದಿಗೆ ಸರಿಯುತ್ತಿದ್ದಾಳೆ.)

ಸತೀಶ : (ಅವಳು ಸರಿದತ್ತ ತಾನೂ ಸರಿಯುತ್ತ) ಹೂಂ.... ಬೇಗ.... ಆಂ....

ಶೀಲಾ : ಉಹೂಂ.... ನೀವು ತಿನ್ನಿ.... ನನ್ನ ಕೈಲಿ ಇದೆ.

ಸತೀಶ : ಇದ್ದರೂ ಇರಲಿ. ಒಂದೇ ಒಂದು.... ಆಂ.... (ಎಂದು ಸರಿಯುವನು).

(ಶೀಲಾ ಸರಿಯುತ್ತ ಸರಿಯುತ್ತ ಸೋಫಾದ ಕೊನೆಗೆ ಹೋಗಿ ನೆಲಕ್ಕೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಕುಸಿಯುವಳು.) (ಅವಳನ್ನು ಎಬ್ಬಿಸುತ್ತ) ಓ.... ಅಮ್ಮಾವರು ಬಿದ್ದರು !

ಶೀಲಾ : (ಕೈಗೆ ನೋವಾಗಿದೆ. ಎದ್ದು ಕೈ ಸರಿಪಡಿಸುತ್ತ) ಹಾಯ್....

ಸತೀಶ : ಕೈ.... ತಾ.... ಇಲ್ಲಿ.... ಮಂತ್ರ ಹಾಕ್ತೀನಿ (ಎಂದು ಅವಳ ಕೈ ಹಿಡಿದು ಏನೋ ಗುಣಗುಣಿಸಿ 'ಫೂ' ಎಂದು ಒಂದು ಮುತ್ತು ಕೊಡು ವಷ್ಟರಲ್ಲಿ)

ಮಮತಾ : (ಶಾಲೆಯಿಂದ ಬರುತ್ತಾಳೆ.) (ಹಾಡುತ್ತ)

ಪಪ್ಪಾ ಕೊ ಮಮ್ಮೀಸೆ
ಮಮ್ಮಿ ಕೊ ಪಪ್ಪಾಸೇ
ಪ್ಯಾರ ಹೈ....

(ಇಬ್ಬರೂ ದೂರ ಸರಿದು ನಿಲ್ಲುವರು.) (ನಾಚಿಕೆ)

ಮಮತಾ : ಪಪಾ, ನಿನ್ನೆ ನಮ್ಮ ಸ್ಕೂಲಿಗೆ ಮೇಷ್ಟ್ರು ಬಂದಿದ್ರು.

ಶೀಲಾ : ಅದೇನು ಮಹಾ ? ದಿನಾಲು ಮೇಷ್ಟ್ರು ಬರದೆ ಸ್ಕೂಲು ನಡೆಯು ತ್ತೇನೆ ?

ಮಮತಾ : ದಿನಾ ಬರೊ ಮೇಷ್ಟ್ರು ಅಲ್ಲ ಮಮ್ಮಿ, ದೊಡ್ಡ ಮೀಸೆ ಮೇಷ್ಟ್ರು ಬಂದಿದ್ರು....

ಸತೀಶ : ಓ....ಇನ್‌ಸ್ಪೆಕ್ಟರು ಅಂತ ಕಾಣುತ್ತೆ.

ಮಮತಾ : ಹೂಂ....ಡೊಳ್ಳು ಹೊಟ್ಟೆ ಮೇಷ್ಟ್ರು ಕಣಮ್ಮ.

ಸತೀಶ : ಬಂದು ಏನು ಮಾಡಿದ್ರು ?

ಮಮತಾ : ಪ್ರಶ್ನೆ ಕೇಳಿದ್ರು ನಮಗೆಲ್ಲ.

ಸತೀಶ : ಏನಂತ ಕೇಳಿದ್ರು ನಿನಗೆ ?

ಮಮತಾ : ನಿನ್ನ ಹೆಸರು ಏನು ಅಂತ ಕೇಳಿದ್ರು....

ಸತೀಶ : ಅದಕ್ಕೆ ನೀನು ಏನು ಹೇಳಿದೆ ?

ಮಮತಾ : ಮೇಷ್ಟ್ರಿಗೇ ಕೇಳಿ ಅಂತ ಹೇಳಿದೆ.

ಶೀಲಾ : (ಮುಗುಳ್ನಗೆ) ಆಮೇಲೆ ?

ಮಮತಾ : ಮೀಸೆಯಲ್ಲೆ ಬೆಕ್ಕು ನಗೋ ಹಾಗೆ ನಕ್ಕು 'ತುಂಬಾ ಚೂಟಿ' ಅಂದರು.

Sri Vidyabharathi Book Centre, Sringeri

CC-O. In Public Domain. Digitized by eGangotri

ಸತೀಶ : ಸರಿ.... ಮುಂದೇನಾಯ್ತು ?

ಮಮತಾ : ನಿಮ್ಮಪ್ಪನ ಹೆಸರೇನೂಂತ ಕೇಳಿದ್ರು.

ಶೀಲಾ : ನೀನು ಏನೂಂತ answer ಮಾಡಿದೆ ?

ಮಮತಾ : ಮೊದಲು ನಿಮ್ಮಪ್ಪನ ಹೆಸರು ಹೇಳಿ ಅಂದೆ.

ಸತೀಶ : ಆಮೇಲೆ ? ಅವರೇನಂದರು ?

ಮಮತಾ : (ಹಾವಭಾವಯುಕ್ತ) ಹಾಗೆಲ್ಲ ಕೇಳಬಾರದಮ್ಮ (ತಾಯಿಯ ಗಲ್ಲ ಹಿಡಿದು) ನಿನ್ನ ಅಪ್ಪನ ಹೆಸರು ಹೇಳಿಬಿಡು.... (ಮುತ್ತಿಕ್ಕಿ) ತುಂಬ ಜಾಣೆ ಅಂದರು.

ಸತೀಶ : ಮುಂದೇನಾಯ್ತು ?

ಮಮತಾ : ನಾನು....ನಮ್ಮಪ್ಪನ ಹೆಸರು 'ಪಪಾ' ಎಂದೆ.

(ಎಲ್ಲರೂ ನಗುವರು) ಅದಕ್ಕೆ ನಮ್ಮ ಕ್ಲಾಸಿನಲ್ಲಿ ಎಲ್ರೂ ನಕ್ಕರು.... ಅವರೆಲ್ಲ ಯಾಕೆ ಪಪಾ ನಕ್ಕರು ?

ಸತೀಶ : ಮತ್ತೇಕೆ ? ನಿನ್ನ wrong answer ಕೇಳಿ.

ಮಮತಾ : ಮತ್ತೆ ಏನೂಂತ ಹೇಳಬೇಕಾಗಿತ್ತು ?

ಸತೀಶ : ನನ್ನ ತಂದೆ ಹೆಸರು ಸತೀಶರಾವ್ ಅನ್ನಬೇಕಿತ್ತು.

ಮಮತಾ : ಮತ್ತೆ ? ಅದು ನನಗೆಲ್ಲಿ ಗೊತ್ತಿತ್ತು ಪಪಾ ?

ಸತೀಶ : ಹೂಂ.... ಹೋಗ್ಲಿಬಿಡು....

ಮಮತಾ : ಪಪಾ.... ನಾನು ಯಾವಾಗ ದೊಡ್ಡವಳಾಗ್ತೀನಿ ಹೇಳು.

ಸತೀಶ : ಇನ್ನು ಸ್ವಲ್ಪ ವರ್ಷ ಹೋಗಲಿ.

ಮಮತಾ : ಆಗ ನನಗೆ ಆ ದೊಡ್ಡಮೇಷ್ಟ್ರ ಹಾಗೆ ಮೀಸೆ ಬರುತ್ತೆ ಅಲ್ವೇನಪ್ಪ ?

ಸತೀಶ : ಇಲ್ಲಮ್ಮ.... ಹೆಂಗಸರಿಗೆ ಮೀಸೆ ಬರೋದಿಲ್ಲ.

ಮಮತಾ : ನಮ್ಮ ಹೆಡ್ಡ ಮೇಡಮ್ಮ ಹೆಂಗಸು ಹೌದೊ ಅಲ್ಲೊ ?

ಸತೀಶ : ಹೌದು.... ಯಾಕೆ ?

ಮಮತಾ : ಮತ್ತೆ, ಅವರಿಗೆ ಮೀಸೆ ಬಂದಿವೆಯಲ್ಲ ?

ಸತೀಶ : ಹಾಗೆ ಕೆಲವರಿಗೆ ಇರುತ್ತಮ್ಮ.... ಹೋಗಲಿ ನೀನು ದೊಡ್ಡವಳಾದ ಬಳಿಕ ಏನು ಮಾಡ್ತಿ ?

ಮಮತಾ : ನಿನ್ನ ಹಾಗೆ ಸಾಹೇಬ ಆಗ್ತೀನಿ (ಗಲ್ಲ ಉಬ್ಬಿಸಿ) ಹೆಂಡ್ತಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಕರ್ಕೊಂಡು ಗಾರ್ಡನ್‌ಗೆ ಹೋಗ್ತಿನಿ. ಆಫೀಸಿಗೆ ದುಡ್ಡು ತತ್ತೀನಿ, ಎಲ್ರೂ ನನಗೆ 'ಸಾಬರು' ಅಂತ ಸಲಾಂ ಮಾಡ್ತಾರೆ.... ನಿನಗೆ ದಿನಾಲೂ School ಗೆ ಒಯ್ದು ಬಿಟ್ಟು ಬತ್ತೀನಿ. ಆಯಸ್ಕ್ರೀಮು ಕೊಡಿಸ್ತೀನಿ. ಮಮ್ಮಿಗೆ ಜರೀ Dress ತಂದ್ಕೊಡ್ತೀನಿ. ಹಾಲು ಕುಡಿಸ್ತೀನಿ.

ಶೀಲಾ : ಸರಿ.... ಬಿಡು.... ಈಗ ನಡೆ ಊಟಕ್ಕೆ.... (ಇಬ್ಬರೂ ಒಳಗೆ ನಡೆಯುವರು)

ಸತೀಶ : (ಪೇಪರ್ ಮುಖಕ್ಕೆ ಅಡ್ಡವಾಗಿ ಹಿಡಿದು ಓದುತ್ತ ಕುಳಿತಿರಲು.)

ಸತ್ಯಪ್ಪ : (ಬರುವನು. ಅವನ ಕೈಯಲ್ಲಿ ಆಗ ಒಯ್ದ ಕೈಚೀಲ ಇಲ್ಲ. ಬೇರೊಂದು ಬಣ್ಣದ ಕೈಚೀಲ ತಂದಿದ್ದಾನೆ.) ಕಥಿ ಓದಿದ್ರೇನ್ರಿ ?

ಸತೀಶ : (ನೋಡಿ) ಯಾವ ಕಥೆ ?

ಸತ್ಯಪ್ಪ : (ಬೆವರಿಳಿಯುವುದು-ಗಂಟಲಾರುವುದು) ಕಥಿ ?.... ಯಾವ ಕಥಿ ? ಅದೇರಿ.... ಅಲ್ಲರಿ.... ಇದsರಿ.... ಅದು ಯಾವುದಂದ್ರ.... ಹಾಂ.... ಕತ್ತಿ ಕಥೀರಿ.

ಸತೀಶ : ಕತ್ತೆ ಕಥೆ, ಅದಾವುದು ?

ಸತ್ಯಪ್ಪ : ಅದೂss.... ಅದsರೀ.... ಕತ್ತಿ ಮತ್ತು ಅಗಸ.... ಕತ್ತೀನ ಅಗಸ ಬೆನ್ನ ಮ್ಯಾಗ ಕೂಡಿಸಿಗೊಂಡು ಹೋಗ್ತಾನಲ್ರಿ ?

ಸತೀಶ : ಆ ಕಥೆ ನಿನಗ್ಯಾಕ ಬೇಕು ?

ಸತ್ಯಪ್ಪ : ನನಗೆ ?.... (ಯೋಚಿಸಿ)ಬ್ಯಾಡಿ.... ನನಗಲ್ರಿ.... ಮಮ್ಮಾಗ ಕಥಿ ಹೇಳಾಕ ಬೇಕಾಗಿತ್ತರಿ....

ಸತೀಶ : ಹೂಂ.... ಹೋಗು.... ಒಳಗಡೆ.

ಶೀಲಾ : (ಅಷ್ಟರಲ್ಲಿ ಪ್ರವೇಶಿಸಿ) ಏನು ಸತ್ಯಪ್ಪ ? ಸಾಮಾನು ತಂದೆಯಾ ?

ಸತ್ಯಪ್ಪ : ತಂದೀನಲ್ರಿ ?

ಶೀಲಾ : (ಕೈಚೀಲ ನೋಡಿ) ಇದಾರದ್ದು ಕೈಚೀಲ ?

ಸತ್ಯಪ್ಪ : ನಮ್ಮದs ಅಲ್ರಿ ?

ಶೀಲಾ : ನಮ್ಮ ಕೈಚೀಲ ನಮಗ್ಗೊತ್ತಾಗೋಲ್ವೆ ? ಯಾರದ್ದೋ ಚೀಲ ಎತ್ಕೊಂಡು ಬಂದಿದ್ದೀ ಅಂತ ಕಾಣುತ್ತೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಸತ್ಯಪ್ಪ : (ಚೀಲ ನೋಡಿ) ಹಂಗೇನ್ರಿ.... ಹಂಗಾರ ಒಳಗಿರೊ ಸಾಮಾನಾರ ನೋಡೋಣು ನಿಲ್ರಿ. (ಎಂದು ಒಂದೊಂದೇ ಸಾಮಾನು ಬಿಚ್ಚಿ ನೋಡುವನು.) ಇದೇನು....ಹುರುಳಿಕಾಳು....ಹಿಂಡಿ ಕೊಟ್ಟಾನಲ್ರಿ.... ದಡ್ಡ ನನಮಗ.

ಶೀಲಾ : ಅದರಲ್ಲಿ ಅವನ ತಪ್ಪೇನು ? ನೀನೇ ಬೇರೆಯವರ ಚೀಲ ಎತ್ತಿಕೊಂಡು ಬಂದಿದ್ದೀ ಅಂತ ಕಾಣುತ್ತೆ. .... ಹೋಗಲಿ .... ಅದನ್ನು ವಾಪಸ್ ಕೊಟ್ಟು ನಮ್ಮ ಚೀಲ ತಗೊಂಬಾ.... ಹೋಗು.

ಸತ್ಯ : (ಎಲ್ಲ ಸಾಮಾನುಗಳನ್ನು ತುಂಬಿಕೊಂಡು) ಹೂಂ.... ಹಂಗ ಮಾಡ್ತೀನ್ರಿ.... (ಎಂದು ಹೋಗುವನು.)

ಶೀಲಾ : (ಸತೀಶನಿಗೆ) ನೀವೂ ಬನ್ನಿ ಊಟಕ್ಕೆ....

ಸತೀಶ : ಇಷ್ಟು ಬೇಗ.... ? ಬರಲಿ ಎಲ್ಲರೂ....

ನಂಜಣ್ಣ : (ಅಷ್ಟರಲ್ಲಿ ಪ್ರವೇಶಿಸುವ ಅಜಾನುಬಾಹು ವ್ಯಕ್ತಿ. ವಯಸ್ಸು ೫೦ ದಾಟಿದ್ದರೂ ೩೫ರ ಪ್ರಾಯದಲ್ಲಿರುವಂತೆ ಮುಖದ ಕಳೆ. ಹುಲುಸಾದ ಮೀಸೆ. ದಪ್ಪ ಮೂಗು. ಕನ್ನಡಕ. ಖಾದಿ ಪಂಚೆ–ಜುಬ್ಬ.... ಗಂಜಿ ಹಾಕಿ ಇಸ್ತ್ರಿ ಮಾಡಿದ್ದು. ಕತ್ತಿನಲ್ಲಿರುವ ದಪ್ಪ ಎಳೆಯ ಚಿನ್ನದ ಸರ.... ಎಲ್ಲರಿಗೂ ಕಾಣುವಂತೆ ಜುಬ್ಬದ ಒಂದು ಗುಂಡಿ ಹಾಕಲೇ ಇಲ್ಲ. ನಸ್ಯದ ಬಣ್ಣದ ಜಾಕೀಟು. ಅದಕ್ಕೆ ಗುಂಡಿ ಹಾಕಲಿಲ್ಲ. ಕಾರಣ ಹೊಟ್ಟೆ ಬೆಳೆದಿದೆ. ಜಾಕೀಟಿನ ಜೇಬಿನಲ್ಲಿ Pocket Watch ಇದೆ. ಅದರ ಚಿನ್ನದ ಚೈನು ಹೊರಗೆ ಕಾಣುತ್ತಿದೆ. ತಲೆಯ ಮೇಲೆ ಶುಭ್ರ-ಟೋಪಿ. ದಪ್ಪ ಕಣ್ಣುಗಳು–ದಪ್ಪ ಹುಬ್ಬು-ನೋಡಿದರೆ ಭಯಾನಕ. ಕೈಯಲ್ಲಿ ಒಂದು ವಾಕಿಂಗ್ ಸ್ಟಿಕ್.... ಕಾಲಿಗೆ ಕರಿಯ ಬಣ್ಣದ ಬೂಟು-ಆದರೆ ಕಟ್ಟುವಂಥದಲ್ಲ. ಬಾಯಿಯಲ್ಲಿ ಹೊಗೆಯುಗುಳುವ ಪೈಪ್. ನೋಡಿದರೆ ಅಂಜಿಕೆ ಹುಟ್ಟುವಂತಹ ಮುಖಭಾವ) ನಾನೂ ಬಂದೆ.

ಸತೀಶ : (ನೋಡಿ....) (ಒಂದು ಕ್ಷಣ ನೀರವ. ಎಲ್ಲರೂ ಮಿಕಿ ಮಿಕಿ ನೋಡುತ್ತಿದ್ದಾರೆ. ಹಿನ್ನೆಲೆಯಲ್ಲಿ ಭೀಕರ ಧ್ವನಿ ತರಂಗಗಳು.) ಓ... ಬನ್ನಿ....

ನಂಜಣ್ಣ : ನನ್ನ ಗುರುತು ಸಿಗತೇನ್ರಿ ?

Sri Vidyabharathi Book Centre, Sringeri

 CC-O. In Public Domain. Digitized by eGangotri

ಸತೀಶ : ಓ.... ನೀವೇ ನಂಜಣ್ಣನವರು ಅಂತ ಕಾಣುತ್ತೆ.... ಅಲ್ವಾ ?

ನಂಜಣ್ಣ : (ಜೊತೆಯಲ್ಲಿರುವ ನಕುಲನಿಗೆ) ಯೋಳಯ್ಯ.... ನಖುಲ ನಭೂವಾಣಿ.... ನಾನು ಹ್ಯಾರೂಂತ....

ನಕುಲ : (ಉಗುಳು ನುಂಗಿ) ಇವರಾ ?.... ಅರವತ್ತೆಕರೆ ಖುಷ್ಕಿ ಜಮೀನು, ನೂರೈವತ್ತು ಎಕರೆ ಬಿನ್‌ಶೇತ್ಕಿ, ಇಪ್ಪತ್ತೆಕರೆ ಅಡಿಕೆತೋಟ, ಅರವತೆಕರೆ ಹುಲ್ಲು ಬೆಳೆಯುವ ಬೇಣ, ಮೂವತ್ತೈದು ಗಾಡಿ ಕಟ್ಟಿಗೆ ಸಿಗೋ ಅಡವಿ, ಎರಡು ಅಡಿಕೆ ಮಂಡಿ, ಎರಡು ಜಿನಸಿನ ಅಂಗಡಿ, ಒಂದು ಹೋಟ್ಲು, ಒಂದು ಸಿನೇಮಾ ಥಿಯೇಟರು, ಒಂದು ಕುಸ್ತಿ ಕಣ' ಮೂರು ಜೀಪು, ಎರಡು ಕಾರು, ನಾಲ್ಕು ಲಾರಿ, ಒಂದು ಬುಲ್ಡೋಜರ್, ಎರಡು ಟ್ರ್ಯಾಕ್ಟರ್, ಹತ್ತು ಹೋರಿ, ಆರು ಹಸು, ಐದು ಎಮ್ಮೆ, ಒಂದು ಕೋತಿ, ಒಂದು ನವಿಲು, ಒಂದು ಕುದುರೆ, ಎರಡು ಕತ್ತೆಗಳ ಮಾಲಕ, ಮಂತ್ರಿಗಳ ಮಾವ, ಅರ್ಧ ಜಿಲ್ಲೆಯ ಕಂಟ್ರಾಕ್ಟ ಕೈಯಲ್ಲಿಟ್ಟುಕೊಂಡಿರುವ ಏಕೈಕ ಪುಢಾರಿ, ನೂರಾರು ಸಂಸ್ಥೆಗಳ ಅಧ್ಯಕ್ಷ, ಬಡವರಾಧಾರಿ, ಅಧಿಕಾರಿಗಳ ಕೈವಾರಿ, ಒಲಿದರೆ ನಾರಿ, ಮುನಿದರೆ ಮಾರಿ, ನಂಜೂರಿನ ನಾಡಗೌಡ ನಾಗಣ್ಣನ ಏಕಮಾತ್ರ ಪುತ್ರಶ್ರೇಷ್ಠ, ಈ ನಂಜಣ್ಣನವರು ಕಟ್ಟಿಕೊಂಡ ಸಂಸಾರ ಬೇರೆ— ಇಟ್ಟುಕೊಂಡ ಸಂಸಾರ....

ನಂಜಣ್ಣ : (ತಕ್ಷಣ) ಪುಲ್ ಇಸ್ಟಾಪ್. (ನಕುಲನ ಕಿವಿಯಲ್ಲಿ) ಅಧೂ ನಮ್ಮ ಪರವೇಟು ಸಮಾಸಾರ. ಅಂಗೆಲ್ಲ ಷಬ್ಲೀಕ್ ಮಾಡಬಾರಧೈಯ್ಯ ನಕುಲಪ್ಪ (ಆತ ತಲೆ ಅಲ್ಲಾಡಿಸುವ).

ಸತೀಶ : ತಮ್ಮ ಪರಿಚಯವಾದುದು ತುಂಬಾ ಸಂತೋಷ.... ಬನ್ನಿ.... ದಯಮಾಡಿಸಿ.... ಕೂತುಕೊಳ್ಳಿ.

ನಕುಲ : ಕೊಂಚ ಫ್ಯಾನ ಹಾಕಿ.... ನಮ್ಮ ಯಜಮಾನರಿಗೆ ಸೆಕೆ ಅಂದರೆ ಆಗದು. (ಫ್ಯಾನ್ ಸ್ವಿಚ್.... ನಂಜಣ್ಣ ಕುಳಿತುಕೊಂಡು ಸುತ್ತಲೂ ನೋಡುವ.)

ನಂಜಣ್ಣ : ನೀವು ನಮ್ಮೂರಿಗೆ ಬಂದದ್ದು ಕೇಳಿ ಭೋ ಸಂತೋಷವಾಯ್ತು.

ಸತೀಶ : ಏನೋ ತಮ್ಮ ಅಭಿಮಾನ.

Sri Vidyabharathi Book Centre, Sringeri

CC-O. In Public Domain. Digitized by eGangotri

ನಂಜಣ್ಣ : ನೀವು ಹೊಳ್ಳೆ ಹಾಫೀಸರ್ ಅವ್ತ್ತು ಕೇಳಿದೆ. ಭೋ ಸಂತೋಸವಾಯ್ತು, (ನಕುಲನಿಗೆ) ಹಲ್ವೇನಯ್ಯ ?

ನಕುಲ : ಹೌದು ಸ್ವಾಮೀ (ತಲೆ ಕವಲೆತ್ತಿನಂತೆ ತೂಗುವ).

ನಂಜಣ್ಣ : ನಿಮ್ಮ ಈ ಚಿಕ್ಕ ವಯಸ್ಸಿನಲ್ಲಿ ನೀವು ಮಾಡಿಧ ಪರಗತಿ ನೋಡಿ ಎಂಥೆಂಥಾ ಕತ್ಥೇನೂ ಮೆಚ್ಚಬೈದು. (ನಕುಲನಿಗೆ) ಹಲ್ವೇನಯ್ಯ ?

ನಕುಲ : (ತಲೆದೂಗುತ್ತ) ಹೌದು ಸ್ವಾಮೀ.

ನಂಜಣ್ಣ : ನೀವು ಹಿದ್ವ್ಯಾ ಕಲಿಯಾಕೆ ಫೋರಿಣ್ (foreign) ಗೆ ಓಗಿ ಬಂದಿದ್ರೀ ಅವ್ರ್ತಾ ನಮ್ಮ ಪ್ರೆಂಡ್ಸು ಯೋಳಿದ್ರು. ಭೋ ಸಂತೋಸವಾಯ್ತು (ನಕುಲನತ್ತ ತಿರುಗಿ) ಹಲ್ವೇನಯ್ಯ ?

ನಕುಲ : (ತಲೆದೂಗುತ್ತ) ಹೌದು ಸ್ವಾಮೀ.

ನಂಜಣ್ಣ : ನಾನೂ ಮುಂದಿನ ಮಂತ್ತು (Month) ಫಾರೀಣ್‌ಗೆ ವಾಕಿಂಗ್ ಓಗಾಣಾ ಅಂತ ಮಾಡಿವ್ನಿ, ಹಲ್ಲಿ ಬಿರ್ಯ್ಯಾಂಡಿ, ಹಿಸ್ಕಿ, ಯೆಂಣು ಹೆಲ್ಲಾ ಚೀಫಾಗಿ ಸಿಗ್ತೈತಂತೆ, ಹೀ ದೇಸದ ಜನಾ ತುಂಬಾ ಬ್ಯಾಕ್‌ವರ್ಡ್ಸು. (ಬಟ್ಟೆ ತೋರಿಸಿ) ಈ ಬಟ್ಟೆ ಆಕ್ಕೊಂಡು ಕುಡಿಯೋಕೆ ಓದ್ರೆ ಅಲ್ಕಾ ನನಮುಕ್ಳು ನಘುತಾರೆ, ನಮ್ಮ ಘಾಂದಿ ಮಆತ್ಮಾ ಕುಡೀತಿರಲಿಲ್ವಾ ? ಕುಡೀತಿದ್ದ. ನಾ ನೋಡಿವ್ನಿ.... (ನಕುಲನಿಗೆ) ಹಲ್ವೇನಯ್ಯ ?

ನಕುಲ : (ತಲೆದೂಗಿ) ಹೌದು ಸ್ವಾಮೀ. ತಾವು ಮಹಾತ್ಮಾ ಗಾಂಧಿ ಜೊತೆ ಗೋಲಿ ಆಡಿದವರು ಅಲ್ವೆ ?

ನಂಜಣ್ಣ : ಅವನೊಬ್ಬನೆ ಹ್ಯಾಕೆ .... ಅವನಪ್ಪನ ತಾವಾನೂ ಆಡಿವ್ನಿ .... ಅವನಪ್ಪ ಮೋತಿಲಾಲು ನಮ್ಮ ಕುಲೋಜ್ (Close) ಪ್ರೆಂಡ್ಸು.

ಸತೀಶ : ಗಾಂಧಿಜೀಯವರ ತಂದೆ ಮೋತಿಲಾಲ ಅಲ್ಲ.... ಕರಮಚಂದ.

ನಂಜಣ್ಣ : ಹವನೇ ಖಣ್ರೀ.... ಖರಮುಚಂದ್ರ.... ಹೊಂದಿನ ಹೇನಾಯ್ತು ಆಮ್ತೀರಾ ? ....ಏನು ಅವ್ತ್ತು ಕೇಳಿ.

ಸತೀಶ : ಏನಾಯ್ತು ?

ನಂಜಣ್ಣ : ಹೊಂದು ದಿನ ನಮ್ಮ ಊರಿನ ಸಂತೆಗೆ ಹೆಮ್ಮೆ ಮಾರಾಕೆ ಆವನಪ್ಪ ಬಂಧಿದ್ದ. ಹವ್ನ ಜತೇ ಈ ಉಡುಗುನೂ ಹಿದ್ದಾ.... ಹಿವ್ನಿಗೆ ಗೋಳಿ ಹಾಡೊ ನೆಪ್ಪಾತು. ಗಂಡ ಸತ್ತಪ್ಪರಂಗೆ ಹಳಾಕೆ ಚಾಲೂ ಮಾಡ್ದಾ. ಹಾಗ.... ಹೇನಾಯ್ತು ಆಮಿರಾ. (ಒಂದು ಕ್ಷಣ ಮೌನ) ಕೇಳಿ ಹೇನಾಯ್ತು ಅವ್ತು.

Sri Vidyabharathi Book Centre, Sringeri

CC-O. In Public Domain. Digitized by eGangotri

ಸತೀಶ : ಏನಾಯ್ತು ?

ನಂಜಣ್ಣ : ಹವನಪ್ಪ ಗೋಳಿ ಹಾಡೋ ಉಡುಗುರ್ನ ಉಡಕ್ಕೊಂತಾ ಒಂಟ. ಹೆಲ್ಲ ಒಂಟಾ.... ಉಡುಗರ್ನ ಉಡುಕಾಕೆ. ಗೋಳಿ ಹಾಡೋದ್ರಾಗೆ ಉಸಾರು ಉಡುಗರು ಬೇಕಾಗಿತ್ತು. ನಮ್ಮೂರ್ಹರ್ನಲ್ಲಿ ಹೇಲ್ರು ಏಳಿದ್ರು ನಂಜಣ್ಣ ಹಾಟದಲ್ಲಿ ಭೋ ಬೆರ್ಕಿ ಉಡುಗಾ ಅನ್ತು. ಹಾಗ ಹೇನಾಯ್ತು ಅನ್ತು ಕೇಳಿ.

ಸತೀಶ : (ಆಕಳಿಸುತ್ತ) ಹೂಂ.... ಏನಾಯ್ತು ?

ನಂಜಣ್ಣ : ಸೀದಾ ನಮ್ಮ ಮನೆಗೇ ಬಂಧ್ರು. ಗೋಳಿ ಹಾಟಾ ಕಲಿಸ್ಕೊಡು ಅನ್ತು ಯೇಳಿದ್ರು....ಹಷ್ಟಕ್ಕೇ ಊಂ ಅನ್ತೀನಾ ನಾನು? ಊಹೂಂ ನನಗೆ ಟೇಮಿ (Time) ಲ್ಲ ಅಂದೆ. ಹಾಮೇಲೆ (ಕ್ಷಣ ಮೌನ) ಹೇನಾಯ್ತು ಅನ್ತು ಕೇಳಿ.

ಸತೀಶ : (ಮೈಮುರಿದು.) ಹೂಂ.... ಏನಾಯ್ತು ?

ನಂಜಣ್ಣ : ನನಗೆ ಧಮ್ಮಯ್ಯ ಆಕಿದ್ರು. 'ನಿನಗೆ ಫಾಲಿಢಾಲ್ ಕೊಡಿಸ್ತಿವಿ' ಅಂದ್ರು.

ಸತೀಶ : ಫಾಲಿಡಾಲ್ ಉ ? ಅಂದ್ರೆ ....?

ನಂಜಣ್ಣ : ಓ.... ಹದೂ ತಿಳಿಯಾಕಿಲ್ವಾ....ಕಾಲಿನಿಂದ ಆಡ್ತವರಲ್ಲ ಚಂಡು. ಹದಲ್ಲ.... ಮೀನು ಇಡಿಯೊ ಬಲೆ ಕಟಗೊಂಡು ಆಡ್ತವರಲ್ಲ ಮೇಲೆ ಆರಿಸಿ....

ಸತೀಶ : ಓ.... ವಾಲಿಬಾಲ್ ಅನ್ನಿ.

ನಂಜಣ್ಣ : ಹದೇ ....ಹಾಮೇಲೆ ಪಾಠ ಅನ್ತು ಗೋಳಿ ಕಳಿಸಿದೆ. ಹಾಮೇಲೆ ನಾವಿಬ್ರೂ ಸಾಯೋತಂಕಾ ಕುಲೋಜ್ ಫ್ರೆಂಡ್ಸು ಆಗಿದ್ಧೀವಿ. (ನಕುಲನಿಗೆ) ಹಲ್ವೇನಯ್ಯ. ?

ನಕುಲ : (ತಲೆದೂಗಿ) ಹೌದು ಸ್ವಾಮಿ.

ನಂಜಣ್ಣ : ಹಂದಂಗೆ ನಾನೀಗ ಯಾವ ಪೈಂಟ್ (Point) ಮಾತಾಡ್ತಾ ಹಿದ್ದೆ ?

ನಕುಲ : (ಜ್ಞಾಪಿಸುತ್ತ) ಆಂ....ಇದೂ....ಅದೂ (ಹೊಳೆದವನಂತೆ) ಹಾಂ.... (ಮತ್ತೆ ಮರೆತು) ಆಂ? ಗಾಂಧಿ .... ಗೋಲಿ .... ಫಾಲಿಡಾಲ್ ? (ಚಿಟಿಕೆ ಹೊಡೆದು) ಹಾಂ....ನೋಡಿ ಫಾರೀನ್‌ಗೆ ಹೋಗೊ ವಿಷಯ.

Sri Vidyabharathi Book Centre, Sringeri

CC-O. In Public Domain. Digitized by eGangotri

ನಂಜಣ್ಣ : ಭೇಸ್.... ಭೇಸ್.... ನೆಪ್ಪು ಅಂದ್ರೆ ಇಂಗಿರಬೇಕು. ಹಿಂದಂಗೆ ನಮ್ಮ ಮಘಳ ಘಂಡ ಏಳನ್ನೆ ಫಾರೀಣ್ಣಿಗೆ ಓಗಿ ಬಾ ಪಾಸು (Pass) ಕೊಡಸಾನಾ ಅವ್ನು.

ಸತೀಶ : ಮತ್ತೆ ಯಾಕೆ ಹೋಗಲಿಲ್ಲ ಇನ್ನು ?

ನಂಜಣ್ಣ : (ತಕ್ಷಣ) ಹ್ಯಾಕೆ ನಿಮಗೆ ಬೇಜಾರಾಯ್ತಾ ?

ಸತೀಶ : No.....No..... ನಿಮಗೆ ಮನೆಗೆ ಹೋಗು ಅನ್ನಲಿಲ್ಲ. ಇನ್ನು foreign ಗೆ ಯಾಕೆ ಹೋಗಿಲ್ಲ ಅಂದೆ.

ನಂಜಣ್ಣ : (ದೊಡ್ಡಕೆ ನಕ್ಕು) ಓ ಅಂಗಂತೀರಾ ?.... ಹದೊಂದು ಕತೆ. (ಕ್ಷಣ ಮೌನ) ಏನವ್ತು ಕೇಳಿ.

ಸತೀಶ : (ದೀರ್ಘ ಆಕಳಿಕೆ) ಏನು ?

ನಂಜಣ್ಣ : ನಂಘೆ ನಮ್ಮಳಿಯಾ ಗೇಟಪಾಸ ಕೊಡ್ತವನಂದ್ರೆ, ನಮ್ಮ ಸಂಸಾರ ಕ್ಕೆಲ್ಲ ಕೊಡೋಕಾಯ್ತುದಾ ? ನನ್ನ ಕಾಸಾ ಎಂಡ್ತಿ.... ಹಂದ್ರೆ ನಮ್ಮ ಮಿಶ್ಸೆಸ್ ಹವಳು ಬತ್ತೀನಿ ಅವ್ತವಳೆ. ಹವಳು ಬಂದ್ರೆ ಮಕ್ಕು-ಮೊಮ್ಮಕ್ಕು ಬಿಡ್ತವಾ ? ಈ ಹೆಲ್ಲಾರ್ನೂ ಒಯ್ಯಬೈದು. ಹಾದರೆ ಹಿಮಾನ್ (ವಿಮಾನ) ಸಾಲ್ದು ವ್ಹಾಗೀನು ಬೇಕಾಗತ್ತೈತೆ (ನಗು) (ನಕುಲನಿಗೆ) ಹಲ್ವೇನಯ್ಯಾ ?

ನಕುಲ : (ತಲೆದೂಗಿ) ಹೌದು ಸ್ವಾಮಿ.

ನಂಜಣ್ಣ : ಹದಕ್ಕೆ ಗೇಟಪಾಸ ಹೊಂದು ಸಿಕ್ರೆ ಹೊಂದು ಲಾರೀಲಿ ಹೆಲ್ಲಾರ್ನೂ ತುಂಬ್ಕೊಂಡು ಓಗಾಣಾ ಅವ್ತ ಮಾಡಿವ್ನಿ. (ನಕುಲನಿಗೆ) ಹಲ್ವೆನಯ್ಯ ?

ನಕುಲ : (ತಲೆದೂಗಿ) ಹೌದು ಸ್ವಾಮೀ.

ಸತೀಶ : (Watch ನೋಡುತ್ತ) ತಾವು ಬಂದಂಥ ಕೆಲಸ ಹೇಳಿ. ನಾನು ಸ್ವಲ್ಪ Inspection ಗೆ ಹೋಗಬೇಕು.... ಅದಕ್ಕೆ.

ನಂಜಣ್ಣ : ಮೊನ್ನೆ ನಿಮಗೆ ಪರಜಂಟ ಕಳಿಸಿದ್ದೆ. ನೀವು ಬ್ಯಾಡಾ ಅವ್ತ ಇಂದಕ್ಕೆ ಕಳಿಸಿದ್ದು ನಂಘೆ ಬೋ ದುಃಕ್ಕ ಆಯ್ತು ಪಿರಿತಿಯಿಂದ ಕಳಿಸಿದ್ದು ಬ್ಯಾಡಾ ಅಂದ್ರೆ ಎಂಗೆ ?

ಸತೀಶ : ಅದು ನಿಜ....ಆದರೆ ನಾನು ಯಾರಿಂದ ಏನನ್ನೂ ಸ್ವೀಕರಿಸುವುದಿಲ್ಲ. ನನಗೆ ಅದೆಲ್ಲ ಸೇರೋದಿಲ್ಲ.

Sri Vidyabharathi Book Centre, Sringeri

CC-O. In Public Domain. Digitized by eGangotri

ನಂಜಣ್ಣ : ಅಂಗಂದ್ರೆ ಎಂಗೆ? ಮನಸ್ಸು ವಿಸಾಲ ಮಾಡಬೇಕು. ಕೊಟ್ಟದ್ದು ಬ್ಯಾಡ ಅನ್ನಬಾರ್ದು. ಪಿರಿತಿ-ಇಸ್ವಾಸ ಮುಕ್ಯ.

ಸತೀಶ : ಇಂದು ಅದು ಪ್ರೀತಿ-ವಿಶ್ವಾಸ. ನಾಳೆ ಅದು ಲಂಚವಾಗುತ್ತೆ.

ನಜಂಣ್ಣ : ನೀವೇಳೊದು ಸರಿ ಐತೆ. ನಾವು ಅಂಗೆ ಲಂಚಗಿಂಚ ಕೊಡೋವ್ರಲ್ಲ. (ನಕುಲನಿಗೆ) ಹಲ್ವೇನಯ್ಯ?

ನಕುಲ : ಹೌದು ಸ್ವಾಮಿ.

ನಂಜಣ್ಣ : ನೀವು ಹಿನ್ನೂ ಪಿರಾಯದ ಉಡುಗರು. ನಮ್ಮ ಹಳಿಯಃನಂಗೆ ಐದೀರಿ. ಒಂದೆಳ್ಡು ಒಳ್ಳೆ ಮಾತು ಏಳಾಣಾ ಅಮ್ತ ಬಂದಿವ್ನಿ. (ನಕುಲನಿಗೆ) ಹಲ್ವೇನಯ್ಯ?

ನಕುಲ : ಹೌದು ಸ್ವಾಮಿ.

ನಂಜಣ್ಣ : ನೀವು ಭೋ ಬುದ್ದಿವಂತರು ಅಮ್ತ ಕೇಳಿವ್ನಿ. ಹುಸಾರು ಇಂಜಿನೀಯರ್ ಅಮ್ತ ಪರಮೋಸನ್ ಕೊಟ್ಟವರೆ ಅಮ್ತ ಕೇಳಿ ಭೋ ಸಂತೋಸವಾಯ್ತು. ನಿಮ್ಮಂಥವರು ಪರಪಂಚದಲ್ಲಿ ಭೋ ಕಮ್ಮಿ ಉಟ್ಟುತವರೆ. (ನಕುಲನಿಗೆ) ಹಲ್ವೇನಯ್ಯ?

ಸತೀಶ : (ಬೇಜಾರಿನಿಂದ ವಾಚ್ ನೋಡಿ) ಹೂಂ.... ಬೇಗ ಹೇಳಿ.... ನನಗೆ ಅರ್ಜಂಟ ಕೆಲಸವಿದೆ.

ನಂಜಣ್ಣ : (ತನ್ನ ಕೈಗಡಿಯಾರ ನಕುಲನ ಮುಂದೆ ಹಿಡಿದು.) ಏಳಯ್ಯ ಗಂಟೆ ಎಸ್ಟಾಯ್ತು ಅಮ್ತ. ನಮಗೂ ಭೋ ಅರ್ಜ್ಯಂಟ್ ಕೆಲ್ಸ ಐತೆ.... ಈಗ ಅನ್ನೆಲ್ಡು ಗಂಟೆಗೆ ಚೀಪ್ (Chief) ಮಂತ್ರಿಗಳ ಪೋನ ಬರೂದೈತೆ (ನಕುಲನಿಗೆ) ಹಲ್ವೇನಯ್ಯ?

ನಕುಲ : (ತಲೆದೂಗಿ) ಹೌದು ಸ್ವಾಮಿ.

ನಂಜಣ್ಣ : ಈಗ ಏಳೋ ಎಳ್ಡು ಹಂದ್ರೆ ಎಳ್ಡೇ ಎಳ್ಡು ಮಾತು ಏಳೇಬುಡ್ತೀನಿ. ಅಂಗೆ ನಂಗೆ ಯ್ಯಾರ ಮುಲಾಜೀನೂ ಹಿಲ್ಲ. ಮಾನಾ ಮರ್ವ್ಯಾದಿ ಮಡಗದೆ ಏಳೇ ಬುಡ್ತೀನಿ.... (ನಕುಲನಿಗೆ) ಹಲ್ವೇನಯ್ಯ?

ನಕುಲ : (ತಲೆದೂಗಿ) ಹೌದು ಸ್ವಾಮಿ.

(ಅಷ್ಟರಲ್ಲಿ ಶೀಲಾ ಎಲ್ಲರಿಗೂ ಕಾಫಿ ತಂದಿಡುವಳು.)

ಸತೀಶ : (ಎಲ್ಲರಿಗೂ ಕಾಫಿ ತಟ್ಟೆ ಕೊಡುತ್ತ) ತಗೊಳ್ಳಿ (ಶೀಲಾ ಹೋಗಿ ಬಾಗಿಲ ಮರೆಯಲ್ಲಿ ನಿಲ್ಲುತ್ತಾಳೆ.)

Sri Vidyabharathi Book Centre, Sringeri

CC-O. In Public Domain. Digitized by eGangotri

ನಂಜಣ್ಣ : (ಕಾಫಿ ಗುಟುಕರಿಸುತ್ತ) ಹಾ .... ಹಾ ಹ್ಞಾ ಕಾಫೀ ಅಂದರೆ ಅಮರತ ಇದ್ದಂಗೆ ಐತೆ. ಯಾವ ಓಟ್ಲಾಗೂ ಮಡ್ಗಾಕಿಲ್ಲ....

ಸತೀಶ : (ಕಾಫಿ ಕುಡಿದು ಕೆಳಗಿಡುತ್ತ) ಹೂಂ.... ಹೇಳಿ.... ಬೇಗ ಮುಗಿಸಿ

ನಂಜಣ್ಣ : ಈಗ ಹದೇ ಏಳ್ತೀನಿ. ನೋಡಿ ನೀವು ಹಿನ್ನು ಉಡುಗು ಬುದ್ಧಿ, ಈ ಪರಪಂಚದಲ್ಲಿ ದುಡ್ಡು ಮುಕ್ಯ ಐತೆ. ದುಡ್ಡೇ ದೇವರು ಅಮ್ತ ಕಾಳಿದಾಶ ಆಡವ್ನೆ. ಹೀಗ್ಲೆ ನೀವು ಅಣಾ ಮಾಡಿಬುಡಬೇಕು. ಮನೆ ಕಟ್ಸಿಸಿಕೊಳ್ಳಿ, ಒಂದು ಕಾರು ಮಡಗಿಕೊಳ್ಳಿ. ವಲಾ ಗದ್ಧೆ ಮಾಡ್ಕಳ್ಳಿ, ಸತ್ಯ, ನ್ಯಾಯ, ದರಮ, ಅಇಂಸೆ ಅಮ್ತ ಉಚ್ಚರಂಗೆ ಬಡಬಡಿಸ ಬ್ಯಾಡಿ. ಆ ಗಾಂದಿ ಮಆತ್ಮ ಅಂಗೆ ಏಳಿ ಏಳೀ ಗುಂಡು ತಿಂದು ಗೊಟಕ್ ಅಂದ. ಇಲ್ಲಿ ಹೆಲ್ಲಾರೂ ಕಳ್ಳರೆ. ನೀವೊಬ್ರೆ ಸಂಪನ್ನ ರಾದರೆ ಯಾರು ಕೇಳ್ತವರೆ? ನೀವು ಪೆನ್ಸ್ಯನ್ ಆದಮೇಲೆ ಹ್ಯಾರು ಕೊಡ್ತವರೆ ದುಡ್ಡು? ಬರೋ ೧೫೦ ರೂ. ಪೆನ್ಸ್ಸನ್‌ನಲ್ಲಿ ಬದುಕೋ ಕಾಯ್ತದಾ?

ಸತೀಶ : ಅದಕ್ಕೆ ಏನು ಮಾಡಬೇಕು?

ನಂಜಣ್ಣ : (ಖುಷಿಯಿಂದ) ಓ .... ಅಂಗಾ. ನಾ ಏಳಿಕೊಡ್ತೀನಿ ದುಡ್ಡು ಮಾಡೊ ಪಿಲ್ಯಾನು. ನೀವು ಊಂ ಅಂದ್ರೆ ಸಾಕು.... ನಿಮಗೆ ಲಕ್ಷಾ ದೀಸ ಮಾಡಿ ಕೈ ಬುಡ್ತೀತಿ. (ನಕುಲನಿಗೆ) ಹಲ್ವೇನಯ್ಯ?

ನಕುಲ : ಹೌದು ಸ್ವಾಮಿ.

ನಂಜಣ್ಣ : ನನ್ನ ತಾವ ಅತ್ತು-ಅದಿನ್ಯೈದು ಲಕ್ಸದ ಕಂಟರ್ರ್ಯಾಕ್ಟು ಐತೆ. ಈಗ ಮತ್ತೆ ಅಳೀವರ್ಸ ಕಟ್ಟಿದ ಪೂಲಿನ ಹೊಂದೂವರೆ ಖೋಟಿ ರೂಪಾಯಿ ಬರೋದೈತೆ. ನೀವು ಈ ಅಳೀ ಪೂಲು ಪಾಸು ಮಾಡಿಬುಟ್ರೆ.... ವಸ ಕಂಟರಾಕ್ಟು ಕೊಟ್ಬುಬುಟ್ರೆ ಸಾಕೇ ಸಾಕು. ನಿಮಗೆ ಹೆಲ್ಲಾ ನಾ ಮಾಡಿಸಿ ಕೊಡ್ತೀನಿ (ನಕುಲನಿಗೆ) ಹಲ್ವೇನಯ್ಯ?

ನಕುಲ : ಹೌದು ಸ್ವಾಮಿ.

ನಂಜಣ್ಣ : ನೋಟಿನ ಒಂದೊಂದೇ ಕಟ್ಟು ತಿಪಾಯಿ ಮೇಲೆ ಎಸೆಯುತ್ತ) ತಗಳ್ಳಿ.... ಒಂದು.... ಎಳ್ಡು.... ಮೂರು.... ನಾಕು.... ಐದು....ಈಗ ಹೈವತ್ತು ಸಾವಿರ ಐತೆ ಕ್ಯಾಶ್ (cash)

Sri Vidyabharathi Book Centre, Sringeri

CC-O. In Public Domain. Digitized by eGangotri

ಸತೀಶ : (ಗಾಬರಿಯಾಗಿ) ಇದೆಲ್ಲ ಏನು ?

ನಂಜಣ್ಣ : ಅಂಗೇ ಮಡಕ್ಕೊಳ್ಳಿ. ಹಿದೇನು ಮಹಾ.... ಮತ್ತೆ ಕೊಡಾಣಾ.... ನೀವು ನಾ ಯೋಳಿದಂಗೆ ಕೇಳಿದ್ರೆ ಸಾಕು....ಹೊಂದೇ ವರಸದಲ್ಲಿ ನಿಮಗೆ ಲಕ್ಸಾಪತಿ ಮಾಡ್ತೀನಿ. ನಮ್ಮ ಹಳಿಯಂಗೆ ಏಳಿ ನಿಮಗೆ ಪರಮೋಸನ್ನ ಮಾಡ್ಸಿ ಕೊಡಾಣಾ (ನಕುಲನಿಗೆ) ಹಲ್ವೇನಯ್ಯ ?

ಸತೀಶ : ನಾನು ದುಡ್ಡು ತಗೊಳ್ಳೊ ಸಮಾಚಾರ ಯಾರಿಗಾದ್ರೂ ಗೊತ್ತಾದ್ರೆ ?

ನಂಜಣ್ಣ : (ದೊಡ್ಡಕೆ ನಕ್ಕು) ಅಂಗೆ ಹಂಜಿದರೆ ಆಯ್ತದಾ....ಎದೆ ಬೇಕು.... ಹ್ಯಾರಯ್ಯ ತಿನ್ನಾಕಿಲ್ಲ ಈ ಪರಪಂಚದಾಗೆ. ಹೆಲ್ರೂ ಎಳ್ಡೂ ಕೈಯಿಂದ ತಿನ್ನುತವರೆ. ನಾವು ಹೊಂದು ಕೈಯಿಂದ ತಿನ್ನಾಣಾ ಬುಡಿ. ನೀವು ಯೆದರಬೇಡಿ. ಒಂದೆಳ್ಡು ದಫಾ ಒಸಬರಿಗೆ ಅಂಗೇ ಆಯ್ತದೆ. ಈ ನಂಜಣ್ಣನ ಮೂಗಿನಾಗೆ ಉಸಿರು ಇರೋತಂಕಾ ನೀವು ಎದರಬೇಡಿ. ನಾ (ಎದೆತಟ್ಟಿ) ನೋಡ್ಕೊಂತಿನ್ವಿ ಹೇನಾದ್ರೂ....

ಸತೀಶ : ಇದೆಲ್ಲ ನನಗೆ ಅಭ್ಯಾಸವಿಲ್ಲ.

ನಂಜಣ್ಣ : ಅಬ್ಯಾಸ ಮಾಡ್ಕೊಳ್ಳಿ.... ಹದ್ಕೇನಂತೆ. ಘುಡ್ಡು ಮಾಡೋದು ಖೆಟ್ಟ ಅಬ್ಯಾಸ ಅಲ್ಲ. ನಿಮಗೆ ಈ ಹೈವತ್ತು ಸಾವಿರ ದುಡಿಯೋಕೆ ಎಷ್ಟು ವರ್ಸ ಬೇಕು ಯೇಳಿ. ಈ ಜನ್ಮದಾಗೆ ಆಗಾಕಿಲ್ಲ. ಪರತಿ ತಿಂಗಳಲ್ಲಿ ಆತ್ತುಆನ್ನೆಲ್ಡು ಸಾವಿರ ಬಂದ್ರೇನು ನಿಮಗೆ ಲುಕ್ಸಾನಾ ? ಬಂದದ್ದು ಹ್ಯಾರಿಗೂ ಏಳಬೇಡಿ, ಅಂಗೆ ಮಡಗಿಕೊಳ್ಳಿ. ಕೊಟ್ಟದ್ದು ಬ್ಯಾಡಾ ಅನ್ನಬಾರದು (ನಕುಲನಿಗೆ) ಹಲ್ವೇನಯ್ಯ ?

ನಕುಲ : ಹೌದು ಸ್ವಾಮೀ.

ಸತೀಶ : (ಏನೋ ಯೋಚಿಸಿ, ಹಣದ ಕಂತೆಗಳನ್ನು ಕೈಗೆತ್ತಿಕೊಂಡು ನೋಡುತ್ತ) ನೀವು ಹೇಳೋದೂ ನಿಜವೆ ! ಆಮೇಲೆ ಯಾರು ಕೊಡ್ತಾರೆ ? ಬಂದಾಗ ಬಿಡಬಾರದು. ಆದರೆ ನಂಜಣ್ಣನವರೇ, ಈ ವಿಷಯ ಯಾರಿಗೂ ಹೇಳಬಾರದು. ನನಗೆ ನಿಮಗೆ ಇಬ್ಬರಿಗೇ ಗೊತ್ತಿರಬೇಕು.

Sri Vidyabharathi Book Centre, Sringeri

CC-O. In Public Domain. Digitized by eGangotri

ಶೀಲಾ : (ಹೊರಗೆ ಬಂದು ನಿಂತು ಅವಳ ಮುಖದಲ್ಲಿ ಒಂದು ಬಗೆಯ ಗಂಭೀರತೆ.)

ನಂಜಣ್ಣ : (ಮೆಲ್ಲನೆ) ಅಂಗೆಲ್ಲ ಈ ನಂಜಣ್ಣ ನಂಬಿದೋರಿಗೆ ಮೋಸಾ ಮಾಡಾಕಿಲ್ಲ. ಬೇಕಾರೆ ಅನುಮಪ್ಪನ ಆಣೆ ಮಾಡಿ ಏಳ್ತಿವ್ನಿ .... ಈ ವಿಸ್ಯಾ ಹ್ಯಾರಿಗೂ ಏಳಾಕಿಲ್ಲ.

ಶೀಲಾ : ನಿಮ್ಮ ನಿಮ್ಮ ವ್ಯವಹಾರದಲ್ಲಿ ಆ ಪಾಪ ಹನುಮಪ್ಪನಿಗೇಕೆ ಸಾಕ್ಷಿ ಇಡ್ತೀರಿ ಈ ಹಣ ನಮಗೆ ಬೇಡ. ಲಂಚ ಕೊಡೋ ಜನ ಪುಕ್ಕಟೆ ಯಾರು ಕೊಡೋದಿಲ್ಲ. ಐವತ್ತು ಸಾವಿರ ಕೊಟ್ಟು ಐವತ್ತು ಲಕ್ಷದ ಕೆಲಸ ಮಾಡಿಸಿಕೊಳ್ತೀರಿ. ಕಲ್ಲು, ಜಲ್ಲಿ, ಸಿಮೆಂಟು ಖೋತಾ ಮಾಡಿ ಇಂದು ಕಟ್ಟಿದ ಕಟ್ಟಡ ಒಂದೇ ವರ್ಷದಲ್ಲಿ ಕುಸಿದು ಬೀಳುತ್ತದೆ. ಸರಕಾರಕ್ಕೆ ನಷ್ಟ ಮಾಡಿ ನಾವು ಶ್ರೀಮಂತರಾಗಬೇಕಿಲ್ಲ. ನೀವೂ ನ್ಯಾಯವಾಗಿ ಕೆಲಸ ಮಾಡಿ, ನಾವೂ ನ್ಯಾಯವಾಗಿ ಕೆಲಸಮಾಡೋಣ. ಆಗ ಈ ದೇಶ ಸ್ವರ್ಗ ಮಾಡಬಹುದು.

ನಂಜಣ್ಣ : ಹಿದೆಲ್ಲ ಪರಯ್ಮರಿ ಪುಸ್ತಕದ ಮಾತುಗಳು. ಕಂಪನಿ ನಾಟಕದವರು ಹಾಡೋ ಮಾತು ನೀವೂ ಹಾಡಬೇಡಿ. ಹಿಂಥಾ ಉಪದೇಸದಿಂದ ಹೊಟ್ಟೆ ತುಂಬಾಕಿಲ್ಲ. ನಿಮಗೆ ಖಾಯಿಲೆ ಕಸಾಲಿ ಹಾದ್ರೆ ಯ್ಯಾರು ದುಡ್ಡು ಕೊಡತವ್ರೆ ? ನಿಮ್ಮ ಮಕ್ಕಳಿಗೆ ಎಜ್ಯುಕೇಸನ್‌ಗೆ ಯಾರು ದುಡ್ಡು ಕೊಡತವ್ರೆ ? ಪೆನ್ಸನ್ ಹಾದಮೇಲೆ ೧೫೦ ರೂಪಾಯ್ನಲ್ಲಿ ಬದುಕೋಕಾಯ್ತದಾ ? ಏನಮ್ಮರಿ.... ಬುದ್ಧಿಯಿಲ್ಲದೋರಂಗೆ ಮಾತಾಡಬ್ಯಾಡಿ (ನಕುಲನಿಗೆ) ಹಲ್ವೇನಯ್ಯ ?

ನಕುಲ : ಹೌದು ಸ್ವಾಮೀ.

ಶೀಲಾ : ನಿಮ್ಮಂತಹ ಸ್ವಾರ್ಥಿಗಳು ದೇಶದ ದುಡ್ಡು ದುಂದು ಮಾಡಿ ಸರಕಾರದ ಬೊಕ್ಕಸಕ್ಕಂಟಿದ ಹೆಗ್ಗಣದಂತೆ ಬೆಳೆದಿದ್ದೀರಿ. ಸರಕಾರದ ವಿಕಾಸಯೋಜನೆಗಳೆಲ್ಲ ಬಕಾಸುರನ ಹೊಟ್ಟೆ ಸೇರಿ ನಾಲ್ಕು ಪಂಚವಾರ್ಷಿಕ ಯೋಜನೆಗಳಾದರೂ ನಾವಿನ್ನೂ 'ಹೇಗಿದ್ದಿ ಮಗಳೆ ?' ಅಂದರೆ 'ಹಾಗೇ ಇದ್ದೀನಿ' ಅನ್ನೋ ಹಾಗೆ ಆಗಿದೆ. ಆ ಲಂಚ ನಿರ್ಮೂಲನ ಆಗಲೇಬೇಕು. ಅಲ್ಲಿಯವರೆಗೆ ಈ ದೇಶದ ಏಳಿಗೆಯಾಗದು.

Sri Vidyabharathi Book Centre, Sringeri

CC-O. In Public Domain. Digitized by eGangotri

ನಂಜಣ್ಣ : ಛೀಃ ಅಂಗೆಲ್ಲ ಖೆಟ್ಟ ಮಾತಾಡಬ್ಯಾಡಿ. 'ಲಂಚ ನಿರ್ಮೂಲನ ಹಾಗ್ಲೇಬೇಕು' ಹಂತ ಮಂತ್ರಿಗಳಂಗೆ ಬಾಸಣ ಮಾಡಬ್ಯಾಡಿ. ಬೀದಿಲಿ ಇಂಗೆ ಬಾಸಣ ಜಡಿದ್ರೆ ಛಪ್ಪಾಳೆ ಬೀಳ್ತವೆ. ಆಡಿದಂಗ ಮಾಡಿದ್ರೆ ಗಡಿಗೆ ಅಟ್ಟಕ್ಕೇರತ್ತೆ ಅಂಬೂ ಗ್ಯಾನಬೇಕು. 'ಡು ಹಾರ ಡೈ' (Do or Die) ಅವ್ತು ಟಿಪ್ಪೂ ಶುಲ್ತಾನ ಏಳವ್ನೆ. ಹ್ಯಾಕೆ.... ದುಡ್ಡು ಮಾಡು, ಆಗಾಕಿಲ್ಲ.... ಬದುಕಬ್ಯಾಡಾ ಸಾಯಿ ಅವ್ತು (ನಕುಲನಿಗೆ) ಹಳ್ಳೇನಯ್ಯ ?

ನಕುಲ : ಹೌದು ಸ್ವಾಮೀ.

ಶೀಲಾ : ಲಂಚ ಕೊಡುವವನು ಯಾವಾಗಲೂ ನಿನ್ನ ಮನೆ ಉದ್ಧಾರವಾಗಲಿ ಅಂತ ಕೊಡೋಲ್ಲ. ಅದು ಪಾಪದ ಹಣ. ಅದು ಕೊಟ್ಟವನಿಗಿಂತ ತಗೊಂಡವನಿಗೇ ಕಾಡೋದು ಹೆಚ್ಚು.

ನಂಜಣ್ಣ : ನೀವು ಮುಂದಿನ ಇಲೆಕ್ಷನ್‌ಗೆ ನಿಂತ್ಕಳ್ಳಿ.... ಹಲ್ರೀ ನೀವೇನು ಈ ದೇಸ ಉದ್ಧಾರ ಮಾಡೋ ಕಂಟರಟು ತಗಂಢೀರಾ ? ಹದು ಉದ್ಧಾರವಾಗಲಿ ಬಿಡಲಿ ನಿಮಗೇನು ?

ಶೀಲಾ : ಹೀಗೇ.... ಪ್ರತಿಯೊಬ್ಬರೂ ಹೀಗೆ ತಿಳ್ಕೊಂಡು ಈ ದೇಶದ ಸ್ಥಿತಿ ಇಲ್ಲಿಗೆ ಬಂದಿರುವುದು. ನಾವೆಲ್ಲರೂ ಪ್ರಾಮಾಣಿಕರಾಗಿ ದುಡಿದರೆ ದೇಶದ ಆರ್ಥಿಕ, ನೈತಿಕ, ಸಾಮಾಜಿಕ ಸ್ಥಿತಿ ಇಷ್ಟೊಂದು ಹದಗೆಡುತ್ತಿರಲಿಲ್ಲ.

ನಂಜಣ್ಣ : ಹದನ್ನು ರಿಫೇರಿ ಮಾಡೋಕ್ಕೆ ನಿಮ್ಮಿಂದ ಆಗಾಕಿಲ್ಲ. ಹಿ(ಇ)ಂಜನ್ನೇ ಕೆಟ್ಟ್ಬಿ ಓಗ್ಬೈತೆ.

ಶೀಲಾ : ಈ ಇಂಜಿನ್ನು ಕೆಡಿಸಿದವರು ಯಾರು ?

ಸತ್ಯ : (ಒಳಗೆ ಬರುತ್ತ) ನಾನಲ್ರೀ ಮತ್ತ....ಯಾವ ಇಂಜೀನ್ನ ಕೆಟ್ಟೈತಿರಿ ?

ನಕುಲ : ನಿನಗ್ಯಾಕೆ ಬೇಕು ?

ಸತ್ಯ : ನಾ ಕೇಳಿದ್ರೆ ನಿಮಗ್ಯಾಕ ಬಂತು ಸಿಟ್ಟು.... ಯಾಕ ನಿಮ್ಮದ ಇಂಜೀನ್ನ ಕೆಟ್ಟೈತೇನರಿ?

ಶೀಲಾ : (ಸತ್ಯಪ್ಪನಿಗೆ) ಆ ಸಾಮಾನು ಒಳಕ್ಕಿಟ್ಟು ಬಾ.... ಹೋಗು (ಸತ್ಯ ಹೋಗುವ .

Sri Vidyabharathi Book Centre, Sringeri

CC-O. In Public Domain. Digitized by eGangotri

ನಂಜಣ್ಣ : (ಸತೀಶನಿಗೆ) ಈ ಯೆಂಗಸರ ಮಾತು ಕೇಳ್ಕಂಡು ಆಳಾಗಬೇಡಿ ಸಾಯೇಬರೇ. ಪರಪಂಚ ಹಿವರು ಏಳೋ ಅಂಗಿಲ್ಲ.

ಶೀಲಾ : ಮತ್ತೆ ಅದು ನೀವು ಹೇಳೋ ಹಂಗೂ ಇಲ್ಲ.... ದಯಮಾಡಿ ಈ ರೂಪಾಯಿ ಆಸೆ ತೋರಿಸಿ ನಮ್ಮ ಮನೆಯವರಿಗೆ ಅಡ್ಡದಾರಿಗಿಳಿಸಬೇಡಿ.

ಸತೀಶ : (ಶೀಲಾಳಿಗೆ) Just wait and think over the matter.

ಶೀಲಾ : ನಾನು ಸಾರಾಸಾರ ವಿಚಾರ ಮಾಡಿಯೇ ಈ ಮಾತು ಆಡ್ತಾ ಇದ್ದೀನಿ. ನೀವು ಕೊಂಚ ವಿಚಾರ ಮಾಡಿ.... ಮುಂದಾಗುವ ಪರಿಣಾಮವನ್ನು.

ನಂಜಣ್ಣ : ಈ ಅಣಾ ಬ್ಯಾಡಾಂದ್ರೂ ಪರಿಣಾಮ ಆಗಾಕಿಲ್ಲ ಅನ್ತ ಮಾಡಿರಾ ?

(ಸತೀಶ ಎದ್ದು ಶತಪಥ ಹಾಕಲಾರಂಭಿಸುತ್ತಾನೆ)

ಶೀಲಾ : ಏನಾದ್ರೂ ಸರಿ.... ನಾವು ಎದುರಿಸ್ತೀವಿ.

ನಂಜಣ್ಣ : ಅಂಗೆ ಏಳಿ ಏಳೀ ಅರಿಸ್‌ಚಂದ್ರ ಮಸಾನ್‌ದಲ್ಲಿ ಯೆಣಾ ಕಾಯೋಕ್ಕೆ ಓದಾ.

ಶೀಲಾ : ಆದರೂ ಪ್ರಪಂಚದ ಇತಿಹಾಸದಲ್ಲಿ ಅಮರನಾದ.

ನಂಜಣ್ಣ : ಅಂಗೆ ನೀವೂನೂ ಹಮರತ್ವಕ್ಕೆ ಹರ್ಜಿ ಆಕ್ತೀರಾ ?

ಶೀಲಾ : ಅದೆಲ್ಲಾ ನಿಮಗೇಕೆ ? ನಮಗೆ ಈ ಹಣ ಬೇಡವೆಂದರೂ ಒತ್ತಾಯ ಏಕೆ ?

(ಶತಪತ ಹಾಕುತ್ತಿದ್ದ ಸತೀಶ ಒಮ್ಮೆಲೇ ನಿಂತು, ನಂಜಣ್ಣನತ್ತ ತಿರುಗಿ)

ಸತೀಶ : ನಾನು ನಿರ್ಧಾರ ಮಾಡಿದ್ದೇನೆ.

ಶೀಲಾ–ನಂಜಣ್ಣ–ನಕುಲ : (ಕುತೂಹಲದಿಂದ) ಏನೂಂತ ?

(ಒಂದು ಕ್ಷಣ ಮೌನ. ಎಲ್ಲರೂ ಅವನನ್ನೇ ನೋಡುತ್ತಿದ್ದಾರೆ.)

ಸತೀಶ : ಇದೇ ಬಡತನ ನನಗಿರಲಿ .... ನನಗೆ ಈ ಪಾಪದ ಹಣ, ದೇಶಕ್ಕೆ ಮಾಡಿದ ಮೋಸದ ಹಣ ಬೇಕಿಲ್ಲ. ಲಂಚ ಮುಟ್ಟೋಲ್ಲ.

ನಂಜಣ್ಣ : ಕೊಂಚ ಹ್ಯೋಚಿಸಿ ಯೇಳಿ. ಹಾಡಿದಂತೆ ಮಾಡುವುದು ಕಷ್ಟ.

ಸತೀಶ : ಕಷ್ಟವಾಗಲಿ-ನಷ್ಟವಾಗಲಿ ನನಗೆ ಈ ಹಣ ಬೇಕಿಲ್ಲ. ತೆಗೆದುಕೊಂಡು ನಡೆಯಿರಿ (ಎಂದು ಒಂದೊಂದೇ ಕಂತೆಯನ್ನೆತ್ತಿ ಬೀಸುವನು.)

(ಸತೀಶನ ಕೈ ಕಂಪಿಸುತ್ತಿರುವುದು.)

Sri Vidyabharathi Book Centre, Sringeri

CC-O. In Public Domain. Digitized by eGangotri

ನಂಜಣ್ಣ : ಪರ್‌ಶಿಜ್ಞೆ ಮಾಡುವುದು ಸುಲಭ ಇಂಜಿನೀಯರೇ. ಅದನ್ನು ನಿಬಾಯಿಸೋದು ಕಸ್ಟ. ಸಲ್ಪ ಇಂದೆ-ಮುಂದಿನ ಹಾಲೋಚನೆ ಮಾಡಿ ಹಾಮೇಲೆ ಯೇಳಿ.

ಸತೀಶ : ನಾನೆಲ್ಲ ಸರಿಯಾಗಿಯೆ ಆಲೋಚನೆ ಮಾಡಿದ್ದೇನೆ ನಂಜಣ್ಣನವರೇ. ಪ್ರತಿಯೊಬ್ಬರು ಈ ಭ್ರಷ್ಟಾಚಾರದ ರಾಕ್ಷಸನ ವಿರುದ್ಧ ನಿಂತು ಹೋರಾಡಬೇಕು. ಇಲ್ಲದಿದ್ದರೆ ಇದು ಜಗತ್ತನ್ನೇ ನುಂಗಿ ನೀರುಕುಡಿಯುತ್ತದೆ.

ನಂಜಣ್ಣ : ಬರಸ್ಟಾಚಾರ ನಿಮ್ರೂಲನ ಹಾಗಬೇಕು ಅನ್ತ ಹೆಲ್ರೂ ಏಳ್ತವರೇ ಬಾಯಿಂದ. ಅಂಗೇ ಏಳ್ತಾ ಹಿದ್ದರೆ ಚಂದ.... ಅಂಗೆ ಮಾಡಾಕೆ ಓಗ್ತಾರದು.... ಹುಚ್ಚ ಅನ್ತವರೇ.

ಸತೀಶ : ಅನ್ನಲಿ.... ಏನಂದರೂ ಸರಿಯೇ, ಜನರ ಬಾಯಿ ಮುಚ್ಚಿಸಲು ನಾವು ಯಾರು? ನಾನು ನನ್ನ ನಿರ್ಧಾರ ಬದಲಿಸಲಾರೆ.

ನಂಜಣ್ಣ : (ಎದ್ದು ನಿಂತು) ಅಂಗಾರೆ ಹಿದು ಕಡೇ ಮಾತೋ.

ಸತೀಶ-ಶೀಲಾ : ಹೌದು.... ಹೌದು.... ಹೌದು !

ನಂಜಣ್ಣ : (ನಕುಲನಿಗೆ) ಅಂಗಾರೆ ಹೇಳಯ್ಯ, ಗಂಟು-ಮೂಟೆ ಕಟ್ಕೋ ಓಗಾಣಾ.

ಸತೀಶ : ಈ ಹಣಾ ತಗೊಂಡು ಹೊರಡಿ.

ನಂಜಣ್ಣ : ಹದು ಅಲ್ಲೇ ಮಡಗಿರು....ನಮ್ಮ ಸಿಸ್ಯರು ಬತ್ತವರೇ ತಗೊಂಡು ಓಯ್ತವರೆ.... (ನಕುಲನಿಗೆ) ಹಲ್ಪೇನಯ್ಯ (ಎಂದು ಸರಸರನೇ ಹೋಗುವನು. ಅವನ ಹಿಂದೆ ನಕುಲ ' ಹೌದು ಸ್ವಾಮೀ ' ಎನ್ನುತ್ತ ಹಿಂದೆ ನೋಡಿ-ನೋಡಿ ಕಾಲು ಕೀಳುವನು.)

ಸತೀಶ : (ಆ ನೋಟಿನ ಕಂತೆಗಳನ್ನು ಒಟ್ಟುಗೂಡಿಸಿ-ನಂಜಣ್ಣ ಹೋದತ್ತ ಮುಖಮಾಡಿ) ನಂಜಣ್ಣನವರೇ....ನಂಜಣ್ಣನವರೇ (ಅಷ್ಟರಲ್ಲಿ Car Start ಆದ ಶಬ್ದ ಕೇಳಿಬರುವುದು. ಕಾರ್ ಹೊರಟ ಶಬ್ದ....)

ಶೀಲಾ : Police Station ಗೆ Phone ಮಾಡಿ ಹೇಳಿಬಿಡಿ. ಅವರು ಬಂದು ಹಣ ಒಯ್ಯಲಿ.... ಈ ಪೋಲಿಗಳ ಸಹವಾಸವೇ ಸಾಕು.

ಸತೀಶ : (ನೋಟಿನ ಕಂತೆಗಳನ್ನು ನೋಡುತ್ತ) ಇದೊಳ್ಳೆ ಸಂಕಟವಾಯ್ತಲ್ಲ (ಎಂದು ನೋಟಿನ ಕಂತೆ ಟಿಪಾಯ್ ಮೇಲೆ ಇಟ್ಟು Phone Receiver ಎತ್ತಿ ನಂಬರ್ ತಿರುಗಿಸುತ್ತ) Hullow Police Station ? ..... What (ಸಿಡುಕಿನಿಂದ) Wrong Number ?

Sri Vidyabharathi Book Centre, Sringeri

CC-O. In Public Domain. Digitized by eGangotri

(ಮತ್ತೆ ಡಾಯಲ್ ಮಾಡುತ್ತ) Hullow ..... Police Station ...
ಆಂ?....ಏನು, Poultry Form..... Sorry..... Wrong Number
(ಮತ್ತೆ ಡಾಯಲ್ ಮಾಡುತ್ತಿರುವಾಗ ಒಬ್ಬ ಪೋಲೀಸ ಸಬ್ ಇನ್ಸ್ಪೆಕ್ಟರ್ ಇಬ್ಬರು ಕಾನಸ್ಟೇಬಲ್ ಬರುತ್ತಾರೆ) Hullow Police Station.

P. S. I : ಯಾಕೆ ಸುಮ್ನೆ Phone ಮಾಡ್ತೀರಾ ? ನಾವೇ ಬಂದಿದ್ದೀವಿ.

ಸತೀಶ : (ಮುಖದಲ್ಲಿ ಗಾಬರಿ) ಬ....ಬ....ಬನ್ನಿ ಸಾರ್.... (ಎರಡು ಕಾನ್ಸ್ಟೇಬಲ್ ಒಂದು ಗ್ಲಾಸಿನಲ್ಲಿ ನೀರು ಇಡುವರು).

P. S. I. : ಅದೆಲ್ಲ ಇರಲಿ ... ನಿಮ್ಮ ಕೈ ಈ ನೀರಿನಲ್ಲಿ ಅದ್ದಿರಿ.

ಸತೀಶ : (Shock ಆದವನಂತೆ) ನಾನು.... ನಾನು.... ಇಲ್ಲ ಸಾರ್... ಲಂಚ ತಗೊಳ್ಳಿಲ್ಲ. ನಾನು ನಿರಪರಾಧಿ.... ನಿರಪರಾಧಿ.

P. S. I. : ನೀವು ಲಂಚ ತಗೊಂಡಿದ್ದ ಬಗ್ಗೆ ನನ್ನ ಹತ್ರ ಪುರಾವೆ ಇದೆ (ಒಬ್ಬ Photographer) ಟಿಪಾಯಿಯಲ್ಲಿಟ್ಟ ನೋಟಿನ ಕಂತೆಯ ಚಿತ್ರ ತೆಗೆಯುವನು; ಉಳಿದ ಅನೇಕ ಚಿತ್ರತೆಗೆಯುವರು. ಸತೀಶ ನೀರಿನಲ್ಲಿ ಕೈ ಅದ್ದಿದಾಗ ನೀರು ಕೆಂಪಗಾಗುವುದು. P. S. I. ನೋಟಿನ ಕಂತೆ ಕೈಯಿಂದ ಮುಟ್ಟದೆ ಬೇರೊಂದು ಕಾಗದದಿಂದ ತೆಗೆದು ತನ್ನ ಬ್ರಿಫ್‌ಕೇಸಿನಲ್ಲಿಡುವನು.

ಸತೀಶ : ಇಲ್ಲ ಸಾರ್.... ಖಂಡಿತವಾಗಿಯೂ.... ನಾನು ಬೇಡಾಂದೆ.... ಆದರೂ....

P. S. I. : Mr. Satish ನಿಮಗೆ under corruption act ಅರೆಸ್ಟ್ ಮಾಡಿದೆ.

ಶೀಲಾ – ಸತ್ಯಪ್ಪ : (ಗಾಬರಿ–ಕಣ್ಣೀರು) ಅನ್ಯಾಯ.... ಅನ್ಯಾಯ.
(ಸತೀಶನ ಕೈಯಲ್ಲಿ ಕೊಳ ತೊಡಿಸುವರು.) (ಸತೀಶ ಅಳುತ್ತಿದ್ದಾನೆ)

ಸತೀಶ : ನಾನಲ್ಲ.... ನಾನಲ್ಲ....

P. S. I. : ಹೇಳೋದೆಲ್ಲ ಕೋರ್ಟಿನಲ್ಲಿ ಹೇಳಿ.... ಹೋಗಿ (ಎಂದು ಕರೆದೊಯ್ಯುವರು.)

ಶೀಲಾ – ಸತ್ಯ : (ಹಣೆ ಹಣೆ ಬಡಿದುಕೊಂಡು ಚೀರುವರು)

Sri Vidyabharathi Book Centre, Sringeri

CC-O. In Public Domain. Digitized by eGangotri

ತೃತೀಯ ಅಂಕ

(ಒಂದು ವರ್ಷದ ನಂತರ)

[ಕಿಟಕಿಯಿಂದ ಕಾಣುವ ಆ ಗಿಡ ಒಣಗಿ ನಿಂತಿದೆ. ಅದರ ಒಂದು ಕೊಂಬೆ ಮುರಿದುಬಿದ್ದಿದೆ. ಮನೆಯಲ್ಲಿ ಎಲ್ಲ ವಸ್ತುಗಳೂ ಅಸ್ತವ್ಯಸ್ತ. ಸೋಫಾದ ಬದಲು ಹಳೆಯ ಮುರುಕು ಖುರ್ಚಿಗಳು. Phone ಇಲ್ಲ. ರೇಡಿಯೋ ಇಲ್ಲ. ಹೂದಾನಿಯ ಹೂವುಗಳು ಬಾಡಿ ಹೋಗಿವೆ. ಶಿಪಾಯಿ ಇಲ್ಲ. Fan ಇಲ್ಲ. ಸ್ಮಶಾನ ಕಳೆ ಮನೆಯಲ್ಲಿ.

ತೆರೆ ಸರಿದಾಗ ಎಲ್ಲೆಡೆಗೂ ಕತ್ತಲು. ಒಂದೆರಡು ನಿಮಿಷ ಆ ಗಿಡದ ಮೇಲೇ ಬೆಳಕು. ಕ್ರಮೇಣ ಅಲ್ಲಿಯ ಬೆಳಕು ಮುಂದವಾಗಿ ರಂಗದ ಮಧ್ಯೆ ನಿಂತ ಸತ್ಯಪ್ಪನ ಮೇಲೆ ಪ್ರಕಾಶ.... ಅಂಗಿಗೆ ತೇಪೆ. ಅರ್ಧ ಚೀಲಿಯ ಗಡ್ಡ. ತಲೆಗೆ ಸುತ್ತಿದ ಪೇಟ ಮಾಸಲು ಬಣ್ಣ.... ಕಣ್ಣು ಗುಳಿ ಬಿದ್ದಿವೆ.... ಕೈ ಜೋಡಿಸಿ ನಿಂತಿದ್ದಾನೆ.]

ಸತ್ಯ : ದೇವಾ, ನಿನ್ನ ಭಜನಿ ಮಾಡೂ ಮುಂದಿ ಎಷ್ಟು ಮೂರ್ಖರೋ ಮಾರಾಯಾ! ನಿನಗ ಕೈಮುಗಿಯೂ ಬದಲು ಅಗಸರ ಕತ್ತೀಗ ಕೈಮುಗಿದರ ಅದಾದರೂ 'ಬೇಕಾದ ವರವನ್ನ ಕೇಳು' ಅಂತ ಹೇಳುತ್ತಿತ್ತು. ನೀ ಪ್ರತ್ಯಕ್ಷ ಆಗೂದು ತಮಿಳು ಸಿನೇಮಾದಾಗs ಅಂತ ಕಾಣ್ತದ. ನಾ ನಿನಗ ಕೈಮುಗಿಯಾಕ ಹತ್ತಿ ಈ ಒಂದ ವರ್ಸಾತು, ಲಾಟರಿ ಟಿಕೇಟ್ನ್ಯಾಗ ಲಗಾಟಿ ಹೊಡಿದ್ನಿ. ಮಟಕಾ ನಂಬರದಾಗ ಸಾಫ್ ದಿವಾಳಿ ತೆಗೆದ್ನಿ.... ಹಂಗೂ ನಿನಗ ನಾ ಕ್ಷಮಾ ಮಾಡಿನಿ.... ಆದರ ನಮ್ಮ ಸಾಹೇಬರ....ಅಕಳಂಥಾ ಮನಷಾ ಲಂಚ ತಗೊಂಬೂದಿಲ್ಲನ್ನೂ ಹಠಕ್ಕ ಬಿದ್ದು ನೌಕರಿ ಕಳಕೊಂಡರು. ಆ ನಂಜಣ್ಣ ಮಾಡಿದ ಲಂಚದ ಉಪಕಾರಕ್ಕ ಕೋರ್ಟಿಗ ಓಡಾಡಾಕ ದುಡ್ಡೇನು ಥ್ವಾಡೇ ಬೇಕs? ಮನ್ಯಾಗಿದ್ದ ಸಾಮಾನು - ಸರಂಜಾಮು ಮಾರಿ ಅವನ ಹೆಣಕ ಹಾಕ್ಯಾರ.... ಹೈಕೋರ್ಟಿನಾಗೂ ಸಾಹೇಬರು ಲಂಚ

Sri Vidyabharathi Book Centre, Sringeri

CC-O. In Public Domain. Digitized by eGangotri

ತಗೊಂಡಿದ್ದು ಖರೇ ಅಂತ ಆತು. ಈಗ ಸುಪ್ರೀಂ ಕೋರ್ಟಿನಾಗ ನಡೆದೈತಿ, ಇನ್ನೊಂದೆಂಟು ದಿನಕ ನಿಕಾಲ ಐತಿ.... ಅದರಾಗೂ ಪಲ್ಟಿ ಹೊಡದ್ರ ಸಾಹೇಬರಿಗೆ ಜೈಲ ಆಗೇ ಆಗತೈತಿ. ನೀ ಫಕ್ತ ಸಿನೇಮಾದಾಗ ಪಾರ್ಟ ಮಾಡಾಕ ಹತ್ರ ಈ ಪರಪಂಚದ ಗತಿಯೇನೋ ಬಹದ್ದೂರಾ ? ನಿನಗ ಆಗದಿದ್ರ ಆ ಕೆಲಸ ನನಗರೂ ಕೊಡು.... ನಾ ಮಾಡ್ತೀನಿ ನೋಡು ಎಷ್ಟು ಝಕಾಸ ಕೆಲಸ.... ನಂಜಣ್ಣನಂಥ ಖದೀಮಗ ಬಾಯಾಗ ಶೆಗಣಿ ಹಾಕದಿದ್ರ ನನಗ ನಿನ್ನ ಜಗಾದಿಂದ ಡಿಸ್‌ಮಿಸ್ ಮಾಡು. ಸತ್ಯಹೇಳಿ, ನ್ಯಾಯದಿಂದ ಬದುಕುತ್ತೀನಿ ಅಂತ ಹೇಳಿ ನಂಜಣ್ಣನಂಥ ಛಿಕನಾಸಿಗೆ ಸವಾಲು ಹಾಕಿನಿಂತ ನಮ್ಮ ಸಾಹೇಬರನ್ನ ಈಗಾದ್ರೂ ಈ ಕಷ್ಟದಿಂದ ಪಾರುಮಾಡು.... ಆ ಮ್ಯಾಗ ನಾ ನಿನ್ನ ಹತ್ರ ಏನು ಕೇಳೂದೂ ಇಲ್ಲ. ನನಗ ನೀ ಏನ ಕೊಡಲೂ ಬ್ಯಾಡ. ಸಾಹೇಬರ ಬಿಡುಗಡೆ ಮಾಡಾಕ ನಿನಗ ಎಷ್ಟು ಲಂಚಾ ಬೇಕು ಹೇಳು ಕನಸಿನಾಗರ ಬಂದು, ಅಲ್ಲಿಂದಲ್ಲೇ ಚುಕ್ತಾ ಮಾಡೇ ಬಿಡ್ತೀನಿ. ಉದ್ರಿ ಹೇಳೂದಿಲ್ಲ ಬಿಡು.... (ಭಾವಾವೇಶ) ತಿಮ್ಮಪ್ಪ, ನಮ್ಮಪ್ಪ, ನಮ್ಮ ಅಪ್ಪನ ಅಪ್ಪ ಈಗಾರೂ ಕಣ್ಣು ಬಿಡು.

(ಅಷ್ಟರಲ್ಲಿ ಜಾನಿ ಎಲ್ಲ ಸಾಮಾನುಗಳೊಂದಿಗೆ ಹೊರಡುವ ಸಿದ್ಧತೆಯಲ್ಲಿ ಬರುತ್ತ)

ಜಾನಿ : ಭಕ್ತವತ್ಸಲಾ (ಆಶೀರ್ವದಿಸುವಂತೆ ನಿಂತು) ಕಣ್ಣು ಬಿಡು, ಬಾಯಿ ಬಿಡು ಮತ್ತು ಬೇಕಾದ ವರವನ್ನು ಕೇಳುವಂಥವನಾಗು.

ಸತ್ಯ : (ಕಣ್ಣು ಬಿಟ್ಟು) ಥೂ.... ನೀ ಎಲ್ಲಿ ಶಿವಪೂಜ್ಯಾಗ ಕರಡಿ ಬಿಟ್ಹಾಂಗ ಬಂದಿಯೋ ಮ್ಹಾರಾಯಾ.... ಇನ್ನೂ ಹೋಗಿಲ್ಲೇನ ?

ಜಾನಿ : ನಾನು ಹೋಗ್ತೀನಿ ನೋಡ್ತಾ ಇರು....

ಸತ್ಯ : ನೋಡೂದೇನು ಅದರಾಗ.... ಹೋಗೇ ಬಿಡ್ರಿ.... ಆದರ ಎಲ್ಲಿ ಹೋಗ್ತಿರಪಾ ?

ಜಾನಿ : (ಮೇಲೆ ಬೆರಳು ತೋರಿಸಿ) ಅಲ್ಲಿ....

ಸತ್ಯ : ಹೌಂದ? ಹಂಗs ಮಾಡ್ರಿ.... ನೀವು ಎಲ್ಲಿದ್ರೂ ಬಂದs.... ಅಲ್ಲಿ ಸ್ವಲ್ಪ ನೊಣ-ಗುಂಗಾಡ ಕಡಮಿ ಅವ ಅಂತ ಕೇಳೇನಿ.

Sri Vidyabharathi Book Centre, Sringeri

CC-O. In Public Domain. Digitized by eGangotri

ಜಾನಿ : ನೊಣ-ನುಸಿಗಳಿದ್ದರೆ ನಾನು ಅಂಜುತ್ತೇನೆಯೆ ? ಈ ಬಾಹುಗಳಿಂದ ಹೊಸಕಿ ಹಾಕಿ ಚಟ್ನಿ ಮಾಡುತ್ತೇನೆ.

ಸತ್ಯ : ಹಂಗs ಮಾಡ್ರಿ.... ಈ ಮಲೇರಿಯಾ ಮುಂದಿ ವರ್ಸಕ ಒಂದ ಸಾರಿ ಕಾಡಾಕ ಬರೂದರ ತಪ್ಪೀತು. ಮುಂದೇನು ಮಾಡ್ತೀರಪಾ ?

ಜಾನಿ : (Stylish ಆಗಿ) ಶಾಂತಿ ಹುಡುಕುತ್ತೀನಿ.

ಸತ್ಯ : ಯಾಕ ? ಅದನ್ನೂ ಚಟ್ನಿ ಮಾಡ್ತೀರೇನು ?

ಜಾನಿ : No..... No..... ನನಗೆ ಶಾಂತಿ ಬೇಕು.

ಸತ್ಯ : ಅದಕ್ಯಾಕ ಅಲ್ಲಿಗೆ ಹೋಗ್ತಿರಿ.... ಯಾವ್ದಾರ ಪ್ರೆಮರಿ ಸಾಲಿ ಹಾಜರಿ ಪಟ್ಯಾಗ ನೋಡಿದ್ರ ಸಿಗ್ತಾಳಲ್ಲರಿ ?

ಜಾನಿ : ಹಾಗಲ್ಲ ಭಕ್ತಾ.... ನಮ್ಮ ಸಮಾಧಿ ಸ್ಥಿತಿಗೆ ಶಾಂತಿ ಬೇಕು.

ಸತ್ಯ : ಹಂಗರ ಒಂದ ಧಂ ಗಾಂಜಾ ಸೇದರಿ. ಕೊಳ್ಳಾಗ ಒಂದ ಕಲ್ಲ ಕಟಗೊಂಡು ಭಾವ್ಯಾಗ ಜಿಗೀರಿ.

ಜಾನಿ : ಈ ಜಗತ್ತಿನಲ್ಲಿ ಸುಖ-ಶಾಂತಿ-ಸಮಾಧಾನವಿಲ್ಲ. ಈ ದೇಹ ನಶ್ವರ.

ಸತ್ಯ : ಅದು ಈಗ ಗೊತ್ತಾತೇನ್ರಿ ನಿಮಗ ?

ಜಾನಿ : ಬಹುದಿನಗಳ ಹಿಂದೆಯೆ ನಮ್ಮ ದಿವ್ಯದೃಷ್ಟಿಗಳಿಗೆ ಗೋಚರಿಸಿದೆ.

ಸತ್ಯ : ನಾಟಕ ಕಂಪನಿಯವರ್ಹಂಗ ಮಾತಾಡ್ತಿರಲ್ರಿ....ಕಂಪ್ನ್ಯಾಗಿದ್ರೇನ್ರಿ ?

ಜಾನಿ : ಈ ಜೀವನವೆಂಬುದೊಂದು ನಾಟಕ. ನಾವು ಪಾತ್ರಧಾರಿಗಳು. ಸೂತ್ರಧಾರ (ಮೇಲೆ ತೋರಿಸಿ) ಅಲ್ಲಿಹನು.... ಅವನು ಕುಣಿಸಿದಂತೆ ನಾವು ಕುಣಿಯಬೇಕು.

ಸತ್ಯ : (ಚಪ್ಪಾಳಿ ತಟ್ಟಿ) ಹೊನ್ಸ್ಸೋರ ! ನೀವು ಕನ್ನಡ ಸಿನೇಮಾದಾಗ ಪಾರ್ಟ ಮಾಡಾಕ ಲಾಯಖ್ ಅದೀರಿ !

ಜಾನಿ : ಹಾಗಾದ್ರೆ ಅಲ್ಲಿಗೇ ಬಿಜಯಂ ಗೈಯುತ್ತೇನೆ ? ಮದ್ರಾಸಿಗೆ ಹೋಗಲೊ ಮುಂಬಯಿಗೆ ಹೋಗಲೋ ?

ಸತ್ಯ : ಎಲ್ಲಿ ಸುಡುಗಾಡಕ್ಕಾರೂ ಹೋಗ್ರಿ.... ನನಗೇನು ಕೇಳ್ತೀರಿ ?

ಜಾನಿ : ಹಾಗಾದರೆ ಹೋಗೇ ಬಿಡ್ತೀನಿ.

ಸತ್ಯ : ಹೊಗೆ ?.... ಹೊಗೆ ಬಿಡಬ್ಯಾಡ್ರಿ.... ಒಳಗ ಸಾಹೇಬರು ಅದಾರ.

ಜಾನಿ : ನನಗೀಗ ಅರ್ಜಂಟ್ ಇದೆ.... (ಹೊರಡುವ ಠೀವಿ)

Sri Vidyabharathi Book Centre, Sringeri

CC-O. In Public Domain. Digitized by eGangotri

ಸತ್ಯ : ಅರ್ಜಂಟ ಆದರ ನಿಲ್ಲಬ್ಯಾಡ್ರಿ....
ಜಾನಿ : ಹಾಗಾದರೆ ಬರಲೆ ?
ಸತ್ಯ : ಮತ್ತ ಬರಬ್ಯಾಡ್ರಿ....
ಜಾನಿ : ಬೈ.... ಬೈ.... ಟಾ.... ಟಟಾ.... (ಎಂದು ಹೋಗುವನು.)
ಸತ್ಯ : ಒಂದು ಪೀಡಾ ಹೋತು. ಒಂದು ದಿನಾ ಲಂಗಾ ಹಾಕ್ತಾನ, ಒಂದು ದಿನಾ ಸೀರಿ ಉಡ್ತಾನ, ಒಂದು ದಿನ ತಲೀ ಬೋಳಿಸ್ಕೋತಾನ, ಒಂದು ದಿನಾ ಕರಡಿಹಾಂಗ ಕೂದಲ ಬಿಡ್ತಾನ, ಒಂದು ದಿನ ಕಾವಿ ಹಾಕ್ತಾನ, ಒಂದು ದಿನಾ ಟೊಪಗಿ ಹಾಕ್ತಾನ, ಒಂದು ದಿನ ಮೀಸಿ ಬಿಡ್ತಾನ,.... ಕಡೀಗ ಒಂದು ದಿನ ಜೀವಾ ಬಿಡ್ತಾನ ... (ಕೈ ಮುಗಿದು ಮೇಲೆ ನೋಡಿ) ಹೌಂದಪ ಎಂಥೆಂಥಾ ಮನಶ್ಯಾರಿಗ ಹುಟ್ಟಿ ಸಿದ್ದೀಯಪ್ಪ ? ಇದಕ್ಕ ನಿನಗ ಶಾಭಾಸ್ ಅನ್ನಬೇಕು. (ಅಷ್ಟರಲ್ಲಿ ಸತೀಶ ಹೊರಗೆ ಬರುತ್ತಾನೆ. ತುಂಬ ಕೃಶನಾಗಿದ್ದಾನೆ. ಪೈಜಾಮಾ-ಮೇಲೊಂದು ಉದ್ದ ತೋಳಿನ ಸಡಿಲು ಅಂಗಿ, ಗಡ್ಡ ಬೆಳೆದಿದೆ, ತಲೆ ಗೂದಲು ಕೆದರಿದೆ, ಮುಖ ನಿಸ್ತೇಜ.)
ಸತೀಶ : ಏನಾದ್ರೂ ಟಪಾಲು ಬಂತೆ ಸತ್ಯಪ್ಪ ?
ಸತ್ಯ : ಇಲ್ರೀ.... ನಾನೂ ಅದ ನೋಡ್ತಾ ಅದೀನಿ-
ಸತೀಶ : ಸ್ವಲ್ಪ ಪೇಟೆಗೆ ಹೋಗಿ ಸಾಮಾನು ತರಬೇಕಾಗಿತ್ತಲ್ಲ ?
ಸತ್ಯ : ಆ ಅಂಗಡೀಗ ಹೋಗಾಕ ಒಂದ ನಮೂನಿ ಆಗ್ತದರಿ.... ನಂಜಣ್ಣ ಅಂವಗೂ ಹೇಳ್ಯಾನ ಅಂತ ಕಾಣಸ್ತದ ಸಾಮಾನು ಕೊಡಬ್ಯಾಡಂತ. ಹಿಂದಿನ ಬಾಕಿ ತಗೊಂಡ್ಬಾ ಆಮ್ಯಾಗ ಸಾಮಾನು ಒಯ್ಯು ಅಂತಾನ್ರಿ.
ಸತೀಶ : ಮತ್ತೆಲ್ಲೂ ಸಿಗಲಿಕ್ಕಿಲ್ಲವೆ ?
ಸತ್ಯ : ಈ ಒಂದ ವರ್ಷದಾಗ ಇರೂ ಅಂಗ್ಡ್ಯಾಗೆಲ್ಲ ಉದ್ರಿ ಮಾಡಿ ಮುಗಿ ಸೇನ್ರಿ.... ಈಗ ಎಲ್ಲಿ ಹ್ವಾದರೂ ನಾಯಿ ಬಂದಾಂಗ ಮೈಮ್ಯಾಗ ಬರ್ತಾರ್ರಿ....
ಸತೀಶ : ಇನ್ನೊಂದೆಂಟು ದಿನ .... ಆ ಮೇಲೆ .... ಸುಪ್ರೀಂ ಕೋರ್ಟಿನಲ್ಲಿ ತೀರ್ಪು ಆಗುತ್ತೆ ... ಆ ವೇಳೆ ಈ ಕಷ್ಟ ಎಲ್ಲಾ ನಿವಾರಣೆ. ನನ್ನ ನೌಕರಿ ನನಗೆ ಸಿಕ್ಕೇ ಸಿಗುತ್ತೆ.... ಅವರ ಸಾಲಾನೆಲ್ಲ ಒಂದೇ ಗಂಟ್ನಲ್ಲಿ ತೀರಿಸಿಬಿಡ್ಲೋಣ.

Sri Vidyabharathi Book Centre, Sringeri

CC-O. In Public Domain. Digitized by eGangotri

ಸತ್ಯ : ನಾನೂ ಹಾಂಗs ಹೇಳಿದಿನ್ರಿ.... ನಿಕಾಲಿ ಆದವ್ಯಾಗ ಬಾ ಅಂತಾರ್ರಿ.... ಆ ನಂಜಣ್ಣನ ಬಾಲ 'ಹೌದು ಸ್ವಾಮೀ' ಊರಾಗ ಬೆದರಿಕಿ ಹಾಕ್ತಾ ತಿರಗತಾನ್ರಿ....

ಸತೀಶ : ಬಗ್ಗಿಸಿದ ನನ್ನ ತಲೆಯನ್ನು ಇದೇ ಊರ್‍ನಲ್ಲಿ ಒಂದು ದಿನ ಎತ್ತಿಕೊಂಡು ಓಡಾಡೋ ಕಾಲ ಬರುತ್ತೆ. (ಅಸ್ವರಲ್ಲಿ ಹೊರಗಡೆಯಿಂದ ಸೈಕಲ್ ಹಾರ್ನ ಬಾರಿಸಿದ ಶಬ್ದ) (ಸತ್ಯ ಬಾಗಿಲು ತೆಗೆಯುವ--ಹಾಲುಗಾರ ಒಳಗೆ ಬರುವ. ಅವನ ಕೈಯಲ್ಲಿ ಸೈಕಲ್ ಹಾರ್ನ ಇದೆ)

ಸಿದ್ದಪ್ಪ : ಈವತ್ತಾರು ಕೊಡ್ತೀರೇನ್ರೀ ?

ಸತ್ಯ : ಏನಪ್ಪಾ ಕೊಡೂದು ? ... ಥಪರಾಕೀನ ?

ಸಿದ್ದಪ್ಪ : ಮಾಡೂ ಸಾಲ ಮಾಡ್ತೀರಿ.... ಮತ್ತ ಹಿಂಗ ಮಾತಾಡ್ತೀರಲ್ರಿ ?

ಸತೀಶ : ಇನ್ನೊಂದೆಂಟು ದಿನ ನಿಲ್ಲಪ್ಪ. ಆಮೇಲೆ ಎಲ್ಲಾ ಕೊಟ್ಟು ಬಿಡ್ತೀನಿ.

ಸಿದ್ದಪ್ಪ : ಆವ್ಯಾಗೇನು ಕೊಡ್ತೀರಿ ಅಂತ ಈಗಲೇ ತಿಳಿದದ ಬಿಡ್ರಿ.

ಸತೀಶ : ಅಂದರೆ ?

ಸಿದ್ದಪ್ಪ : ಆವ್ಯಾಗ ನೀವು ಜೇಲಿಗೆ ಹೋಗ್ತೀರಿ. ನಾವ ಎಮ್ಮಿ ಹೊಡಕೊಂಡು ಅಡವಿಗೆ ಹೋಗಬೇಕಾಗತೈತಿ.

ಸತ್ಯ : (ಸಿಟ್ಟಿನಿಂದ) ಯಾಕಲೆ ಎಮ್ಮಿತಮ್ಮಣ್ಣ, ನಾಲಗಿ ಸಡಲಬಿಡಾಕ ಹತ್ತೀಯಲ್ಲ. ಯಾರ ಮುಂದ ಮಾತಾಡಾಕ ಹತ್ತೀ ಅಂತ ಖಬರರ ಐತ್ಯೋ ಇಲ್ಲೋ.

ಸಿದ್ದಪ್ಪ : ಖಬರ ನಿಮುಗ ಇರಾಕ ಬೇಕ್ರಿ. ಊರಾಗಿನ ಮಂದ್ಯೆಲ್ಲಾ ಏನ ಹೇಳ್ತೈದ ಕೇಳ ಹೋಗ್ರಿ.

ಸತ್ಯ : ಏನು ಹೇಳ್ತದ ?

ಸಿದ್ದಪ್ಪ : ನಾ ಹೇಳಿದ್ನಲ್ರಿ.... ಅದs.... ಜೇಲಿಗೆ....

ಸತ್ಯ : (ತಕ್ಷಣ) ಮುಚ್ಕೋಬಾಯಿ.

ಸತೀಶ : ಇರಲಿ ಬಿಡು ಸತ್ಯಪ್ಪ. ಅದರಲ್ಲಿ ಅವನದೇನು ತಪ್ಪು ? ಊರಲ್ಲಿ ಆಡಿದ್ದನ್ನು ಕೇಳಿ ಪಾಪ ವಸೂಲಿಗೆ ಬಂದಿದ್ದಾನೆ.

ಸತ್ಯ : ಹೇಳಾವರು ಹೇಳಿದ್ರೆ ಕೇಳಾವರ ತಲ್ಯಾಗ ಬಟಾಟೆ ತುಂಬ್ಯಾವೇನ್ರಿ ?

Sri Vidyabharathi Book Centre, Sringeri

CC-O. In Public Domain. Digitized by eGangotri

ಸತೀಶ : (ಸಿದ್ದಪ್ಪನಿಗೆ ಸಾಂತ್ವನ) ಕೋಪಿಸಬೇಡಪ್ಪ.... ಈ ಸತ್ಯಪ್ಪನಿಗೆ ವಯಸ್ಸೂ ಜಾಸ್ತಿ.... ಸಿಟ್ಟೂ ಜಾಸ್ತಿ.... ಮನಸ್ಸು ಮಾತ್ರ ಶುದ್ಧ.... ನಿನ್ನ ಹಣ ನಾನು ಕೊಡ್ತೀನಿ ಹೆದರಬೇಡ.

ಸಿದ್ದಪ್ಪ : ಹಿಂಗ ಹೇಳಾಕ ಹತ್ತಿ ಒಂದ ವರ್ಷ ಆಗಾಕ ಬಂತಲ್ರಿ ?

ಸತೀಶ : ನನ್ನ ಪ್ರಾರಬ್ಧಕ್ಕೆ ಯಾರು ಹೊಣೆ ಹೇಳು. ಹೈಕೋರ್ಟಿನಲ್ಲಿ ನ್ಯಾಯ ಸಿಗಬಹುದು ಅಂತ ಮಾಡಿದ್ದೆ. ದುಡ್ಡಿದ್ದವರು ನ್ಯಾಯ ದೇವತೆಯ ಕಣ್ಣು ಕಟ್ಟಿದರು.

ಸಿದ್ದಪ್ಪ : ಮತ್ತ ಈ ಕೋರ್ಟಿನಾಗಾದ್ರೂ ನಿಮಗs ನ್ಯಾಯ ಸಿಗತದಂತ ಹ್ಯಾಂಗ ಹೇಳ್ತೀರಿ ?

ಸತೀಶ : ಸುಪ್ರೀಂ ಕೋರ್ಟಿನಲ್ಲಿ ಅನ್ಯಾಯವಾಗುವುದಿಲ್ಲ ಅಂತ ನನಗೆ ನನ್ನ ಆತ್ಮಸಾಕ್ಷಿ ಹೇಳುತ್ತದೆ.

ಸಿದ್ದಪ್ಪ : ಹಂಗೇನ್ರಿ ? ಹಂಗಾರ ನಮಗ ಮರೀಬ್ಯಾಡ್ರಪ್ಪ.... ಒಂದs ಗಂಟ್ನಲ್ಲಿ ನೀವು ದುಡ್ಡು ಕೊಟ್ರ ಒಂದು ಎಮ್ಮೀನಾರೂ ತರ್ತೀನಿ.

ಸತೀಶ : ದೇವರು ನನಗೆ ಬಿಡುಗಡೆ ಮಾಡಲಿ. ನಿನ್ನಂಥವನಿಗೆ ಮೋಸ ಮಾಡೋಲ್ಲ ಹೋಗು. ಒಂದು ನೂರು ಜಾಸ್ತೀನೇ ಕೊಡ್ತೀನಿ ಹೋಗು.

ಸಿದ್ದಪ್ಪ : ಹಂಗs ಮಾಡ್ರಿ.... ಈಗ ಸ್ವಲ್ಪ ಕೆಲಸ ಅದ ನನಗ— ಬರ್ತೀನ್ರಿ. (ಎಂದು ಹೋಗುವನು.)

ಸತೀಶ : (ಸತ್ಯಪ್ಪನಿಗೆ) ಯಾರ ಮೇಲೂ ಸಿಟ್ಟು ಮಾಡಬಾರದು ಸತ್ಯಪ್ಪ.... ನಮ್ಮ ಈ ಸ್ಥಿತಿಗೆ ಯಾರು ಹೇಗೆ ಮಾತಾಡಿದ್ರೂ ಕೇಳಿಕೋಬೇಕು. ಕತ್ತಲೆ ಕಳೆದ ಬಳಿಕ ಬೆಳಕು ಬರಲೇಬೇಕು (ಸತ್ಯಪ್ಪ ಒಂದೆಡೆ ನಿಂತು ಕಣ್ಣೊರೆಸಿಕೊಳ್ಳುವನು).

ಶೀನಪ್ಪ : (ಗಿಡ್ಡ, ಫ್ರೆಂಚ ಕಟ್ ಮೀಸೆ, ಬೋಳುತಲೆ, ಖಾಕಿ ಹಾಫ್ ಪ್ಯಾಂಟ, ಅರ್ಧ ತೋಳಿನ ಶರ್ಟ, ಕಣ್ಣಿಗೆ ಕೂಲಿಂಗ ಗ್ಲಾಸ, ಕೈಯಲ್ಲಿ ನಸ್ಯದ ಡಬ್ಬಿ.) (ಮಧ್ಯೆ ಮಧ್ಯೆ ಒಂದು ಕ್ಷಣ ಏನೂ ಮಾತನಾಡದೆ ಬಿಟ್ಟ ಕಣ್ಣು ಹಾಗೇ ಬಿಟ್ಟುಕೊಂಡು ಶಿಲಾಮೂರ್ತಿ ಯಂತೆ ಕುಳಿತುಕೊಳ್ಳುವ ಸ್ವಭಾವ.) (ಬಂದು ಎಲ್ಲರನ್ನೂ ಗಮನಿಸಿ,

Sri Vidyabharathi Book Centre, Sringeri

CC-O. In Public Domain. Digitized by eGangotri
ಮೇಲೆ ನೋಡಿ, ಕಣ್ಣು ಮುಚ್ಚಿ ಕೈಮುಗಿದು) ಸದ್ಗುರೂ....
ಶ್ರೀಹರೀ.... ನೀನು ಬದುಕಿದ್ದೀ.

ಸತೀಶ : (ನೋಡಿ) ಬನ್ನಿ.... ಬನ್ನಿ.... ಯಜಮಾನರೇ, ಕೂತುಕೊಳ್ಳಿ.

ಶೀನಪ್ಪ : ಸದ್ಗುರೂ.... ಶ್ರೀಹರೀ.... (ಎಂದು ಒಂದು ಕುರ್ಚಿಯ ಮೇಲೆ ಕುಳಿತುಕೊಂಡು ಕಾಲು ಮೇಲಕ್ಕೇರಿಸಿಕೊಂಡು ಕಾಲು ತುರಿಸಿ ಕೊಳ್ಳುತ್ತ) ಶ್ರೀಹರೀ.... ಶ್ರೀಹರೀ.

ಸತ್ಯ : (ಸಮೀಪಿಸಿ) ನಾ ತುಸು ತುರುಸಲೇನ್ರಿ ?

ಶೀನಪ್ಪ : ಸದ್ಗೂರೂ .... ಶ್ರೀಹರೀ ಅಂದ....ಅಂದರೆ ಬೇಡಾ ಅಂದ.

ಸತ್ಯ : ಸ್ವಲ್ಪ ಕಹಿ ಔಷಧಿ ಕುಡೀರಿ ಅಂದರ ಮೈಯಾಗಿನ ನಂಜ ಹೊರಗ ಹೋಗ್ತದ.

ಶೀನಪ್ಪ : ಕಹಿ ಅಂದರ ವಿಷಾ ? ಶ್ರೀಹರೀ.... ಶ್ರೀಹರೀ. ಈ ಜೀವಕ್ಕೆ ಕಹಿ ಅಂದರೆ ಆಗದು.... ವಿಷಾ ಕುಡಿದು ಬದುಕಿದವರುಂಟೆ ಶ್ರೀಹರೀ.

ಸತ್ಯ : ವಿಷಾ ಕುಡಿಬ್ಯಾಡ್ರಿ....ಅದೂ ಪ್ಯಾಟ್ಯಾಗ ಸಿಗೂದಿಲ್ಲಂತ ಕೇಳೇನಿ.

ಶೀನಪ್ಪ : ಎಂಥ ಕೆಟ್ಟ ಕಾಲ ಬಂತಪ್ಪೋ ಶ್ರೀಹರೀ.... ಅಕ್ಕಿ ಸಿಗೋದಿಲ್ಲ, ಗೋದಿ ಸಿಗೋದಿಲ್ಲ, ಸಕ್ಕರಿ ಸಿಗೋದಿಲ್ಲ, ಸಾಯೋಣಾ ಅಂದ್ರೆ ಪೇಟೆಯಲ್ಲಿ ವಿಷಾನೂ ಸಿಗೋದಿಲ್ಲ. ಶ್ರೀಹರಿ.... ಶ್ರಿಹರೀ ಈ ರಾಮರಾಜ್ಯ ಸಾಕಪ್ಪಾ....

ಸತ್ಯ : ವಿಷಾ ಇಲ್ದೇನೇ ಸಾಯೂಕ ಹತ್ತ್ಯಾರಲ್ರಿ ಮಂದಿ. ನೀವೇನಾರ ರಾಮರಾಜ್ಯ ನೋಡಿರೇನ್ರಿ ಹಿಂದೆ....

ಶೀನಪ್ಪ : ಸದ್ಗುರೂ ಶ್ರೀಹರೀ....ನಾ ಚೊಣ್ಣಾ ಹಾಕಿಕೊಂಡು ಓಡಾಡುವಾಗ ಒಂದು ಅಂದರೆ ಒಂದೇ ರೂಪಾಯಿಗೆ ಮೂವತ್ತೆರಡು ಶ್ರೀಹರೀ....

ಸತ್ಯ : ಆಂ ? ಏನಂದ್ರಿ.... ರೂಪಾಯಿ ಮೂವತ್ತೆರಡು ಶ್ರೀಹರೀ ಅಂದ್ರೆ ?

ಶೀನಪ್ಪ : ಮೂವತ್ತೆರಡು ಶ್ರೀಹರೀ ಅಂದ್ರೆ ತೆಂಗಿನಕಾಯಿಗಳು. ಈಗ ಒಂದು ರೂಪಾಯಿಗೆ ಒಂದೂ ಬರೋದಿಲ್ಲ.

ಸತ್ಯ : ನಾನೂ ನೋಡೇನಿ ಬಿಡ್ರಿ.... ಎರಡು ರೂಪಾಯಿಗೆ ಒಂದು ಚೀಲ ಶ್ರೀಹರೀ ಅಂದ್ರು ಒಂದ ಚೀಲ ಅಕ್ಕಿ ಸಿಗತಿತ್ತ ನೋಡ್ರಿ.

ಶೀನಪ್ಪ : ನಾನು ಅಂದ್ರೇ ನಾನೇ ಸ್ವತಃ ಎರಡು ದುಡ್ಡಿಗೆ ಒಂದು ಪಾಯಲಿ ಶ್ರೀಹರೀ ತಂದಿದ್ದು ಇದೇ ಕೈಗಳಿಂದ.

Sri Vidyabharathi Book Centre, Sringeri

CC-O. In Public Domain. Digitized by eGangotri

ಸತ್ಯ : ಪ್ಯಾಟ್ಯಾಗ ಒಂದs ರೂಪಾಯಿ ತಗಂಡ ಹ್ವಾದರ ಪ್ಯಾಟ್ಯಾಗಿನ ಎಲ್ಲಾ ಸಾಮಾನು ತರಬಹುದಿತ್ತ ನೋಡ್ರಿ.... ಈಗ ಒಂದ ರೂಪಾಯಿಗೆ ಒಂದ ಹಾಲಗುಂಬಳಗಾಯಿ ಬರೂದಿಲ್ಲ....

ಶೀನಪ್ಪ : ಸದ್ಗುರೂ.... ಶ್ರೀಹರೀ....ಏನು ಕಾಲಬಂತಪ್ಪ.... (ಕಾಲುತುರಿಕೆ)

ಸತ್ಯ : ಮನಷ್ಯಾನಿಗೆ ಪುನರ್‌ಜಲ್ಮ ಐತಿ ಅಂತ ಹೇಳ್ತಾರ....ಖರೇ ಐತೇನ್ರಿ?

ಶೀನಪ್ಪ : ಯಾಕೆ ಮುಂದಿನ ಜನ್ಮದಲ್ಲಿ ವ್ಯಾಪಾರಿಯಾಗಿ ಹುಟ್ಟಬೇಕೆಂದು ನಿರ್ಧರಿಸಿರುವೆಯೋ? ಶ್ರೀಹರೀ....ಶ್ರೀಹರೀ

ಸತ್ಯ : ಇಲ್ಲ ಬಿಡ್ರೀ.... ಆ ಹಾಳದಂಧಿ ಮಾಡಾಕ ನನಗೇನ ಹುಚ್ಚಹಿಡದೈತೇನರಿ?

ಶೀನಪ್ಪ : ಸದ್ಗುರೂ ... ಶ್ರೀಹರೀ ಅಂದರೆ ಮತ್ತೇನು ಮಾಡ್ತಿ?

ಸತ್ಯ : ಮಂತ್ರಿ ಆಗಬೇಕಂತ ಮಾಡೇನ್ರಿ.... ಮತ್ತ ನೀವ ಯಾರ ಮುಂದೂ ಅನಬ್ಯಾಡ್ರಿ.... ಯಾಕಂದರ ಮಂತ್ರಿ ಆಗೂದಕ್ಕಿಂತ ಫಾಯದೆ ಮತ್ತೊಂದು ದಂಧ್ಯಾಗ ಐತೇನ್ರಿ?

ಶೀನಪ್ಪ : ಸದ್ಗುರೂ ...ಶ್ರೀಹರೀ ಅಂದರೆ ನಿನಗೆ ಹೇಗೆ ಗೊತ್ತಾಯ್ತು?

ಸತ್ಯ : ಎಂದೆಂಥ ಭಿಕನಾಶಿ ಮಂದ್ಯೆಲ್ಲ ಮಂತ್ರಿ ಆಗಿ ಮಂದೀಗ ಹಾಂಗ ಮಾಡ್ರಿ–ಹಿಂಗ ಮಾಡ್ರಿ ಅಂತ ಹೇಳಕೋತ ಇವರೇನು ಮಾಡ್ಯಾರ ಹೇಳ್ರಿ?

ಶೀನಪ್ಪ : ಏನು ಮಾಡಿದ್ದಾರೆ ಶ್ರೀಹರೀ.

ಸತ್ಯ : ಶ್ರೀಹರೀ ಮಾಡ್ಯಾರ ಅಂದ್ರ ದುಡ್ಡ ಮಾಡ್ಯಾರ, ಜಗಾ ಖರೀದಿಸ್ಯಾರ, ಮನಿ ಕಟ್ಟಿಸ್ಯಾರ, ಕಾರ್ಖಾನಿ ಮಾಡ್ಯಾರ, ಕಾರ್–ಪಾರ್ ಇಟ್ಟಾರ, ಈ ದುಡ್ಡು ಎಲ್ಲಿಂದ ಬಂತ್ರಿ?

ಶೀನಪ್ಪ : ಸದ್ಗುರೂ....ಶ್ರೀಹರೀ ಮಾಡಿ ಬಂತು.... ಅಂದರೆ ಜನಸೇವೆ ಮಾಡಿ ಬಂತು.

ಸತ್ಯ : ಹೌಂದರಿ....ಜನಸೇವನೆ ಮಾಡಿ ಬಂತರಿ. ಈ ಕಳ್ಳ ಪುಡಾರಿಗಳಿಗೋಯ್ದು ಜೇಲಿಗ ಹಾಕೂ ಮಟಾ ಈ ದೇಶ ಸುಧಾರಿಸೂದಿಲ್ಲ ಬಿಡ್ರಿ. ಹಾಂಗs ಜೇಲಿಗ ಹಾಕಬಾರದ್ರೀ....ಅನ್ನ ನೀರೂ ಕೊಡಬಾರದ ನೋಡ್ರಿ.

Sri Vidyabharathi Book Centre, Sringeri

CC-O. In Public Domain. Digitized by eGangotri

ಶೀನಪ್ಪ : ನೀನು ಮಂತ್ರಿಯಾಗಬಹುದು...ಭಾಷಣ ಮಾಡೋಕ್ಕೆ ಬರುತ್ತೆ.. ಸದ್ಗುರೂ....ಶ್ರೀಹರೀ....ನನಗೂ ಒಂದು ಮುಖ್ಯಮಂತ್ರಿ ಜಾಗಾ ಬೇಕಾಗಿತ್ತು. ಅದಕ್ಕೆ ಏನು ಮಾಡಬೇಕು?

ಸತ್ಯ : ಏನೂ ಮಾಡಬ್ಯಾಡ್ರಿ. ಮ್ಯಾಲಿನವರ ಕಾಲಮ್ಯಾಗ ತಲೀ ಇಟಗೊಂಡು ನೀನs ದೇವರು....ನೀ ಸಗಣಿ ತಿನ್ನು ಅಂದ್ರೂ ತಿಂತೀನ ಅಂತ ಅಂದ್ರ ಆತ ನೋಡ್ರಿ....

ಶೀನಪ್ಪ : ಸದ್ಗುರೂ....ಶ್ರೀಹರೀ.... ಶಿಕ್ಷಣ ಬೇಡವೇನಯ್ಯ....?

ಸತ್ಯ : ಯಾಕ ಬೇಕ್ರಿ ಅದೆಲ್ಲ....ಭಾಷಣಾ ಜಡಿಯಾಕ ಬಂದರ ಸಾಕು. ಆಶ್ವಾಸನೆ ಕೊಡಾಕ ಬಂದ್ರ ಸಾಕು. ಸುಳ್ಳ ಹೇಳಾಕ ಮೊದಲ ಕಲೀಬೇಕ್ರಿ.

ಶೀನಪ್ಪ : ಸದ್ಗುರೂ....ಶ್ರೀಹರೀ....

ಸತೀಶ : (ಕಾಫಿ ಬಟ್ಟಲು ತಂದಿಟ್ಟು) ತಗೊಳ್ಳಿ....ಯಜಮಾನರೇ.

ಶೀನಪ್ಪ : ಸದ್ಗುರೂ....ಶ್ರೀಹರೀ....(ಕಾಫಿ ತೋರಿಸಿ) ಸಕ್ಕರೆ ಹಾಕಿದ್ರಾ?

ಸತೀಶ : ಹೌದು

ಶೀನಪ್ಪ : ಸದ್ಗುರೂ....ಬೇಡಾಗಿತ್ತು.

ಸತ್ಯ : ಏನ ಬೇಡಾಗಿತ್ರಿ....ಕಾಫಿ?

ಶೀನಪ್ಪ : ಅಲ್ಲ....ಅಲ್ಲ ...ಸಕ್ಕರೆ ಬೇಡಾಗಿತ್ತು....ಶ್ರೀಹರೀ.

ಸತ್ಯ : ಯಾಕ್ರಿ....ನಿಮಗೂ ನಿಮಗೂ ಸಿಹಿಮೂತ್ರ....

ಶೀನಪ್ಪ : (ಕಿವಿ ಮುಚ್ಚಿಕೊಂಡು) ಸದ್ಗುರೂ....ಸದ್ಗುರೂ....ಅಂದ್ರೆ.... ಮುಂದೆ ಡೈಬಿಟೀಸ್ ಬರಬಾರ್ದು ಅಂತ ಈಗ಼್ೆ ಸಕ್ಕರೆ ಬಿಟ್ಟಿದ್ದೀನಿ.

ಸತ್ಯ : ಬಪ್ಪರೇ....ಊಟಮಾಡಿದವರು ಸತ್ತಹೋಗ್ಯಾರ ಅಂತ ಮತ್ತ ಊಟಾ ಮಾಡೂದೂ ಬಿಡಬ್ಯಾಡ್ರಿ.

ಶೀನಪ್ಪ : (ಕಾಫಿ ಹೀರುತ್ತ) ಇಲ್ಲಿ ನಾನು ಯಾಕೆ ಬಂದಿದ್ದೆ? ಸದ್ಗುರೂ....

ಸತ್ಯ : ಕಾಫಿ ಕುಡಿಯಾಕ.

ಶೀನಪ್ಪ : No.... No.... ಸದ್ಗುರೂ.... ಶ್ರೀಹರೀ ಆಗ್ತಾ ಇಲ್ಲ. ಅಂದ್ರೆ ನೆನಪು ಆಗ್ತಾ ಇಲ್ಲ.

ಸತ್ಯ : ಹಾಂಗಾರ ಒಂದ ಕೆಲಸ ಮಾಡ್ರಿ....ಹೇಂತಿಗೆ ಕೇಳಿ ಬರ್ರಿ.

Sri Vidyabharathi Book Centre, Sringeri

CC-O. In Public Domain. Digitized by eGangotri

ಶೀನಪ್ಪ : (ಹೊಳೆದವನಂತೆ)ಸದ್ಗುರು....ಹೆಂಡತಿ ಅಂದಬಳಿಕ ನೆನಪುಬಂತು.

ಸತ್ಯ : ಭಾಳ ಮುಂದೀಗೆ ಹಂಗs ಆಗ್ತೈತ್ರಿ....ಹೇಂತಿ ಹೆಸರು ನೆನಪ ಮಾಡಿದ್ರ ಹಿಂದಿನ ಜನ್ಮ–ಮುಂದಿನ ಜನ್ಮದ ನೆನಪೂ ಆಗತ್ತೈತಿ.

ಶೀನಪ್ಪ : ನಾನು ಬಂದಿದ್ದು ಭಾಡಿಗೆ ವಸೂಲಿಗೆ.

ಸತ್ಯ : ಯಾರ ಮನೇದ್ರಿ?

ಶೀನಪ್ಪ : ಸದ್ಗುರೂ ಇದೇ ಮನಿ ಭಾಡಿಗೆ.... ನೀವು ಕೊಡಲಿಲ್ಲ.

ಸತ್ಯ : ಮನೆ ಹಂಚು ಒಡೆದು ಹೋಗಿದೆ (ಮೇಲೆ ತೋರಿಸಿ) ನೋಡ್ರಿ.... ಬ್ಯಾರಿ ಹಂಚ ಹಾಕಾಕ ಹೇಳಿದ್ವಿ.

ಶೀನಪ್ಪ : ಸದ್ಗುರೂ.... ಈ ಮನೆ ನಿಮ್ಮದೇ.... ಅಂತ ತಿಳಿಕೊಂಡು ಏನು ಬೇಕೋ ಆ ರೀಪೇರಿ ಮಾಡ್ಕೊಂಡು ಬಿಡಿ.... ಶ್ರೀಹರೀ

ಸತ್ಯ : ಮನೆ ನಮ್ಮ ಹೆಸsಗೆ ಬರೆದುಕೊಟ್ಟು ಬಿಡ್ರಿ.... ಈ ಮನೀ ರಿಪೇರಿ ಮಾಡೂದ್ಕಿಂತ ಹೊಸ ಮನಿ ಕಟ್ಟೂದ ಮ್ಯಾಲ.

ಶೀನಪ್ಪ : ವಿಶ್ವವೇ ನಮ್ಮ ಮನೆ ಅಂತ ತಿಳ್ಕೋಬೇಕು ಸದ್ಗುರೂ.

ಸತ್ಯ : ಹಾಂಗs ತಿಳ್ಕೊತೀವಿ ಬಿಡ್ರಿ....ಭಾಡಿಗಿ ಕೇಳಬ್ಯಾಡ್ರಿ ಸದ್ಗುರೂ.

ಶೀನಪ್ಪ : ಸದ್ಗುರೂ....ನೀನು ಬುದ್ಧಿವಂತ ಕಣಪ್ಪ.... (ಸತೀಶನಿಗೆ) ಏನು ಮಾಡ್ತೀರಿ ಬಾಡಿಗೆ.... ಶ್ರೀಹರೀ.

ಸತೀಶ : ಇನ್ನೊಂದೆಂಟು ದಿನ ಇರಿ. ಎಲ್ಲಾ ಒಟ್ಟಿಗೇ ಕೊಟ್ಟುಬಿಡ್ತೀವಿ.

ಶೀನಪ್ಪ : ಸದ್ಗುರೂ ಒಂದು ವರುಷದಿಂದ ಏನೂ ಕೊಡಲಿಲ್ಲ. ಈಗ ಒಟ್ಟಿಗೇ ಹೇಗೆ ಕೊಡ್ತೀರಿ ? ಅಥವಾ ಕೈಕೊಡ್ತೀರೊ ? ಶ್ರೀಹರೀ.

ಸತೀಶ : ಹಾಗೆ ಕನಸಿನಲ್ಲೂ ಎಣಿಸಬೇಡಿ, ಯಜಮಾನರೇ. ನನ್ನ ಪರಿಸ್ಥಿತಿ ನನ್ನನ್ನು ಹೀಗೆ ಮಾಡಿದೆ ಅಷ್ಟೇ.... ಇಲ್ಲದಿದ್ದರೆ ನಿಮ್ಮ ಬಾಡಿಗೆ ಹಣ ಇಟ್ಟುಕೊಳ್ಳುತ್ತಿದ್ದೆನೆ ?

ಶೀನಪ್ಪ : ಸದ್ಗುರೂ....ಶ್ರೀಹರೀ....ಅಂದ್ರೆ.... ನಿಮ್ಮ ಪರಿಸ್ಥಿತಿ ನೀವೇ ತಂದುಕೊಂಡಿದ್ದು. ಯಾಕೆ ನಂಜಣ್ಣನಂಥವರ ಹತ್ತಿರ ಲಂಚದ ಆಸೆ ಮಾಡಬೇಕಾಗಿತ್ತು. ಬಂದ ಸಂಬಳದಲ್ಲಿ ಶ್ರೀಹರೀ ಅಂತ ಹಾಯಾಗಿ ರಬಾರದಾಗಿತ್ತೆ ?

ಸತೀಶ : ಯಜಮಾನರೇ, ನೀವೂ ನನ್ನನ್ನು ತಪ್ಪು ತಿಳಿದುಕೊಂಡಿದ್ದೀರಿ.

ಶೀನಪ್ಪ : ಸದ್ಗುರೂ ಶ್ರೀಹರೀ, ಅಂದರೆ ನೀವು [illegible] ನಡೆಯುಲಿಲ್ಲವೆ ?

Sri Vidyabharathi Book Centre, Sringeri

CC-O. In Public Domain. Digitized by eGangotri

ಸತೀಶ : ಪ್ರಾಮಾಣಿಕವಾಗಿ ಹೇಳ್ತೇನಿ....ನಾನು ಲಂಚದ ಉಗ್ರ ವಿರೋಧಕ.

ಶೀನಪ್ಪ : ಸದ್ಗುರೂ.... ಕದ್ದವನು ತಾನು ಕಳ್ಳ ಅಂತ ಹೇಳ್ತಾನೆಯೇ ?

ಸತೀಶ : ನೀವು ಹೇಳೋದು ನಿಜ ಯಜಮಾನರೇ. ಆದರೆ ನನ್ನ ಆತ್ಮ ಸಾಕ್ಷಿಯೇ ನನಗೆ ಆಧಾರ.

ಶೀನಪ್ಪ : ಸದ್ಗುರೂ.... ಈ ಆತ್ಮಸಾಕ್ಷಿ ನಂಬಿ ಅನೇಕರು ಹಾಳಾಗಿದ್ದಾರೆ. ಶ್ರೀಹರೀ.... ನಿಮಗೂ ಆತ್ಮಸಾಕ್ಷಿಯ ಕಾಯಿಲೆ ಅಂಟಿದೆಯೇನು ?

ಸತೀಶ : ನೀವು ಬೇಕಾದ್ದು ತಿಳಿದುಕೊಳ್ಳಿ.... ನಾನೂ ಲಂಚಕ್ಕೆ ಕೈಯೊಡ್ಡಿದರೆ ನನಗೆ ಈ ಸ್ಥಿತಿ ಬರುತ್ತಿರಲಿಲ್ಲ.

ಶೀನಪ್ಪ : ಈಗಾದ್ರೂ ಗೊತ್ತಾಯ್ತಲ್ಲ.... ಸದ್ಗುರೂ.... ಸುಮ್ಮನೆ ನಂಜಣ್ಣನಲ್ಲಿ ಹೋಗಿ ಕ್ಷಮೆ ಕೇಳಿಕೊಂಡು ಬಿಡಿ.

ಸತೀಶ : ಛೀ ಅಂಥ ಹೇಯ ಕಾರ್ಯಕ್ಕೆ ಕೈಹಾಕಲಾರೆ. ನನಗಿನ್ನೂ ಪರಿಸ್ಥಿತಿ ಎದುರಿಸುವ ಎದೆಗಾರಿಕೆ ಇದೆ. ನಾನು ಪರಿಸ್ಥಿತಿಗೆ ಮಣಿಯಬಹುದು. ಆದರೆ ಮುರಿಯಲಾರೆ.

ಶೀನಪ್ಪ : ಇಂಥ ಹಲ್ಕಾ ಪ್ರತಿಜ್ಞೆ ಮಾಡಿದ್ರೆ ಪುರಾಣ ಕಾಲದಲ್ಲಿ ಭೇಷ್ ಅನ್ತಿದ್ದರು. ಈಗ ನಾಟಕ–ಸಿನೇಮಾದಲ್ಲಿ ಮಾಡಿದ್ರೆ ಚಪ್ಪಾಳೆ ಬೀಳ್ತವೆ. ನಿಜಜೀವನದಲ್ಲಿ ಪುಸ್ತಕದ ಪ್ರತಿಜ್ಞೆ ಜಾರಿಗೆ ತಂದರೆ ಜನಾ ನಗ್ತಾರೆ 'ಹುಚ್ಚ' ಅಂತ. ಸದ್ಗುರೂ.... ಶ್ರೀಹರೀ.

ಸತೀಶ : ನಗುವವರು ನಗಲಿ.... ನಾನು ನನ್ನ ನಿರ್ಧಾರ ಎಂದೆಂದಿಗೂ ಬದಲಿಸಲಾರೆ.

ಶೀನಪ್ಪ : ಸದ್ಗುರೂ.... ಶ್ರೀಹರೀ.... ನಿಮಗೆ ಒಂದು ಮಾತು ಹೇಳಲೇ ?

ಸತೀಶ : ಹೇಳಿ.... ಅದಕ್ಕೇನಂತೆ ?

ಶೀನಪ್ಪ : ಶ್ರೀಹರೀ.... ಹೇಳಿದ್ಮೇಲೆ ಸಿಟ್ಟಾಗಬಾರದು.

ಸತೀಶ : ಇಲ್ಲ, ಹೇಳಿ.

ಶೀನಪ್ಪ : ಶ್ರೀಹರೀ.... ನೀವು ಇಂಜಿನೀಯರ್ ಆಗೋದ್ಕಿಂತ ನಾಟಕ ಕಂಪನಿಯಲ್ಲಿದ್ರೆ ತುಂಬ ಮೆಡಲ್‌ಗಳು ಸಿಗುತ್ತಿದ್ದುವು. ಇದು ನಾಟಕವಲ್ಲ ಸಾಹೇಬರೇ.... ಜೀವನ. ಇಲ್ಲಿ ಕಾಲಕ್ಕೆ ತಕ್ಕ ಹೆಜ್ಜೆ ಹಾಕಬೇಕು. ಶ್ರೀಹರೀ.... ಇಲ್ಲದಿದ್ದರೆ ಎಡವಿಬಿದ್ರೆ ಕೇಳುವವರಿಲ್ಲ ಯಾರೂ.

Sri Vidyabharathi Book Centre, Sringeri

CC-O. In Public Domain. Digitized by eGangotri

ಸತೀಶ : ಕೇಳಬೇಕೆಂಬ ಆಸೆಯೂ ನನಗಿಲ್ಲ ಯಜಮಾನರೇ. ನನ್ನ ಕರ್ತವ್ಯ ನಾನು ಮಾಡಿದ್ದೇನೆ. ಆ ನಿಯತ್ತು ನನ್ನನ್ನು ಕಾಯುತ್ತೆ ಅಂತ ಆತ್ಮವಿಶ್ವಾಸ ನನಗಿದೆ.

ಶೀನಪ್ಪ : ಶ್ರೀಹರೀ.... ಸದ್ಗುರೂ.... ಥೂ! ಆತ್ಮಸಾಕ್ಷಿ, ಆತ್ಮವಿಶ್ವಾಸ, ತ್ಯಾಗ, ಅಹಿಂಸೆ ಇವೆಲ್ಲ ಸವಕಲು ನಾಣ್ಯಗಳು ಸಾಹೇಬರೇ. ಮೊದಲು ಬದುಕಿನ ವ್ಯವಹಾರ ಕಲಿಯಿರಿ. ವೇದಿಕೆಯ ಮೇಲೆ ನಿಂತು ಆಡುವ ಶಬ್ದಗಳೇ ಬೇರೆ. ಅವು ಜೀವನದಲ್ಲಿ ಅನುಷ್ಠಾನಕ್ಕೆ ತರುವುದು ಕಠಿಣ.

ಸತೀಶ : ನುಡಿದಂತೆ ನಡೆವುದು ಲೇಸಲ್ಲವೆ ?

ಶೀನಪ್ಪ : ಹೌದು; ಶರಣರ ವಚನಗಳಲ್ಲಿ. ನುಡಿದರೆ ಮುತ್ತಿನ ಹಾರದಂತಿರಬೇಕು, ನುಡಿದರೆ ಸ್ಫಟಿಕದ ಸಲಾಕೆಯಂತಿರಬೇಕು, ನುಡಿದರೆ ಲಿಂಗಮೆಚ್ಚಿ ಅಹುದೆನ್ನಬೇಕು. ಈ ಕೆಲಸ ನಮ್ಮ ದೇಶದ ಪುಢಾರಿಗಳು ಮಾಡ್ತಿದ್ದಾರೆ. ಶ್ರೀಹರೀ.

ಸತೀಶ : 'ಸತ್ಯಂ ವದ ಧರ್ಮಂ ಚರ'

ಶೀನಪ್ಪ : ವಿಧಾನಸೌಧದ ಬಾಗಿಲಲ್ಲಿ ಬರೆಯಿಸಲು ಲಾಯಖ್ಖಾದ ಶಬ್ದ. ಒಳಗಿರುವವರು ಮಾಡುವುದೇನು ? ಕುರ್ಚಿಗೆ ಕೋಟು ತಗಲಿಸಿ ಕ್ಯಾಂಟೀನಿಗೆ ಹೋಗಿ ಕುಳಿತುಕೊಳ್ಳುತ್ತಾರೆ. ನಿಮ್ಮ ಫೈಲು ಬಂದಿಲ್ಲ ಅಂತ ಸತ್ಯವನ್ನೇ ಹೇಳುತ್ತಾರೆ. ಮೇಜಿನ ಮೇಲೆ ವಜನ ಇಟ್ಟರೆ ಅಂದರೆ ಶ್ರೀಹರೀ.... ಕೈಬಿಸಿ ಮಾಡಿದರೆ ಧರ್ಮದಿಂದಲೇ ನಡೆದುಕೊಳ್ತಾರೆ. ಸದ್ಗುರೂ.

ಸತೀಶ : ಅಲ್ಲಿಯೂ ಲಂಚದ ಹಾವಳಿ ಇದೆಯೇ ?

ಶೀನಪ್ಪ : ಅದೇ ಇದರ ತೌರುಮನೆ ಸ್ವಾಮೀ. ಅಲ್ಲಿಂದಲೇ ಈ ರೋಗದ ಪ್ರಸಾರ. ಅಲ್ಲಿಯ ಜನಾ ಲಂಚಾನೇ ಕೇಳೋಲ್ಲ. ಅವರವರ ಯೋಗ್ಯತೆಗೆ ಸರಿಯಾಗಿ ಮೋಟರ್ ಸೈಕಲ್ ಟಯರು, ಕಾರಟೈರ್, ವಾಚ್, ರೇಡಿಯೋ, ಟ್ರಾನ್ಸಿಸ್ಟರ್, ವಿಸ್ಕಿ, ಬ್ರ್ಯಾಂಡಿ, ಪಾರ್ಟಿ, ಹುಡುಗಿ ಅದೂ ಹದಿನಾರರದಿಂದ ಇಪ್ಪತ್ತು ವರ್ಷದ್ದು, ಅನಂತರ ಅವರ age ಬಾರ್. ಒಂದಲ್ಲ-ಎರಡಲ್ಲ ಸಾವಿರಾರು ಬಗೆ. ಸಿಮೆಂಟು, ಸಕ್ಕರೆ,

Sri Vidyabharathi Book Centre, Sringeri

CC-O. In Public Domain. Digitized by eGangotri

ಅಕ್ಕಿ ಹೀಗೇ ಈ ಯಾದಿ ಬೇಕಾದಷ್ಟು ಬೆಳೆಸಬಹುದು. ಶ್ರೀಹರೀ.... ಶ್ರೀಹರೀ....

ಸತೀಶ: ಲಂಚ ಸ್ವೀಕರಿಸೋದು ಪಾಪವಲ್ಲವೇ?

ಶೀನಪ್ಪ : ಈ ಪಾಪ-ಪುಣ್ಯಗಳ ಜಮಾಖರ್ಚು ಬರೆದಿಡುವುದಕ್ಕೆ ಅದಕ್ಕೂ ಇನ್‌ಕಂ ಟ್ಯಾಕ್ಸ ಕೊಡಬೇಕೆ? ಶ್ರೀಹರೀ.... ನೀವು ತೀರ ಹಿಂದಿನ ಕಾಲದವರಹಂಗೆ ಮಾತಾಡ್ತಿದೀರ. ಶ್ರೀಹರೀ....

ಸತೀಶ : ನೀವು ಏನು ಹೇಳಿದರೂ ನನ್ನ ಮನಸ್ಸು ನೀತಿ-ನಿಯತ್ತು ಬಿಡಲು ಸಿದ್ಧವಿಲ್ಲ.

ಶೀನಪ್ಪ : ಬಿಡಬೇಡಿ. ಅದೇ ನಿಮ್ಮನ್ನು ಬಿಡುತ್ತೆ. ನಿಮ್ಮಂತಹ ಪ್ರಾಮಾಣಿಕರ ಸಹವಾಸ ಅದಕ್ಕೂ ಸಾಕಾಗಿ ಹೋಗಿದೆ. ನೀತಿ-ನಿಯತ್ತು ನಿಮ್ಮ ಹತ್ರ ಅಲ್ಲ ಸ್ವಾಮೀ ದುಡ್ಡಿದ್ದವರ ಹತ್ತಿರ ಇರಬೇಕು. ಆದರೆ ಅವರ ಹತ್ತಿರ ನೀತಿ-ನಿಯತ್ತೇನೂ ಹಾರ್ಟೂ (Heart) ಇಲ್ಲ. ಶ್ರೀಹರೀ.... ಹಾರ್ಟಿನ ಸ್ಥಳದಲ್ಲಿ ಬ್ಯಾಂಕ ಪಾಸ್ ಬುಕ್ ಇರುತ್ತೆ. ಸದ್ಗುರೂ.

ಸತೀಶ : ಹೇಗಾದರೂ ಮಾಡಿ ಈ ಭ್ರಷ್ಟಾಚಾರ ಓಡಿಸಲೇಬೇಕು.

ಶೀನಪ್ಪ : ಅದೇನು ಎಮ್ಮೆ ಏನ್ರಿ ಓಡಿಸೋಕ್ಕೆ. ಭ್ರಷ್ಟಾಚಾರ ಓಡಿಸುತ್ತೇನೆಂದು ಹೇಳಿದ ಎಷ್ಟೋ ಅಧಿಕಾರಿಗಳು ನೌಕರಿ ಕಳೆದುಕೊಂಡಿದ್ದಾರೆ. ಮಂತ್ರಿಗಳು 'ಮಾಮೂಲು' ನಿಲ್ಲಿಸೋಕ್ಕೆ ಹೋಗಿ ತಮ್ಮ ಪದವಿಗೇ ತಿಲಾಂಜಲಿ ನೀಡಿದ್ದಾರೆ. ನಿಮ್ಮಂತಹ ಒಬ್ಬರಿಬ್ಬರು ಈ ಶಂಖ ಊದಿದರೆ ಜನಾ ನಿಮ್ಮನ್ನು ನೋಡಿ ನಗ್ತಾರೆ.... ಭ್ರಷ್ಟಾಚಾರದ ರಾಕ್ಷಸ ನಿಮ್ಮಂತಹ ಮಾಮೂಲೀ ಜನರನ್ನು ಬಿಡುವುದುಂಟೆ? ಶ್ರೀಹರೀ....ಇದನ್ನು ಓಡಿಸಲು ಒಂದೇ ಉಪಾಯವಿದೆ.

ಸತೀಶ : (ಕುತೂಹಲದಿಂದ) ಏನದು?

ಶೀನಪ್ಪ : ಜಗತ್ತಿನ ಜನರೆಲ್ಲ ಒಂದೇ ದಿನ ಒಂದು ನಿರ್ದಿಷ್ಟ ವೇಳೆಗೆ ವಿಷಾ ತಿನ್ನೋದು. ಶ್ರೀಹರಿ ಸದ್ಗುರೂ.

ಸತೀಶ : ಇದು ಎಂದೆಂದಿಗೂ ಸಾಧ್ಯವಿಲ್ಲ.

ಶೀನಪ್ಪ : ಹಾಗಾದರೆ ಭ್ರಷ್ಟಾಚಾರ ಎಂದೆಂದಿಗೂ ನಾಶವಾಗುವುದಿಲ್ಲ. ಅವನ್ನು ಓಡಿಸಲು ಹವಣಿಸುವುದು ಹುಚ್ಚು ಹವ್ಯಾಸ. ಪ್ರತಿಯೊಬ್ಬ

Sri Vidyabharathi Book Centre, Sringeri

CC-O. In Public Domain. Digitized by eGangotri

ಮನುಷ್ಯನಲ್ಲಿ ಪ್ರಾಮಾಣಿಕತೆ ಬರುವವರೆಗೆ ಈ 'ಮಾಮೂಲು' ಹಾವಳಿ ಕಡಿಮೆಯಾಗುವುದಿಲ್ಲ. ಶ್ರೀಹರೀ.... ಸದ್ಗುರೂ.

ಸತೀಶ : ಹೌದು ನೀವು ಹೇಳಿದಂತೆ ಎಲ್ಲರೂ ಪ್ರಾಮಾಣಿಕರಾಗಬೇಕು.

ಶೀನಪ್ಪ : ಅದೂ ಕನಸಿನ ಮಾತು. ಎಲ್ಲಿಯವರೆಗೆ ನಮ್ಮಲ್ಲಿ ಈ ದೇಶ ನಮ್ಮದು, ಈ ಭೂಮಿ ನಮ್ಮದು, ನಾವೆಲ್ಲ ಬಂಧು ಬಾಂಧವರು, ಈ ರಾಷ್ಟ್ರ ಧರ್ಮ ನಮ್ಮದು, ನಾವು ನಮ್ಮ ದೇಶಕ್ಕೆ ಮಾಡುವ ಅನ್ಯಾಯ ಅದು ನಮಗಾಗುವ ನಷ್ಟ ಎಂದು ತಿಳಿಯುವ ದೇಶಾಭಿಮಾನ, ಧರಾಭಿಮಾನ ಬೆಳೆಯುವುದಿಲ್ಲವೊ ಅಲ್ಲಿಯ ವರೆಗೆ 'ಪ್ರಾಮಾಣಿಕತೆ' ಯೆಂಬುದು ಕವಿಯ ಕಲ್ಪನೆಯ ಕೂಸಾಗಿ ನಿಲ್ಲುತ್ತದೆ. ನಮಗೆ ಸ್ವಾತಂತ್ರ್ಯ ಸಿಕ್ಕಿದೆ. ಆದರೆ ನಮ್ಮನ್ನು ನಾವು ಆಳುವುದರಲ್ಲಿ ವಿಫಲ ರಾಗಿದ್ದೇವೆ. ಶ್ರೀಹರೀ....

ಸತೀಶ : ಯಾಕೆ ?

ಶೀನಪ್ಪ : ನಾವು ಕೊಳ್ಳೆಹೊಡೆಯುವ ಕಳ್ಳರಂತೆ ಅಧಿಕಾರಕ್ಕಾಗಿ, ಹಣ್ಕಕ್ಕಾಗಿ, ಹೆಣ್ಣಿಗಾಗಿ ಹಪಹಪಿಸುತ್ತಿದ್ದೇವೆ. ಇಂದು ನಮ್ಮನ್ನಾಳುವ ನಾಯಕರಿಗೆ ದೇಶ ಮುಖ್ಯವಲ್ಲ. ಜನತೆಯ ಹಿತ ಮುಖ್ಯವಲ್ಲ. ತಮ್ಮ ಅಧಿಕಾರ ಕಾಪಾಡುವುದು, ತಮ್ಮ ಸ್ವಂತ ಗರೀಬೀ ಹಟಾವ್ ಮಾಡುವುದು, ತಮ್ಮ ಆಸ್ತಿ-ಪಾಸ್ತಿಗಳನ್ನು ಬೆಳೆಯಿಸಿಕೊಳ್ಳುವುದೇ ಮುಖ್ಯ. ಶ್ರೀಹರೀ....

ಸತೀಶ : ಯಾಕೆ ? ನಾವೂ ಬೇಕಾದಷ್ಟು ಪ್ರಗತಿ ಮಾಡಿದ್ದೇವಲ್ಲ ?

ಶೀನಪ್ಪ : ಹೌದಪ್ಪ ಹೌದು. ನೀವೂ ಬೇಕಾದಷ್ಟು ಪ್ರಗತಿ ಮಾಡಿದ್ದೀರಿ. ಚುನಾವಣೆಗೆ ನಿಲ್ಲಬೇಕಾದರೆ ಡಿಪಾಜಿಟ್ ಹಣ ಬೇರೆಯವರು ಕಟ್ಟಿ ನಿಲ್ಲಿಸಿದ ಶಾಸಕರು, ಮಂತ್ರಿಗಳು ಇಂದು ಮಾಡಿಕೊಂಡ ಆಸ್ತಿ-ಪಾಸ್ತಿಗಳಿಗೆ ಲೆಕ್ಕ ಇದೆಯೆ? ಎರಡು ಹೊತ್ತಿನ ತುತ್ತಿಗೆ ಗತಿಯಿಲ್ಲದ ಈ ದರಿದ್ರ ನಾರಾಯಣರಿಗೆ ಕೈಗೆ ಅಧಿಕಾರ ಬಂದ ಮೇಲೆ ಸೈಟು ಖರೀದಿಸಲು, ಮನೆಕಟ್ಟಲು, ಫಾಕ್ಟರಿ ಮಾಡಲು ಹಣ ಎಲ್ಲಿಂದ ಬಂತು ? ಶ್ರೀಹರೀ.... ಇದರ ಅರ್ಥ ಈ ಘಟಿಂಗರು ದೇಶದ ಕೊಳ್ಳೆ ಹೊಡೆದಿದ್ದಾರೆ.... ಆದರೂ ಅವರು ಪ್ರಾಮಾಣಿಕರು.

Sri Vidyabharathi Book Centre, Sringeri

CC-O. In Public Domain. Digitized by eGangotri

ಸತೀಶ : ಅದು ಹೇಗೆ

ಶೀನಪ್ಪ : ಯಾಕಂದರೆ ಈ ಕೊಳ್ಳೆ ಹೊಡೆದ ಆಸ್ತಿ-ಪಾಸ್ತಿಗಳು ಪಾಪ ಅವರ ಹೆಸರಿನಲ್ಲಿ ಇಲ್ಲವೇ ಇಲ್ಲ.... ಹೆಂಡತಿ, ಮಕ್ಕಳು, ಭಾವ, ನೆಂಟ, ಬೀಗರ ಹೆಸರಿನಲ್ಲಿ ಮಾತ್ರ ಇವೆ. ಅವರು ಅದನ್ನೆಲ್ಲ ಹೇಗೆ ದುಡಿದರು ಅಂತ ಕೇಳುವ ಧೈರ್ಯ ಯಾರಿಗೆ ಇದೆ ? ಶ್ರೀಹರಿ.... ಸದ್ಗುರೂ.

ಸತೀಶ : ಯಾರಿಗೂ ಇಲ್ಲವೆ ?

ಶೀನಪ್ಪ : ಎಲ್ಲರೂ ಕಳ್ಳರೇ.... ಅವನ ಆಸ್ತಿ-ಪಾಸ್ತಿ ತನಿಖೆ ನಡೆಸಿದರೆ ಇವರ ಆಸ್ತಿ-ಪಾಸ್ತಿ ಗುಟ್ಟು ಹೊರಬೀಳುತ್ತಲ್ಲ ಎಂಬ ಹೆದರಿಕೆ. ಹೆಸರಿನಲ್ಲಿ ಮಾತ್ರ ಅಪ್ಪಟ ಗಾಂಧೀವಾದೀ ಹೇಳಿಕೆಗಳು. ಪಾಪ! ಗಾಂಧಿಜೀಯವರು ಇಂದು ಬದುಕಿದ್ದರೆ ಅವರಿಗೆ ಆ ಘೋಡಸೆಯ ಗುಂಡು ಬೇಕಿರಲಿಲ್ಲ. ಅವರೇ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದರು .... ಈ ಪೋಲಿಗಳನ್ನು, ಅಪ್ರಮಾಣಿಕರನ್ನು, ಮೋಸಗಾರರನ್ನು, ಘಟಿಂಗರನು ನೋಡಿ. ಸದ್ಗುರೂ.... ಈ ಪಾಪಿಗಳ ವಿಷಯ ಮಾತನಾಡುವುದೂ ಮಹಾಪಾಪ.

ಸತೀಶ : 'ಜೈ ಜವಾನ, ಜೈ ಕಿಸಾನ್' ಎಂದ ಲಾಲಬಹದ್ದೂರ ಶಾಸ್ತ್ರಿಗಳನ್ನು ಮರೆಯುವದುಂಟೆ ?

ಶೀನಪ್ಪ : ಹೌದು ಅಂಥ ಪ್ರಾಮಾಣಿಕರು ಬಹಳ ದಿನ ಬದುಕೋಲ್ಲ. ಭಾರತದ ಪ್ರಧಾನ ಮಂತ್ರಿಯಾಗಿದ್ದೂ ಸಾಯುವಾಗ ಅವರೇನು ಕ ಡಿ ಆಸ್ತಿ ಮಾಡಿದ್ದರೆ ?

ಸತೀಶ : (ಆಶ್ಚರ್ಯದಿಂದ) ಅಂದರೆ ?

ಶೀನಪ್ಪ : ಮತ್ತೇನ್ರಿ ? ಬ್ಯಾಂಕಿನಲ್ಲಿ ಸಾಲ ಮಾಡಿಟ್ಟು ಹೋದ ಸಾಲವೇ ಅವರ ಆಸ್ತಿ. ಯಾಕೆ ? ಅವರು ಪ್ರಾಮಾಣಿಕರಾಗಿದ್ದರು. 'ಮಾಮೂಲು' ತೆಗೆದುಕೊಳ್ಳಲಿಲ್ಲ. ಇಲ್ಲದಿದ್ದರೆ ತಮ್ಮ ಅಧಿಕಾರವಿದ್ದಾಗ ತಮ್ಮ ಮಗನಿಗೆ ಹೊಸ ಕಾರ್ಖಾನೆ ಕೊಡೋಕ್ಕೆ ಸರಕಾರದಿಂದ ದುಡ್ಡು ಕೊಡಿಸಿ, ಲೈಸೆನ್ಸ್ ಕೊಟ್ಟು, ತರಬೇತಿಯ ನೆವದಲ್ಲಿ ಫಾರೀನ್‌ಗೆ ಕಳಿಸಬಹುದಿತ್ತು. ಆದರೆ ಪಾಪ ಅವರು ದುರ್ದೈವಿಗಳು.... ತಮ್ಮ ಮಗನಿಗೆ ಕಾಲೇಜಿನ ಸೀಟು ಕೊಡಿಸಲೂ ವಶೀಲಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಹಚ್ಚಲಿಲ್ಲ. ಅಂಥವರು ಬೇಕು ಸ್ವಾಮೀ. ನಮ್ಮ ದೇಶಕ್ಕೆ ಅಂಥ ಸತ್ಯನಿಷ್ಠರು, ದೇಶಭಕ್ತರು ಬೇಕು. ಶ್ರೀಹರೀ....ಸದ್ಗುರೂ.

ಸತ್ಯಪ್ಪ : (ಹೊರಗಡೆಯಿಂದ ಬರುತ್ತ) ಯಜಮಾನರೇ.... ನಿಮಗೆ ನಿಮ್ಮ ಮುಖ್ಯ ಮಂತ್ರಿಗಳು ಕರಿಯಾಕ ಹತ್ತ್ಯಾರ ನೋಡ್ರಿ.

ಶೀನಪ್ಪ : (ತಕ್ಷಣ ಸಾವರಿಸಿಕೊಂಡು) ಯಾರು.... ಅಮ್ಮಾವ್ರೆ ? (ಎದ್ದು ಗಡಬಡಿಸಿ) ಹಾಗಾದರೆ ಬಾಡಿಗೆಗೆ ಯಾವಾಗ ಬರಲಿ ? ಶ್ರೀಹರೀೀೀ.

ಸತ್ಯಪ್ಪ : ನೀವ ಬರಬ್ಯಾಡ್ರಿ.... ಸುಮ್ಕs ಯಾಕ ಬರ್ತೀರಿ ?

ಶೀನಪ್ಪ : ಅಂದರೆ.... ಶ್ರೀಹರೀೀ.... ಬಾಡಿಗೆ ?

ಸತ್ಯಪ್ಪ : ಬಂದವ್ಯಾಗ ನಾನs ತಂದು ಕೊಡ್ತಿನಿ ಬಿಡ್ರಿ....

ಶೀನಪ್ಪ : ತಂದು ಕೊಡುವಾಗ ಅಮ್ಮಾವ್ರಿಗೆ ತೋರಿಸಬೇಡ. ನನ್ನ ಕೈಗೇ ಕೊಡು.

ಸತ್ಯಪ್ಪ : ಯಾಕ್ರಿ.... ಅದರಾಗೂ ನಿಮ್ಮ 'ಮಾಮೂಲು' ಐತೇನ್ರಿ?

ಶೀನಪ್ಪ : ಶ್ರೀಹರೀ.... ಅಮ್ಮಾವ್ರು ಕೈಗೆ ಹಣಾ ಸಿಕ್ರೆ ಇಂಗ್ಲಿಷ ಸಿನೇಮಾಕ್ಕೆ ಹೋಗ್ತಾರೆ. ಈ ಊರಲ್ಲಿ ಮಹಿಳಾಮಂಡಳ ಇದೆಯಲ್ಲ ... ಅದಕ್ಕೆ ನಮ್ಮ ಅಮ್ಮಾವ್ರು ಅಧ್ಯಕ್ಷರು.

ಸತ್ಯಪ್ಪ : ಅಧ್ಯಕ್ಷರಾದರ ಏನ್ರಿ ? ಇಂಗ್ಲಿಷ ಸಿನಿಮಾ ನೋಡಬೇಕಂತ ಅದ ಏನ್ರಿ ?

ಶೀನಪ್ಪ : ಅಮ್ಮಾವ್ರು ಒಬ್ಬರೇ ಹೋಗಲ್ಲ ಕಣೊ. ಶ್ರೀಹರೀ.... ಮಹಿಳಾ ಮಂಡಳದ ಎಲ್ಲಾ ಸದಸ್ಯರೂ ಸೇರೀ ಹೋಗ್ತಾರೆ.

ಸತ್ಯ : ಯಾಕ್ರಿ.... ಅಲ್ಲೇನು ಧರಣಿ ಕೂಡ್ತಾರೇನ್ರಿ ?

ಶೀನಪ್ಪ : ಹಾಗಲ್ಲಯ್ಯ.... ಅವರವರ ಗಂಡಂದಿರನ್ನು ಹುಡುಕೋಕ್ಕೆ ಅಲ್ಲಿ ಹೋಗ್ತಾರೆ. ಆಫೀಸಿಗೆ ಹೋಗ್ತೀನಿ ಅಂತ ಕೆಲವು ಗಂಡಸರೂ ಸಿನೇಮಾ ಥಿಯೇಟರಿಗೆ ಹೋಗ್ತಾರಂತೆ. ಅದಕ್ಕೇ ಮಹಿಳಾ ಮಂಡಳದವರ ಈ ಪ್ಲ್ಯಾನು.

ಸತ್ಯ : ಹಂಗಾರೆ ನೀವು ಮತ್ತ ಸಿನಿಮಾ ಥಿಯೇಟರ್ ಕಡಿ ಹಾಯಬ್ಯಾಡ್ರಿ. ಸುಮ್ಕ ಕ್ಯಾಬರೇ ನೋಡಾಕರ ಹೋಗ್ರಿ.

ಶೀನಪ್ಪ : ಶ್ರೀಹರೀ.... ಅಲ್ಲಿಗೂ ಬರ್ತಾರೋ ಈ ಸಾಹೇಬರು.

Sri Vidyabharathi Book Centre, Sringeri.

CC-O. In Public Domain. Digitized by eGangotri

ಸತ್ಯ : ಆದು ನಿಮಗ ಹೆಂಗ ಗೊತ್ತಾತ್ರಿ ?

ಶೀನಪ್ಪ : ನಾನು ಮೊನ್ನೆ ಹೋಗಿ ಸಿಕ್ಕಬಿದ್ದೆ.... (ಗುಟ್ಟಿನಲ್ಲಿ) ಈ ವಿಷಯ ನಮ್ಮ ಅವ್ವಾಮ್ಮಾವ್ರ ಹತ್ರ ಹೇಳಬೇಡ.... ಸದ್ಯಗರೂ.... ಬರ್ತೀನಿ.... ಶ್ರೀಹರೀ.... (ಎಂದು ಹೋಗುವನು)

ಸತ್ಯ : ಇನ್ನೂ ಟಪಾಲ ಬರಲಿಲ್ಲ.... ನಾನೇ ಹೋಗಿ ನೋಡಿ ಬರಲೇನ್ರಿ.

ಸತೀಶ : ಈಗ ಬರಬಹುದು.... ತಾಳು. (ಅಷ್ಟರಲ್ಲಿ ಮಮತಾ ಸ್ಕೂಲಿನಿಂದ ಬರುತ್ತಾಳೆ. ಬರುವಾಗಲೇ ಬಾಡಿದ ಮುಖ.)

ಸತ್ಯ : ಏನವ್ವ ಬೇಬಿ....ಸಾಲೀ ಗುಡ್ಯಾಗ ಮಾಸ್ತರ ಆದಾನೋ ಇಲ್ಲೋ. (ಅವಳ ಮುಖ ನೋಡಿ) ಯಾಕವ್ವ, ಮಾರಿ ಸುಟ್ಟ ಬದನಿಕಾಯಿ ಹಂಗ ಬಾಡೈತಿ. (ಮಮತಾ School bag ಒಂದು ಕಡೆ ಇಟ್ಟು ಮುಖ ಗಂಟು ಹಾಕಿ ಕುಳಿತುಕೊಳ್ಳುವಳು.)

ಸತೀಶ : (ಸಮೀಪಿಸಿ-ಮುದ್ದಿನಿಂದ ಮುಂಗುರುಳು ಸೇವರಿಸಿ) ಏನಾಯ್ತು ಮಮ್ತಾ ? ಮ್ಯಾಡಮ್ ಏನಾದ್ರೂ ಅಂದ್ರಾ ?

ಮಮತಾ : ಪಪ್ಪಾ.... ನಾಳೆಯಿಂದ ನಾನೂ ಟ್ಯೂಶನ್‌ಗೆ ಹೋಗ್ತೀನಿ.

ಸತೀಶ : ನಿನಗ್ಯಾಕಮ್ಮಾ ಟ್ಯೂಷನ್.... ನೀನಿನ್ನೂ ಚಿಕ್ಕೋಳು. ಪರ್ಸ್ಟ ಸ್ಟ್ಯಾಂಡರ್ಡ್‌ಗೆ ಟ್ಯೂಷನ್‌ಗೆ ಹೋಗೋಲ್ಲಮ್ಮ ಯಾರೂ ? ಹೈಸ್ಕೂಲಿಗೆ ಹೋದ್ಮೇಲೆ ಬೇಕಾದರೆ ಹೋಗುವಿಯಂತೆ.

ಮಮತಾ : ಉಹೂಂ.... ನಾನು ನಾಳೆಯಿಂದ ಹೋಗ್ತೀನಿ ಪಪ್ಪಾ.

ಸತೀಶ : ಛೀ ಹುಚ್ಚು ಹುಡುಗಿ....

ಸತ್ಯ : ನೋಡವ್ವ ಬೇಬಿ.... ನಿನಗ ಟ್ಯೂಷನ್ ನಾನೇ ಕೊಡ್ತೀನಿ. ನೀನ ಅಲ್ಲ್ಯಾಕ ಮತ್ತ ಹೋಗಬೇಕು ?

ಮಮತಾ : ಹಂಗೆಲ್ಲ ಬೇರೆಯವರು ಟ್ಯೂಶನ್ ಕೊಡೋಕ್ಕೆ ಬರೋಲ್ಲ ಮಾಮಾ.

ಸತೀಶ : ಹಂಗಂತ ಯಾರಮ್ಮ ಹೇಳಿದರು ?

ಮಮತಾ : ನಮ್ಮ ಮ್ಯಾಡಮ್ "ಬೇರೆಯವರ ಹತ್ರ ಯಾರೂ ಟ್ಯೂಶನ್‌ಗೆ ಹೋಗ್ಬೇಡಿ.... ನನ್ನ ಹತ್ರಾನೇ ಬನ್ನಿ.... ಬೇರೆಯವರಿಗೆ ಟ್ಯೂಶನ್ ಕೊಡೋಕ್ಕೆ ಬರೋಲ್ಲ" ಅಂತ ಹೇಳಿದ್ರು ಪಪ್ಪಾ ?

ಸತೀಶ : ಓಹೋ ಹಾಗೇನು.... ಫೀ ಎಷ್ಟಂತೆ ?

Sri Vidyabharathi Book Centre, Sringeri

CC-O. In Public Domain. Digitized by eGangotri

ಮಮತಾ : Only Twenty-five Rupees per month ಅಂತ ಹೇಳು ಅಂದ್ರು.

ಸತ್ಯ : ಹಂಗಂದ್ರೇನವ್ವ ?

ಸತೀಶ : ತಿಂಗಳಿಗೆ ಕೇವಲ ಇಪ್ಪತ್ತೈದು ರೂಪಾಯಿ ಮಾತ್ರ ಅಂತ.

ಸತ್ಯ : ಅಷ್ಟs ಏನ್ರಿ.... ಮಾಸ್ತರರು ಮಾಮೂಲು ತಗೊಳ್ಳು ನಮೂನಿ ನೋಡ್ರಿ ಇದು. ಇಲ್ಲದಿದ್ರ ಅವರಿಗ ಯಾರು ಗಿಂಬಳ ಕೊಡ್ತಾರ. ಅದಕ್ಕ ಶ್ಯಾಣ್ಯಾ ಮಾಸ್ತರರು ಸಾಲಿ ಗುಡ್ಯಾಗ ಕಲಿಸೂದs ಇಲ್ಲ. ಸಾಲೀಗ ಬರೂ ಹುಡುಗರನ್ನ ಮನೀಗs ಕರದು ಗಿಂಬಳ ಗಿಟ್ಟಿಸಿ ಬಿಡ್ತಾರ. ಗಣೇಶ ಪೂಜಿ, ಸರಸ್ವತಿ ಪೂಜಿ, ಲಕ್ಷ್ಮಿ ಪೂಜಿ ಮಾಡಾಕಂತ ದುಡ್ಡು ವಸೂಲ್ಮಾಡಿ ಸಣ್ಣ ಪೂಜಿ ಮಾಡಿ ಉಳದ ದುಡ್ಡು ಹೊಟ್ಟಿ ಪೂಜೀಗ ಹಾಕೂ ಮಾಸ್ತರರೂ ಅದಾರ್ರಿ. ಪರೀಕ್ಷೆ ಪಾಸ ಮಾಡ್ತೀನಿ ಅಂತ ಲಂಚ ಕೇಳೋ ಮಂದೀನೂ ಐತ್ರಿ.

ಮಮತಾ : ಟ್ಯೂಶನ್‌ಗೆ ಬರದಿದ್ರೆ ಫೇಲ್ ಮಾಡ್ತೀನೀಂತ ಮ್ಯಾಡಮ್ ಹೇಳಿದ್ದಾರೆ.

ಸತೀಶ : ಒಟ್ನಲ್ಲಿ ಪ್ರೈಮರಿ ಶಾಲೆಯವರಿಗೂ ಈ ಮಾಮೂಲು ನಾಲಿಗೆ ಚಾಚಿದೆ.

ಸತ್ಯ : ಸಾಲೀಮನೀಗ ಬಂದ ಹಾಲಿನ ಹಿಟ್ಟು ಮಾರೂದು, ಪ್ರವಾಸಕ್ಕ ಕರಕೊಂಡು ದುಡ್ಡು ನುಂಗೂದು. ಸಾಲೀಗ ಕಳಿಸಿದ ಪುಸ್ತಕ ಮಾರಿ ತಿನ್ನೂದು, ಸಾಲಿ ರಿಪೇರಿ, ಖುರ್ಚಿ, ಮೇಜಿನ ರಿಪೇರಿ ಹೆಸರಿನ್ಯಾಗ ದುಡ್ಡು ತಿನ್ನೂದು, ಬಡ ಹುಡುಗರಿಗೆ ಬಂದ ಪುಸ್ತಕದ ಫೀ ಹಣ ತಿನ್ನೂದು ಇದೆಲ್ಲ ಸಾಲೀ ಮಾಸ್ತರ ಮಾಡದ ಮತ್ತ್ಯಾರ ಮಾಡಬೇಕ್ರಿ?

ಸತೀಶ : ಅದೂ ನಿಜವೇ !

ಸತ್ಯ : ಹಳ್ಳೀ ಸಾಲ್ಯಾಗಂತೂ ಮಾಸ್ತರಂದ್ರ ಮಾಮಲೇದಾರಕ್ಕಿಂತ ಮ್ಯಾಲಿನವ. ಅಲ್ಲಿ ಚಾಡೀ ಇಂವಗ ಹೇಳಿ, ಇಲ್ಲಿ ಚಾಡಿ ಅಂವಗ ಹೇಳಿ ತಮ್ಮ ಬಾಳೇವ ನಡಸೂ ಮಂದೀನೂ ಐತ್ರಿ. ಚುನಾವಣ್ಯಾಗಂತೂ ಮಾಸ್ತರರದs ಭಾನಗಡಿ ಭಾಳ ಇರತೈತಿ.

ಮಮತಾ : ನನ್ನ ಟ್ಯೂಶನ್‌ಗೆ ಕಳಸ್ತಿಯಲ್ಲವೆ ಪಪ್ಪಾ ?

Sri Vidyabharathi Book Centre, Sringeri

CC-O. In Public Domain. Digitized by eGangotri

ಸತೀಶ : ಕಳಿಸಲೇಬೇಕಲ್ಲ ! ಇಲ್ಲದಿದ್ದರೆ ಫೇಲ್ ಮಾಡ್ತಾರಲ್ಲ.

ಮಮತಾ : ಹಾಗಾರೆ.... ನಾಳೀನೇ ದುಡ್ಡು ತರೋಕ್ಕೆ ಹೇಳಿದ್ದಾರೆ.

ಸತೀಶ : ಎಷ್ಟಮ್ಮ ಅದು ?

ಮಮತಾ : ಅದೇ ಪಪ್ಪಾ....ಒಂದೇ ತಿಂಗಳ ಫೀ ಅಡ್ವಾನ್ಸ್ ಕೊಡಬೇಕಂತೆ.

ಸತೀಶ : ಅದ್ಯಾಕೆ.... ಕಲ್ಸಿದ ಮೇಲೆ ತಾನೇ ಕೊಡೋದು ?

ಮಮತಾ : ಹಾಗಲ್ಲ ಪಪ್ಪಾ .... ಫೀ ಮೊದಲೇ ಕೊಟ್ಟು ಟ್ಯೂಶನ್‌ಗೆ ಹೋಗೋದು.... ಎಲ್ಲರೂ ಹಾಗೇ ಮಾಡ್ತಾರೆ.

ಸತ್ಯ : ಎಲ್ಲಾರೂ ಬಾವ್ಯಾಗ ಬೀಳ್ತಾರಂತ ನಾವೂ ಬೀಳಾಕ ಆಗ್ತದೇನಪ್ಪ. ತಿಂಗಳ ತುಂಬಿದ ವ್ಯಾಗ ಕೊಟ್ಟರೇನಾಗ್ತದಂತ ನೀ ಕೇಳಾಕಬೇಕ.

ಮಮತಾ : ಹಂಗೆ ಕೇಳಿದ್ರೆ ಏಟು ಕೊಡ್ತಾರೆ.

ಸತ್ಯ : ಹಂಗಾರ ನಾಳೆ ನಾ ನಿನ್ನಗೂಡ ಸಾಲೀಗ ಬರ್ತೀನಿ.... ನಾನೇ ನಿನ್ನ ಮೇಡಮ್ಮಗ ಕೇಳ್ತೀನಿ.

ಮಮತಾ : ಬೇಡ ಮಾವಾ....ನೀನು ಕೇಳಿ ಈ ಕಡೆಗೆ ಬಂದ ಮೇಲೆ ನನಗೆ ಅಲ್ಲಿ ಏಟು ಬೀಳ್ತವೆ.

ಸತೀಶ : ಇದು ಒಳ್ಳೆ ಸಂಕಟವಾಯ್ತಲ್ಲ.

ಸತ್ಯ : ಹುಡುಗರನ್ನು ಅವರ ಕೈಯಾಗ ಕೊಟ್ಟ ವ್ಯಾಗ ಅವರು ತಲೀ ಕೆಳಗೆ ಮಾಡಿ ನಡೀ ಅಂದ್ರೂ ನಡೀಬೇಕ್ರಿ. ಇಲ್ಲದಿದ್ರ ಹುಡುಗರು ಫೇಲ್ ಆಗ್ತಾರ. ಹ್ಯಾಂಗದ ಮಜಾ.

ಸತೀಶ : ಶಾಲೆ ಅಂದರೆ ದೇವರ ಮಂದಿರ. ವಿದ್ಯಾದಾಯಿನಿ ಸರಸ್ವತಿಯ ಆವಾಸಸ್ಥಾನ. ಅಲ್ಲಿ ಇಂಥ ಭ್ರಷ್ಟಾಚಾರ ನಡೆಯಬಾರದು.

ಸತ್ಯ : ಪಾಪ ಮಾಸ್ತರ ಮಂದೀದಾದ್ರೂ ತಪ್ಪು ಏನು ಬಿಡ್ರಿ. ಕೊಡೂ ಸಂಬಳ ಹೊಟ್ಟೀಗ ಸಾಕಾಗೂದಿಲ್ಲ. ಅದರಾಗೂ ಮಾಸ್ತರ ಮಂದೀಗ ಮಕ್ಕಳ ಭ್ಯಾಳ. ಒಂದ ಸಾಲೀ ಮಾಡುವಷ್ಟು ಮಕ್ಕಳ ಅವರ ಮನ್ಯಾಗs ಇರ್ತಾವ. ಸಂಸಾರ ನಡೀಬೇಕಲ್ರಿ.... ಸಾಲೀಗ ಬಂದ ಹಾಲಿನ ಡಬ್ಬಿ, ರವಾ ಮಾರೂ ಮಾಸ್ತರ ಮಂದಿ ಸಾಲೀಗ ಬಂದ ಹುಡುಗರನ್ನೇ ಮಾರೂದಿಲ್ಲ ಅನ್ನೂದ ಒಂದು ಪುಣ್ಯ.

ಸತೀಶ : (ಮಮತಾಳ ಕೈಹಿಡಿದು ಒಳಗೆ ಕರಿದೊಯ್ಯುತ್ತ) ನಾಳೇ ಹಣ ಕೊಡ್ತೀನಿ.... ಬಾ.... ಊಟಕ್ಕೆ ಹೋಗೋಣ.

— ತೆರೆ —

Sri Vidyabharathi Book Centre, Sringeri

CC-O. In Public Domain. Digitized by eGangotri

ಕೊನೆಯ ದೃಶ್ಯ

(ಎಂಟು ದಿನಗಳ ಬಳಿಕ)

[ಕಿಟಕಿಯಿಂದ ಕಾಣುವ ಆ ಮರ ಜೀರ್ಣವಾಗಿ ನಿಂತಿದೆ. ಮನೆಯಲ್ಲಿ ಸ್ಮಶಾನಮೌನ. ಕೋಣೆಯಲ್ಲಿ ಮಂದಪ್ರಕಾಶ. ಒಂದೆಡೆ ಮಂಚ ಹಾಕಿದೆ. ಮಂಚದ ಮೇಲಿನ ಹಾಸಿಗೆಯಲ್ಲಿ ಶೀಲಾ ಮಲಗಿ ನರಳುತ್ತಿದ್ದಾಳೆ. ಮಂಚದ ಬಳಿಯ ತಿಪಾಯಿಯ ಮೇಲೆ ಬಗೆಬಗೆಯ ಔಷಧ ಬಾಟಲಿಗಳು ಇಡಲಾಗಿವೆ. ಒಂದು ಥರ್ಮಾಫ್ಲ್ಯಾಸ್ಕ ಇದೆ. ಡಾಕ್ಟರರು ಮಂಚದ ಬಳಿಯ ಕುರ್ಚಿಯಲ್ಲಿ ಕುಳಿತು ರೋಗಿಯನ್ನು ಪರೀಕ್ಷಿಸುತ್ತಿದ್ದಾರೆ. ಸತ್ಯಪ್ಪ, ಸತೀಶ ಬಾಡಿದ ಮುಖದಿಂದ ನಿಂತಿದ್ದಾರೆ. ಹಿನ್ನೆಲೆಯಲ್ಲಿ ಭೀಕರ ಸ್ವರತರಂಗಗಳು.]

ಡಾಕ್ಟರ : (ಬ್ಯಾಗಿನಲ್ಲಿ ಸ್ಟೆಥೋಸ್ಕೋಪ್ ಹಾಕಿ.... ಕನ್ನಡಕ ಸರಿಪಡಿಸಿ ಕೊಳ್ಳುತ್ತ ಮುಂದೆ ಬರುತ್ತ) ಜೀವಕ್ಕೆ ಅಪಾಯವಿಲ್ಲ.... ರೋಗಿಗೆ ವಿಷಾ ಕುಡಿಸಿದ್ರೂ ಸಾಯೂದಿಲ್ಲ. ನಾನು ತುಂಬಾ ಫ್ರ್ಯಾಂಕ ಆಗಿ ಹೇಳ್ತೀನಿ.... 'ಜಾತಸ್ಯ ಮರಣಂ ಧ್ರುವಂ' ಅಂದ್ರೆ ಏನು ? ....ಹುಟ್ಟಿ ದವರು ಸಾಯಲೇಬೇಕು. ಬೇಗ ಸಾಯಬೇಕಾದರೆ ಏನು ಮಾಡ ಬೇಕು ?

ಸತ್ಯ : ಸರಕಾರಿ ಆಸ್ಪತ್ರ್ಯಾಗ ಹಾಕಬೇಕು.

ಡಾಕ್ಟರ್ : ಸುಳ್ಳು.... ರೋಗಿಗೆ ಡಾಕ್ಟರರ ಬಿಲ್ ತೋರಿಸಬೇಕು. ಈ ಗುಟ್ಟು ನನಗೆ ಗೊತ್ತಿರೋದ್ರಿಂದ್ಲೇ ನಾನು ಫ್ರ್ಯಾಂಕ ಆಗಿ ಹೇಳ್ತೀನಿ. ರೋಗಿಗೆ ನಾನು ಬಿಲ್ ತೋರಿಸೋದಿಲ್ಲ.

ಸತ್ಯ : ತೋರಿಸಬ್ಯಾಡ್ರಿ.... ಆದರ ಈಗ ಅಕ್ಕಾ ಅವರ ಬ್ಯಾನಿ ಯಾವಾಗ ಕಡಿಮಿ ಆಗ್ತದ ಹೇಳರಿ.

ಡಾಕ್ಟರ್ : ಹಾಗೆ ಹೇಳೋಕೆ ನಾನೇನು ಜೋತಿಷಿಯೇ ? ಈಗ ಎಂಟು ಹತ್ತು ದಿನದಿಂದ ನಾನು ಏನು ಮಾಡ್ತಾ ಇದ್ದೀನಿ ?

ಸತ್ಯ : ಅಕ್ಕಾ ಅವರ ತಪಾಸಣಿ ಮಾಡಿ ಫೀ ತಗೋಳ್ತಾ ಆದೀರಿ. ಬ್ಯಾನಿ ಕಡಿಮಿ ಆಗಿಲ್ಲ.... ಆದ್ರ ಫೀ ಜಾಸ್ತಿ ಆಗ್ಯೇದ.

Sri Vidyabharathi Book Centre, Sringeri

CC-O. In Public Domain. Digitized by eGangotri

ಡಾಕ್ಟರ್ : ಅದೇ ಗುಟ್ಟು. ನಾನು ಫ್ರ್ಯಾಂಕ ಆಗಿ ಹೇಳ್ತೀನಿ. ನಾನು ದಿನಕ್ಕೊಂದು ಪ್ರಯೋಗ ನಡೆಸಿದ್ದೀನಿ. ಈವತ್ತಲ್ಲ ನಾಳೆ ಅದು ಗುಣವಾಗಲೇ ಬೇಕು. ನಾನು ಫ್ರ್ಯಾಂಕ ಆಗಿ ಹೇಳ್ತೀನಿ. ಗುಣ ಮಾಡದಿದ್ರೆ ನಾನು ಡಾಕ್ಟರ್ ಧನ್ವಂತರಿಯೇ ಅಲ್ಲ.

ಸತೀಶ : ಏನಾದ್ರೂ ಮಾಡಿ ಬೇಗ ಗುಣಪಡಿಸಿ ಡಾಕ್ಟರ್.

ಡಾಕ್ಟರ್ : ನೀವು ಫೀ ಕೊಡದೇ ಇದ್ರೆ ಅದು ಗುಣವಾಗುತ್ತೇನ್ರಿ ಬೇಗ. ಕಾಂಚನಂ ಕಾರ್ಯಸಿದ್ಧಿ ಅಂತ ಕೇಳಿಲ್ಲೇನ್ರಿ ?

ಸತೀಶ : ಈ ಹೊತ್ತು ನನ್ನ ಕೇಸಿನ ತೀರ್ಪು ಬರುತ್ತೆ. ನನಗೆ ಖಂಡಿತ ನಾಗಿಯೂ ಜಯವಾಗುತ್ತೆ. ಇನ್ನೊಂದೆಂಟು ದಿನಗಳಲ್ಲಿ ನಿಮ್ಮ ಪೂರ್ತಿ ಹಣ ಒಂದೇ ಗಂಟ್ನಲ್ಲಿ ಕೊಟ್ಟುಬಿಡ್ತೀನಿ.

ಡಾಕ್ಟರ್ : ಹಾಗೇ ಮಾಡಿ. ಅಲ್ಲೀವರ್ಗೂ ಪೇಶಂಟ ಸಾಯೋದಿಲ್ಲ ಅಂತ ಗ್ಯಾರಂಟಿ ನಾನು ಕೊಡ್ತೀನಿ. ನಾನು ಫ್ರ್ಯಾಂಕ ಆಗಿ ಹೇಳ್ತೀನಿ. ನನಗೂ ಗೊತ್ತು 'ದಯವೇ ಧರ್ಮದ ಮೂಲವಯ್ಯ' ಅಂತ.

ಸತೀಶ : ನೀವು ಕೊಂಚ ನಿಗಾ ತಗೊಂಡು ನನ್ನನ್ನು ಕಾಪಾಡಬೇಕು ಡಾಕ್ಟರ್. ನಿಮ್ಮ ಹಣ ನಾನು ಉಳಿಸಿಕೊಳ್ಳೋಲ್ಲ. ಅಂದಹಾಗೆ 'X' ರೇ ರಿಪೋರ್ಟ ಬಂತೇ ?

ಡಾಕ್ಟರ್ : (ತಕ್ಷಣ ಬ್ಯಾಗ್‌ನಿಂದ ಒಂದು ಫಿಲ್ಮ ಹೊರತೆಗೆದು, ಬೆಳಕಿಗೆ ಹಿಡಿದು ಬೆರಳಿನಿಂದ ತೋರಿಸುತ್ತ) ಇಲ್ಲಿ ಏನು ಕಾಣುತ್ತೆ ?

(ಸತ್ಯ–ಸತೀಶ ಕುತೂಹಲದಿಂದ ನೋಡುವರು.)

ಸತ್ಯ : ಏನೂ ಕಾಣೂದಿಲ್ಲ ಬಿಡ್ರಿ.

ಡಾಕ್ಟರ್ : ಹೌದು ನಿಮಗೆ ಅದು ತಿಳಿಯುವುದಿಲ್ಲ. ನಾನು ಫ್ರ್ಯಾಂಕ ಆಗಿ ಹೇಳ್ತೀನಿ. ಇಲ್ಲಿ ನೋಡಿ (ಬೆರಳಿನಿಂದ ತೋರಿಸಿ) ಇದು ರಕ್ತ, ಇದು ಮಾಂಸ, ಇದು ಮೂಳೆ. ಇಲ್ನೋಡಿ ರಕ್ತದಲ್ಲಿ ಹೇಗೆ ಕಾಣುತ್ತೆ. ಆದ್ದರಿಂದ ಇದೇನು ಮಹಾರೋಗ ಅಲ್ಲ. ರಕ್ತ ಕ್ಷಯ ಅಷ್ಟೇ.

ಸತೀಶ : (ಗಾಬರಿಯಾಗಿ) ಏನು Blood T. B. ನಾ ?

ಡಾಕ್ಟರ್ : ಗಾಬರಿಯಾಗಬೇಡಿ. ನಾನು frank ಆಗಿ ಹೇಳ್ತೀನಿ. ಇದರಿಂದ ರೋಗಿಗೆ ಅಪಾಯವಿಲ್ಲ. ರೋಗಿ ಸಾಯೋದಿಲ್ಲ. ಆದರೆ ಸತ್ತಹಾಗೇ ಬದುಕಿರ್ತಾನೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಸತ್ಯ : ಮುಂದ ಏನ್ ಮಾಡ್ಬೇಕ ಹೇಳರಿ.

ಡಾಕ್ಟರ್ : ಮೈಸೂರ ಸ್ಯಾನಿಟೋರಿಯಂ ಅಥವಾ ಮುಂಬಯಿಗೆ ಕಳಿಸಬೇಕು. ನಾನೇ ಬೇಕಾದ್ರೆ ಇಲ್ಲಿ ಗುಣಮಾಡಬಲ್ಲೆ.... ಆದ್ರೆ ಫೀ ಜಾಸ್ತಿಯಾಗುತ್ತೆ. ಉದ್ರಿಗಿದ್ರಿ ನಡೆಯೋಲ್ಲ.

ಸತೀಶ : ನಿಜವಾಗಿಯೂ ಇದು ರಕ್ತಕ್ಷಯವೇ ?

ಡಾಕ್ಟರ್ : ನಾನು ಯಾಕೆ ಸುಳ್ಳು ಹೇಳಲಿ ? ನಾನು frank ಆಗಿ ಹೇಳ್ತೀನಿ. 'X' Ray ತೆಗೆದ ಡಾ. ಮೊದಲಿಯಾರರೇ ಹೇಳಿದ್ದಾರೆ. ಇದು ರಕ್ತಕ್ಷಯ. Third Stageನಲ್ಲಿದೇಂತ.

ಸತೀಶ : ಮುಂದೇನು ಮಾಡುವುದು ?

ಡಾಕ್ಟರ್ : ಆದಷ್ಟು ಬೇಗ ನನ್ನ ಬಿಲ್ ಕ್ಲಿಯರ್ ಮಾಡಿ ಮೈಸೂರಿಗೆ ಕರೆದುಕೊಂಡು ಹೋಗಿಬಿಡಿ.

ಸತೀಶ : ನಿಮಗೆ ಅಲ್ಲಿ ಡಾಕ್ಟರರು ಯಾರಾದ್ರೂ ಪರಿಚಯ ಇದೆಯೇ ?

ಡಾಕ್ಟರ್ : ಪರಿಚಯ ಯಾಕೆ ಬೇಕು ? ಮಾಮೂಲು ಕೊಡಿ. ನಾನೇ ಬಂದು ಸೇರಿಸಿಕೊಡ್ತೀನಿ.

ಸತೀಶ : ನಾನು ಮಾಮೂಲು ಯಾರಿಗೂ ಕೊಡೋದಿಲ್ಲ. ನಾನೂ ತಗೋಳ್ಳೋದಿಲ್ಲ. ಇದು ನನ್ನ ಪ್ರಿನ್ಸಿಪಲ್.

ಡಾಕ್ಟರ್ : ನೀವು ನಿಮ್ಮ ಪ್ರಿನ್ಸಿಪಲ್ ಕಾದುಕೊಂಡು ಕುಳಿತುಕೊಳ್ಳಿ. ನನಗೂ ನನ್ನ ಪ್ರಿನ್ಸಿಪಲ್ ಇದೆ. ನಾನು ಫ್ರ್ಯಾಂಕ ಆಗಿ ಹೇಳ್ತೀನಿಂದ ಸಿಟ್ಟು ಮಾಡಬೇಡಿ. ದುಡ್ಡು ಮಾಡೋದೇ ನನ್ನ ಪ್ರಿನ್ಸಿಪಲ್. (ಎಂದು ಕೈಯಲ್ಲಿ ಬ್ಯಾಗ ತೆಗೆದ್ಕೊಂಡು ಸರಸರ ಹೊರಟುಹೋಗುವ)

ಸತೀಶ: ಡಾಕ್ಟರ್.... ಡಾಕ್ಟರ್ (ಅವನು ಹೋದ ದಾರಿಯಲ್ಲಿಯೇ ಕಣ್ಣಿಟ್ಟು ನೋಡುತ್ತಿರುತ್ತಾನೆ.)

ಸತ್ಯ : ಹಿಂಗ ಅದ ನೋಡಿರಿ ಜಗತ್ತು. ದುಡ್ಡಿಲ್ಲದವ್ಯಾಗ ಈ ಜಗತ್ತಿನಾಗ ಯಾರಿಗೂ ಕಿಮ್ಮತ್ತಿಲ್ಲ.

ಸತೀಶ : (ತಲೆ ಹಿಡಿದು ಕುರ್ಚಿಯಲ್ಲಿ ಕುಸಿಯುತ್ತ) ಮುಂದೇನು ಮಾಡುವುದು ?

ಸತ್ಯ : ದೇವರು ಮನಷ್ಯಾನ ಪರೀಕ್ಷೆ ಹಿಂಗ ಮಾಡ್ತಾನ. ಮಾಡಲಿ ಬಿಡ್ರಿ. ಹುಟ್ಟಿಸಿದ ದೇವರು ಹುಲ್ಲು ಮೇಯಿಸೂದಿಲ್ಲ ಅಂತ ಗಾದೀ ಮಾತ ಅದ.

Sri Vidyabharathi Book Centre, Sringeri

CC-O. In Public Domain. Digitized by eGangotri

ಸತೀಶ : ಇವಳನ್ನು ಮೈಸೂರಿಗೆ ಕರೆದುಕೊಂಡು ಹೋಗೋ ಬಗೆ ಹೇಗೆ ?

ಸತ್ಯ : ಈ ದಡ್ಡ ಡಾಕ್ಟರ ಹೇಳಿದ್ದು ಖರೇ ಅಂತ ನಂಬಬ್ಯಾಡ್ರಿ. ಮತ್ತ ಬ್ಯಾರೆ ಡಾಕ್ಟರರಿಗೆ ತೋರಿಸಿ ಖಾತ್ರಿ ಮಾಡಿಕೋಬೇಕರಿ.

ಸತೀಶ : ಇಲ್ಲ ಸತ್ಯಪ್ಪ.... ಡಾ. ಮೊದಲಿಯಾರರೇ ಹೇಳಿದ್ಮೇಲೆ ಅದು ರಕ್ತಕ್ಷಯ ಅನ್ನುವದರಲ್ಲಿ ಸಂಶಯವಿಲ್ಲ.

ಸತ್ಯ : ಹಂಗಾರ ಅಕ್ಕಾವರಿಗೆ ಮೈಸೂರಿಗೆ ಕಳಿಸೋಣು. ಯಾರ ಹತ್ತಿರ ಭಿಕ್ಷಾ ಬೇಡಿ ಆದರೂ ನಾನು ದುಡ್ಡು ತಂದುಕೊಡ್ತೀನಿ.

ಸತೀಶ : ಛೀ.... ಛೀ.... ಪಾಪ ನಿನಗೇಕೆ ತೊಂದರೆ. ಈ ಕಷ್ಟಕಾಲದಲ್ಲಿ ನೀನು ನಮ್ಮೊಂದಿಗೇ ಇರೋದೇ ಒಂದು ದೊಡ್ಡ ಉಪಕಾರ. ನೀನು ಎಲ್ಲೂ ಸಾಲ ಮಾಡಬೇಡ. ಸುಪ್ರೀಂ ಕೋರ್ಟಿನ ತೀರ್ಪು ಇಂದು ಆಗುತ್ತೆ. ನಾಳೆ ಯಾರ ಹತ್ತಿರ ಸಾಲ ಕೇಳಿದರೂ ಸಿಕ್ಕುತ್ತೆ. ನಾಳೆ ನಂಜಣ್ಣನಿಗೆ ತಕ್ಕ ಶಾಸ್ತಿ ಆಗುತ್ತೆ. ನ್ಯಾಯದೇವತೆ ನನಗೆ ಅನ್ಯಾಯ ಮಾಡೋಲ್ಲ ಅಂತ ನಂಬಿಕೆ ನನಗಿದೆ.

ಸತ್ಯ : ಆದರೂ ಹೇಳಾಕ ಬರೂದಿಲ್ಲರಪ. ದಿಲ್ಲ್ಯಾಗ ಏನ ನಡದದ ನೋಡೀರಲ್ಲ. ನ್ಯಾಯದಾನ ಮಾಡೂ ನ್ಯಾಯಾಧೀಶರಿಗೇ ಅನ್ಯಾಯ ಮಾಡಾಕ ಹತ್ತ್ಯಾರ. ಇನ್ನ ನಮ್ಮ ನಿಮ್ಮ ಪಾಡ ಏನ ಬಿಡ್ರಿ. ರಾಜಕಾರಣಿ ಮುಂದೀ ಕೈಯಾಗ ನ್ಯಾಯದೇವತೆ ಸಿಕ್ಕುಬಿದ್ದು ಒದ್ದಾಡ್ತಾಳ.

ಸತೀಶ : ಅದೂ ನಿಜವೇ.... ನೀ ಕೊಂಚ Post Office ಕಡೆಗೆ ಹೋಗಿ ಬಾ.... ಬರೋವಾಗ ಒಂದು ಪೇಪರ ತಗೊಂಡು ಬಾ.

ಸತ್ಯ : ಹೂಂ.... ರೀ.... ಅಕ್ಕಾವರಿಗೆ ಔಷಧಿ ಕುಡಿಸೂ ಹೊತ್ತಾಯ್ತು. ಕುಡಿಸಿಬಿಡ್ರಿ. ನಾ ಲಗೂನ ಬರ್ತೀನಿ. (ಎಂದು ಹೋಗುವನು.)

[ಸತೀಶ ಶೀಲಾಳ ಬಳಿ ಹೋಗಿ ಶಿಪಾಯಿಯು ಮೇಲಿಟ್ಟ ಒಂದು ಔಷಧಿ ಗ್ಲಾಸಿನಲ್ಲಿ ಬೆರೆಯಿಸಿ ಕುಡಿಸುವನು. (ಹಿನ್ನೆಲೆಯಲ್ಲಿ ನಾದತರಂಗ.) ಹೊರ ಗಡೆಯಿಂದ ಒಂದು ವ್ಯಕ್ತಿ 'Telegramme' ಎಂದು ಕೂಗುತ್ತ ಪ್ರವೇಶ. ಸತೀಶ ಸಹಿ ಹಾಕಿ ತಂತಿಯನ್ನು ಬಿಚ್ಚಿ ಓದುವಾಗ ಅವನ ಮುಖದಲ್ಲಿ ಕಪ್ಪಡರುತ್ತದೆ. ಕೈಕಾಲುಗಳು ಕಂಪಿಸಲಾರಂಭಿಸುತ್ತವೆ.]

Sri Vidyabharathi Book Centre, Sringeri

CC-O. In Public Domain. Digitized by eGangotri

ಸತೀಶ : No.... No.... Impossible....ನನಗೆ ಅನ್ಯಾಯ ? ನಾನು ಇಟ್ಟುಕೊಂಡು ಬಂದ ನೀತಿ-ನಿಯತ್ತುಗಳಿಗೆ ಅಪಜಯವೇ? ಸಾಧ್ಯವಿಲ್ಲ. ಎಂದೆಂದಿಗೂ ಸಾಧ್ಯವಿಲ್ಲ. ನನಗೇ ಸೋಲಾದರೆ ಈ ಜಗತ್ತಿನಲ್ಲಿ ಸತ್ಯ–ನ್ಯಾಯಗಳಿಗೆ ಬೆಲೆಯಿಲ್ಲವೆಂಬುದು ನಿಶ್ಚಯವಾದೀತು. (ಯೋಚಿಸಿ) ಯಾರೋ ಆಗದವರು ಈ ತಂತಿ ಕಳಿಸಿರಬೇಕು.

ನಕುಲ : (ಪ್ರವೇಶಿಸುತ್ತ) ಈಗಾದ್ರೂ ಗೊತ್ತಾಯ್ತಾ ನಿಮ್ಮ ಒಣ ಜಂಬದ ಪರಿಣಾಮ. ನಾನು ಆ ಹೊತ್ತೇ ಹೇಳಿದೆ.... ನಂಜಣ್ಣನವರ ದ್ವೇಷ ಕಟ್ಟಿಕೊಳ್ಳಬೇಡಿ ಅಂತ. ನಾಳೆ ಬರ್ತಾರೆ ಪೋಲಿಸರು ನಿಮ್ಮ ಕೈಗೆ ಕೋಳ ತೊಡಿಸೋಕ್ಕೆ....ಐದು ವರ್ಷ ಜೈಲು ತಪ್ಪಿದ್ದಲ್ಲ.

ಸತೀಶ : ದೊಡ್ಡಕೆ ಮಾತಾಡಬೇಡಿ Please ನೀವು ಮಾಡಿದ ಈ ಉಪಕಾರಕ್ಕೆ ಧನ್ಯವಾದಗಳು. ನನ್ನ ಹೆಂಡತಿ ಸೀರಿಯಸ್ ಕಾಯಿಲೆ ಬಿದ್ದಿದ್ದಾಳೆ.

ನಕುಲ : ಮಾಡಿದ್ದುಣ್ಣೋ ಮಹಾರಾಯ ಅಂತ ಗೊತ್ತಿಲ್ವೆ? ಆ ದಿನ ಹೇಳಿದ್ರೆ ನೀವು ನನ್ನ ಮಾತು ಕೇಳಲಿಲ್ಲ. ನ್ಯಾಯ–ನಿಯತ್ತು ಧರ್ಮ–ಕರ್ಮ ಅಂತ ಏನೇನೋ ಬಾಲಿಶವಾಗಿ ಹೇಳಿದ್ರಿ. ಈಗ ಯಾರು ಬಂದು ಕಾಪಾಡ್ತಾರೆ ನೀವೇ ಹೇಳಿ.

ಸತೀಶ : ಸುಪ್ರೀಂ ಕೋರ್ಟಿನಲ್ಲೂ ನಾನೇ ಅಪರಾಧಿಯಂತ ಸಾಬೀತು ಆಗಿದ್ದು ನನಗಿನ್ನೂ ನಂಬಿಕೆ ಹುಟ್ತಾ ಇಲ್ಲ. ನೀವೇ ಹೇಳಿ ನಾನು ಲಂಚ ಮುಟ್ಟಿದ್ದೇನೆಯೆ ?

ನಕುಲ : ಈಗ ಯಾರು ಏನು ಹೇಳಿದ್ರೂ ಆಗೋಲ್ಲ. ನಿಮಗೆ ಜೈಲು ನಿಶ್ಚಿತ.

ಸತೀಶ : ದಯಮಾಡಿ.... ಈ ಮಾತು ಯಾರಿಗೂ ಹೇಳಬೇಡಿ. ಗೊತ್ತಾದ್ರೆ ಸಾಲಗಾರರು ಬಂದು ಬಿಡ್ತಾರೆ.

ನಕುಲ : ಗೊತ್ತಾಗೋದೇನ್ಬಂತು.... ನಾನೇ ಬರೋವಾಗ ಎಲ್ರಿಗೂ ಹೇಳಿ ಬಂದಿದ್ದೀನಿ.

ಸತೀಶ : (ದೈನ್ಯದಿಂದ) ನಾನು ಏನು ಅಂಥ ಅಪರಾಧ ಮಾಡಿದ್ದೀನಿ. ನನಗೆ ಯಾಕೆ ಹೀಗೆ ಪೀಡಿಸುತ್ತಿದ್ದೀರ ?

Sri Vidyabharathi Book Centre, Sringeri

CC-O. In Public Domain. Digitized by eGangotri

ನಕುಲ : ನಾನೇನು ಮಾಡ಼್್ಲಿ ಹೇಳಿ.... ನಂಜಣ್ಣನವರ ಅನ್ನ ಉಣ್ತಾ ಇದ್ದೀನಿ. ಉಂಡ ಮನೆಗೆ ಎರಡು ಬಗೆಯಲೆ? ಅವರು ಹೇಳಿದ ಕೆಲಸ ಮಾಡಲೇಬೇಕಲ್ಲ. ಇದರಲ್ಲಿ ನನ್ನ ತಪ್ಪೇನು?

ಸತೀಶ : ನಿಮ್ಮ ನಿಯತ್ತು ತಪ್ಪಲ್ಲ. ವಿಶ್ವಾಮಿತ್ರನ ಬಳಿ ನಕ್ಷತ್ರಿಕ ಇದ್ದ ಹಾಗೆ ನೀವು. ಮಾಡಿ ಏನು ಬೇಕಾದ್ರೂ ಮಾಡಿ ನಾನು ಜೈಲಿಗೆ ಹೋದರೂ ಸರಿ.... ಅನ್ಯಾಯಕ್ಕೆ ಎಂದೆಂದಿಗೂ ತಲೆ ಬಗ್ಗಿಸಲಾರೆ.

ನಕುಲ : ಬಗ್ಗಿಸಬೇಡಿ.... ಪಾಪ, ನೀವು ಸತ್ಯ ಹರಿಶ್ಚಂದ್ರನ ಕಾಲದಲ್ಲಿ ಹುಟ್ಟ ಬೇಕಿತ್ತು. ಇದು ನಿಮಗೆ wrong place.

ಸತೀಶ : ನಾನು ಮುರಿದು ಹೋದರೂ ಸರಿ, ಆದರೆ ಮಣಿಯಲಾರೆ. ಈ ಮಾತು ನಂಜಣ್ಣನಿಗೆ ಇನ್ನೊಮ್ಮೆ ಹೇಳಿ.

ನಕುಲ : ಯಾರು, ಯಾರಿಗೂ, ಏನೂ ಹೇಳಬೇಕಾಗಿಲ್ಲ.... ಎಲ್ಲಾ ಫೈಸಲಾಗಿ ಬಿಟ್ಟಿದೆ. ನಾಳೆ ನೀವು ಜೈಲಿಗೆ ಹೋಗ್ತಿದೀರ.... Good bye ಹೇಳೋಣಾಂತ ಬಂದೆ.

ಸತೀಶ : Many.... Many.... Thanks.

(ಅಷ್ಟರಲ್ಲಿ ಸಿದ್ದಪ್ಪ ಬರುವನು.)

ಸಿದ್ದಪ್ಪ : ಏನ್ರಿ— ನಿಮಗ ಜೈಲ ಆತಂತಲ್ರೀ.... ನಮ್ಮ ದುಡ್ಡಿನ ಗತಿ ಯೇನ್ರಿ?

ಶೀನಪ್ಪ : (ಪ್ರವೇಶಿಸುತ್ತ) ನಮ್ಮ ಬಾಡಿಗೆ ಹೇಗೆ ಕೊಡ್ತೀರಿ ಶ್ರೀಹರೀ. ನಿಮಗೆ ಮಾರಿದ್ರೂ ನಮ್ಮ ಬಾಡಿಗೆ ಹಣ ಹುಟ್ಟೋಲ್ಲ. ಏನು ಮಾಡೋದು.... ಸದ್ಗುರೂ.... (ಮೇಲೆ ನೋಡಿ ಕೈಜೋಡಿಸುವ.)

ಅಲಮಟ್ಟಿ (ಧಾವಿಸಿ ಬರುತ್ತ) ನನ್ನ ಸಾಮಾನಿನ ಗತಿಯೇನು ದೇವರೂ.

ಸತೀಶ : ನೀವು ಯಾರೂ ಗಾಬರಿಯಾಗುವ ಕಾರಣವಿಲ್ಲ. ನಾನು ಮಾಡಿದ ಸಾಲ ನನಗೆ ತೀರಿಸುವ ತಾಕತ್ತು ಇದೆ. ನಿಮ್ಮ ಋಣದಲ್ಲಿ ಬಿದ್ದು ಹೋಗುವುದಿಲ್ಲ... ನೀವು ಮಾಡಿದ ಉಪಕಾರಕ್ಕೆ ಅಪಕಾರ ಮಾಡು ವಷ್ಟು ಕೃತಘ್ನ ನಾನಲ್ಲ.

ಅಲಮಟ್ಟಿ : ಈ ಮಾತು ಎಲ್ರೂ ಹೇಳ್ತಾರೆ. ಹೀಗೆ ಹೇಳಿ ರಾತ್ರೋರಾತ್ರಿ ಹೇಳದೇ ಕೇಳದೇ ಓಡಿ ಹೋದವರೂ ಇದ್ದಾರೆ.

ಸತೀಶ : ಇರಬಹುದು. ಆದರೆ ನಾನು ಅಂಥವನಲ್ಲ. ನೀವು ನನಗೆ ಕಷ್ಟ

Sri Vidyabharathi Book Centre, Sringeri

CC-O. In Public Domain. Digitized by eGangotri

ಕಾಲದಲ್ಲಿ ಸಹಾಯ ಮಾಡಿದ್ದೀರಿ. ನಿಮಗೆ ಮೋಸ ಮಾಡಿದರೆ ದೇವರು ಮೆಚ್ಚುವನೆ?

ಅಲಮಟ್ಟಿ : ನೀವು ಗೋವಿನ ಕಥೆ ಹಾಡು ಬಾಯಿಪಾಠ ಮಾಡಿದ್ದು ನಿಮಗಿನ್ನೂ ಮರೆತು ಹೋಗಿಲ್ಲ ಅಂತ ಕಾಣುತ್ತೆ. ಅದೆಲ್ಲ ನನ್ನ ಹತ್ರ ನಡೆಯೋಲ್ಲ. ನಿಮ್ಮ ಹತ್ರ ಏನೇನಿದೆ ಎಲ್ಲಾ ನನಗೇ ಕೊಟ್ಬಿಬಿಡಿ. ನಿಮ್ಮ ಸಾಲಕ್ಕೆ ಜಮಾ ಹಾಕಿಕೊಳ್ತೀನಿ.

ಶೀನಪ್ಪ : ಸದ್ಗುರೂ....ಶ್ರೀಹರೀ ಅಂದ್ರೆ... ಎಲ್ಲಾ ನಿಮಗೆ ಕೊಟ್ರೆ ನಾವೇನು ಬಾಯಿಯಲ್ಲಿ ಮಣ್ಣು ಹಾಕಿಕೊಳ್ಳಬೇಕೆ ?

ಸಿದ್ದಪ್ಪ : ದೇವರು ನುಡದ್ಹಂಗ ನುಡಿದ್ರಿ ನಮ್ಮದೇನು ಪುಗಸಟ್ಟೆ ರಖಂ ಏನ್ರಿ?

ಅಲಮಟ್ಟಿ : ಹಂಗಾದ್ರೆ ಬರ್ರಿ Police Stationಗೆ ಹೋಗೋಣ.

ಸಿದ್ದಪ್ಪ : ಯಾಕ್ರಿ....ಪೋಲಿಸ ಸ್ಟೇಷನ್‌ಗ ಬರಾಕ ನಾವೇನ ಕಳವ ಮಾಡೇವೇನ್ರಿ ?

ಶೀನಪ್ಪ : ಸದ್ಗುರೂ.... ನೀನೇ ಬೇಕಾರೆ ಹೋಗು ಪೋಲಿಸ ಸ್ಟೇಶನ್‌ಗೆ ಇಲ್ಲಾದ್ರೆ ರೇಲ್ವೆ ಸ್ಟೇಷನ್‌ಗೆ.... ನಾವು ಬರೋದಿಲ್ಲ. ಶ್ರೀಹರೀ.

ಸತೀಶ : ನೀವು ಹೀಗೆ ಕಚ್ಚಾಡುವ ಕಾರಣವಿಲ್ಲ. ನಾನು ಯಾರಿಗೂ ಮೋಸ ಮಾಡೋಲ್ಲ. ನಾಳೆ ಬೆಳಿಗ್ಗೆ ಬಂದು ನಿಮ್ಮ-ನಿಮ್ಮ ಹಣ ತಗೊಂಡು ಹೋಗಿಬಿಡಿ.

ಅಲಮಟ್ಟಿ : ಹಾಂಗ ಅನ್ನಾಕ ಬ್ಯಾಂಕನಾಗ ಗಂಟ ಇಟ್ಟೀರೇನ್ರಿ?

ಸತೀಶ : ಅದು ಏನೇ ಇರಲಿ, ನಾಳೆ ಕೊಡದಿದ್ರೆ ನೀವು ಬೇಕಾರೆ ಪೋಲಿಸರನ್ನ ಕೆರೆದುಕೊಂಡು ಬರಬಹುದು.

ನಕುಲ : ಪೋಲಿಸರನ್ನು ಅವರೇಕೆ ಕರೆದುಕೊಂಡು ಬರಬೇಕು....ಪೋಲಿಸರೇ ನಿಮ್ಮನ್ನು ಹುಡುಕಿಕೊಂಡು ಬರ್ತಾರೆ.

ಸತೀಶ : ಬರಲಿ ಇಂಥದಕ್ಕೆಲ್ಲ ಎದೆಗುಂದುವ ವ್ಯಕ್ತಿ ನಾನಲ್ಲ.

ನಕುಲ : ಹೌದು....ಇಂಥ ಒಣ ಸೊಕ್ಕಿನಿಂದ್ಲೇ ನೀವು ಹಾಳಾದದ್ದು.

ಸತೀಶ : ಆಗಲಿ....ಆ ಬಗ್ಗೆ ನಾನು ದುಃಖಿಸುವುದಿಲ್ಲ. ನಿಮಗೇನು ಕೆಲಸ ಇಲ್ಲಿ....Get out !!

ನಕುಲ : ಹೋಗ್ತೀನಿ....ಆದರೆ ನಾಳೆ ನಾನೇ Policeರನ್ನು ಕರೆದುಕೊಂಡು

Sri Vidyabharathi Book Centre, Sringeri